ಕರ್ನಾಟಕ ವಿಧಾನಸಭೆ
ಸೋಮವಾರ 5ನೇ ಜೂನ್ 2006 ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10 ಗಂಟೆ 20ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಸಂತಾಪ ಸೂಚನೆಗಳು

ಮಾನ್ಯ ಸಭಾಧ್ಯಕ್ಷರು:

ಮಾನ್ಯ ಸಚಿವರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಮಾರ್ಗದ ಮಲ್ಲಪ್ಪ, ವಿಧಾನಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಎಸ್.ಪಿ. ತಲ್‌ವಾಲ್‌ಕರ್, ಶ್ರೀ ಎಸ್.ಡಿ. ಸಾಮ್ರಾಜ್ಯ, ಶ್ರೀ ಕೆ. ಹರ್ಷಕುಮಾರಗೌಡ, ಶ್ರೀ ಪಿ. ಮೂಡ್ಲೇಗೌಡ, ಶ್ರೀ ಕೆ.ಸಿ. ಮೊದಗೇಕರ್ ದೇಸಾಯಿ ಹಾಗೂ ಕರ್ನಾಟಕ ರತ್ನ, ಪದ್ಮಭೂಷಣ, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ ವರನಟ ಡಾ: ರಾಜಕುಮಾರ್ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಶ್ರೀ ಮಾರ್ಗದ ಮಲ್ಲಪ್ಪ

ಮಾಜಿ ಸಚಿವರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ. ಮಲ್ಲಪ್ಪ ಅವರು 1921ನೇ ನವೆಂಬರ್ 28ರಂದು ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ಬೀರೂರಿನಲ್ಲಿ ಜನಿಸಿದ್ದು, ವಕೀಲರಾಗಿದ್ದರು. ಸಮಾಜಸೇವೆಯಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ಬೀರೂರು ಪುರಸಭೆಯ ಅಧ್ಯಕ್ಷರಾಗಿ, ಕಡೂರು ಎಪಿಎಂಸಿಯ ಅಧ್ಯಕ್ಷರಾಗಿ, ಮೈಸೂರು ರಾಜ್ಯ ಸಹಕಾರ ಮಾರುಕಟ್ಟೆ ಮಂಡಳಿಯ ನಿರ್ದೇಶಕರಾಗಿ, ಮೈಸೂರು ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯಗಳ ಸೆನೆಟ್ ಸದಸ್ಯರಾಗಿ ಹಾಗೂ ಇನ್ನಿತರ ಹಲವಾರು ಸಂಘಸಂಸ್ಥೆಗಳ ಪದಾಧಿಕಾರಿಗಾಗಿ ಕಾರ್ಯನಿರ್ವಹಿಸಿದ್ದರು. 1968ರಲ್ಲಿ ಮೊದಲ ಬಾರಿಗೆ ವಿಧಾನಸಭೆಗೆ ಆಯ್ಕೆಯಾಗಿದ್ದ ಶ್ರೀಯುತರು ನಾಲ್ಕು, ಐದು ಹಾಗೂ ಆರನೇ ವಿಧಾನಸಭೆಗೆ ಬೀರೂರು ಕ್ಷೇತ್ರದಿಂದ ಚುನಾಯಿತರಾಗಿ ಹಾಗೂ ಸರ್ಕಾರಿ ಮುಖ್ಯ ಸಚೇತಕರಾಗಿ, ಶ್ರೀ ದೇವರಾಜ್ ಅರಸ್ ಹಾಗೂ ಶ್ರೀ ಆರ್. ಗುಂಡೂರಾವ್ ಅವರುಗಳ ಸಚಿವ ಸಂಪುಟದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಇಲಾಖಾ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 05.05.2006ರಂದು ನಿಧನ ಹೊಂದಿದರು.

2. ಶ್ರೀ ಎಸ್.ಬಿ. ತಲ್‌ವಾಲ್‌ಕರ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಸ್.ಬಿ. ತಲ್‌ವಾಲ್‌ಕರ್ ಅವರು 1925ರಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಜನಿಸಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಶ್ರೀಯುತರು ಮಹಾತ್ಮ ಗಾಂಧೀಜಿಯವರ ಕರೆಯಂತೆ "ಚಲೇಜಾವ್" ಚಳುವಳಿಯಲ್ಲಿ ಭಾಗವಹಿಸಿ, ಬಂಧನಕ್ಕೆ ಒಳಗಾಗಿದ್ದರು. ತುಳಿತಕ್ಕೊಳಗಾದ ಜನರ ಅಭಿವೃದ್ಧಿಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದ ಶ್ರೀಯುತರು ಎರಡನೇ ಮೈಸೂರು ವಿಧಾನಸಭೆಗೆ ರಾಯಭಾಗ್ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 07.04.2006ರಂದು ನಿಧನ ಹೊಂದಿದರು.

3. ಶ್ರೀ ಎಸ್.ಡಿ. ಸಾಮ್ರಾಜ್ಯ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಸ್.ಡಿ. ಸಾಮ್ರಾಜ್ಯ ಅವರು ದಕ್ಷಿಣ ಕನ್ನಡ ಜಿಲ್ಲೆಯ ಶಿರ್ತಾಡಿಯಲ್ಲಿ ಜನಿಸಿದ್ದು, ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಶಿರ್ತಾಡಿ ಗ್ರಾಮದಲ್ಲಿ ಕೈಗೊಂಡಿದ್ದ ಕಾರ್ಯಗಳನ್ನು ಗಮನಿಸಿದ್ದ ಅಂದಿನ ಮದರಾಸು ಸರ್ಕಾರ ಇವರಿಗೆ ಬಹುಮಾನವನ್ನು ನೀಡಿತ್ತಲ್ಲದೆ, ಪ್ರಧಾನ ಮಂತ್ರಿಗಳ ಅರ್ಹತಾ ಪ್ರಮಾಣ ಪತ್ರವನ್ನು ಪಡೆದಿದ್ದರು. ಗ್ರಾಮಪಂಚಾಯತ್ ಸದಸ್ಯರಾಗಿ, ಮದರಾಸು ಸೆನೆಟಿನ ಸದಸ್ಯರಾಗಿ, ಕಾರ್ಕಳ ರೈತ ಸಂಘದ ಅಧ್ಯಕ್ಷರಾಗಿ, ಕಾರ್ಕಳ ತಾಲ್ಲೂಕು ಮಂಡಳಿಯ ಉಪಾಧ್ಯಕ್ಷರಾಗಿ ಹಾಗೂ ಇನ್ನಿತರೆ ಹಲವಾರು ಸಂಘಸಂಸ್ಥೆಗಳ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಆಸ್ಪತ್ರೆಗಳು, ಶಾಲೆಗಳು, ಸೇತುವೆಗಳನ್ನು ನಿರ್ಮಿಸಿದ್ದರು ಹಾಗೂ ರೈಲ್ವೆ ಸಂಪರ್ಕವನ್ನು ಕಲ್ಪಿಸುವಲ್ಲಿ ನೆರವಾಗಿದ್ದರು. ಮಹಾತ್ಮಾ ಗಾಂಧಿಜಿಯವರ ಅನುಯಾಯಿಯಾಗಿದ್ದ ಶ್ರೀಯುತರು ಹಲವಾರು ರಾಷ್ಟ್ರೀಯ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಶ್ರೀಯುತರು ಬ್ರಹ್ಮಾವರ ಕ್ಷೇತ್ರದಿಂದ ಮೂರನೇ ಮೈಸೂರು ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 17.04.2006ರಂದು ನಿಧನ ಹೊಂದಿದರು.

4. ಶ್ರೀ ಕೆ. ಹರ್ಷಕುಮಾರಗೌಡ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ. ಹರ್ಷಕುಮಾರ್ ಗೌಡ ಅವರು 1947ನೇ ಜುಲೈ 15ರಂದು ಮೈಸೂರಿನಲ್ಲಿ ಜನಿಸಿದ್ದು, ವೃತ್ತಿಯಲ್ಲಿ ವ್ಯಾಪಾರಸ್ಥರು. ಕಾವೇರಿ ಚಳವಳಿ ಸೇರಿದಂತೆ ಅನೇಕ ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದ ಶ್ರೀಯುತರು ಹಲವಾರು ಸಂಘಸಂಸ್ಥೆಗಳ ಪದಾಧಿಕಾರಿಗಳಾಗಿಯೂ ಕಾರ್ಯನಿರ್ವಹಿಸಿದ್ದರು. 1989ರಲ್ಲಿ ಚಾಮರಾಜ ಕ್ಷೇತ್ರದಿಂದ ಒಂಬತ್ತನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 25.04.2006ರಂದು ನಿಧನ ಹೊಂದಿದರು.

5. ಶ್ರೀ ಪಿ. ಮೂಡ್ಲಿಗೌಡ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಪಿ. ಮೂಡ್ಲೇಗೌಡ ಅವರು 1928ನೇ ಮೇ 9ರಂದು ಶಿರಾ ತಾಲ್ಲೂಕು ಚಿರತೆಹಳ್ಳಿ ಗ್ರಾಮದಲ್ಲಿ ಜನಿಸಿದ್ದರು. ಸ್ವಾತಂತ್ರ್ಯ ಹೋರಾಟಗಳಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದ್ದ ಶ್ರೀಯುತರು ಸಹಕಾರ ರಂಗದಲ್ಲಿ ಆಸಕ್ತಿವಹಿಸಿ ಅದರ ಅಭಿವೃದ್ಧಿಗೆ ದುಡಿದಿದ್ದವರು. ತಾಲ್ಲುಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ ಹಾಗೂ ಉಪಾಧ್ಯಕ್ಷರಾಗಿ, ಸಹಕಾರ ಸಂಘದ ಸದಸ್ಯರಾಗಿ, ಎಪಿಎಂಸಿಯ ಅಧ್ಯಕ್ಷರಾಗಿ, ಕರ್ನಾಟಕ ಭೂ ಅಭಿವೃದ್ಧಿ ಬ್ಯಾಂಕಿನ ನಿರ್ದೇಶಕರಾಗಿ ಹಾಗೂ ಹಲವಾರು ಸಂಘಸಂಸ್ಥೆಗಳ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಏಳನೇ ವಿಧಾನಸಭೆಗೆ ಶಿರಾ ಕ್ಷೇತ್ರದಿಂದ ಚುನಾಯಿತರಾಗಿದ್ದರು ಹಾಗೂ ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 11.05.2006ರಂದು ನಿಧನ ಹೊಂದಿದರು.

6. ಶ್ರೀ ಕೆ.ಸಿ. ಮೊದಗೇಕರ್ ದೇಸಾಯಿ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ.ಸಿ. ಮೊದಗೇಕರ್ ದೇಸಾಯಿ ಅವರು 1941ನೇ ನವೆಂಬರ್ 7ರಂದು ಬೆಳಗಾವಿ ಜಿಲ್ಲೆಯಲ್ಲಿ ಜನಿಸಿದ್ದು ವೃತ್ತಿಯಲ್ಲಿ ವ್ಯಾಪಾರಸ್ಥರಾಗಿದ್ದರು. ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ ಶ್ರೀಯುತರು ನವದೆಹಲಿಯಲ್ಲಿರುವ ಅಖಿಲ ಭಾರತ ಮೋಟಾರು ಸಾಗಣೆ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದು, 1989ರಲ್ಲಿ ಬಾಗೇವಾಡಿ ಕ್ಷೇತ್ರದಿಂದ ಒಂಬತ್ತನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 05.05.2006ರಂದು ನಿಧನ ಹೊಂದಿದರು.

7. ಡಾ: ರಾಜ್‌ಕುಮಾರ್

ಕನ್ನಡ ಸಾಂಸ್ಕೃತಿಕ ಲೋಕದ ಧೃವತಾರೆ, ಕರ್ನಾಟಕ ರತ್ನ, ಪದ್ಮಭೂಷಣ, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ, ವರನಟ ಡಾ: ರಾಜ್‌ಕುಮಾರ್ ಅವರು1929ನೇ ಏಪ್ರಿಲ್ 24ರಂದು ಕೊಳ್ಳೇಗಾಲ ಸಮೀಪದ ಗಾಜನೂರಿನಲ್ಲಿ ಜನಿಸಿದ್ದರು. ಸರಳ ಹಾಗೂ ಸಜ್ಜನಿಕೆಗೆ ಹೆಸರಾಗಿ ಎಲ್ಲರಿಂದಲೂ ಅಕ್ಕರೆಯಿಂದ "ಅಣ್ಣಾವ್ರು" ಎಂದು ಕರೆಸುಕೊಳ್ಳುತ್ತಿದ್ದು ಸಿಂಗನಲ್ಲೂರು ಪುಟ್ಟಸ್ವಾಮಯ್ಯ ಮುತ್ತುರಾಜುರವರು ಕಳೆದ ಐದು ದಶಕಗಳಿಂದ ನಿರಂತರವಾಗಿ ಕನ್ನಡಿಗರ ಹೃದಯ ಸಾಮ್ರಾಜ್ಯದಲ್ಲಿ ಶಾಶ್ವತ ಸ್ಥಾನ ಪಡೆದಿದ್ದ ಕಲಾವಂತ, ವಿನಯವಂತರು. ಕನ್ನಡ ಭಾಷೆಯೇ ನನ್ನ ಉಸಿರು ಎಂದು ಕನ್ನಡ ನೆಲ, ಜಲ, ಭಾಷೆ ಮತ್ತು ನಾಡಿನ ಸಂಸ್ಕೃತಿಯ ಜನದನಿಯಾಗಿ, ಜನರ ಆಶೋತ್ತರಗಳ ಪ್ರತೀಕವಾಗಿ ಹೋರಾಟಕ್ಕೆ

ಚಾಲನೆಯನ್ನು ನೀಡಿದರು. ಎಂಬತ್ತರ ದಶಕದಲ್ಲಿ ಕನ್ನಡಿಗರಲ್ಲಿ ಹೋರಾಟದ ಕಿಚ್ಚು ಹಚ್ಚಿದ ಐತಿಹಾಸಿಕ ಗೋಕಾಕ್ ಚಳವಳಿಯಲ್ಲಿ ಅವರು ವಹಿಸಿದ ಪಾತ್ರ ಅತ್ಯಂತ ಮಹತ್ವದ್ದು. ನಂತರ ಈ ಚಳವಳಿ ಒಂದು ಆಂದೋಲನವಾಗಿ ರೂಪುಗೊಂಡಿದ್ದು ರಾಜ್‌ಕುಮಾರ್ ಅವರು ಹೋರಾಟದಲ್ಲಿ ಪ್ರವೇಶಿಸಿದ ನಂತರವೇ. ರಾಷ್ಟ್ರ ಹಾಗೂ ರಾಜ್ಯ ಭೂಕಂಪ, ನೆರೆ ಹಾವಳಿ, ಕ್ಷಾಮ, ಸುನಾಮಿ ಮುಂತಾದ ಅವಗಢಗಳಿಗೆ ತುತ್ತಾದಾಗಲೆಲ್ಲಾ ಸ್ವಯಂಪ್ರೇರಿತವಾಗಿ ಬೀದಿಗಳಿದು ಪಾದಯಾತ್ರೆ ಮುಖಾಂತರ ನಿಧಿ ಸಂಗ್ರಹಿಸಿ ಸಹಾಯ ಮಾಡುತ್ತಿದ್ದಂತಹ ದೇವತಾ ಮನುಷ್ಯ. ಅಭಿನಯ ಅವರಿಗೆ ಒಲಿದಿತ್ತು. ಅವರು ನಟಿಸಿದ ಎಲ್ಲಾ ಪಾತ್ರಗಳು ಒಂದು ಆದರ್ಶ ಅಥವಾ ಒಂದು ಉತ್ತಮ ಸಂದೇಶವನ್ನು ಪ್ರತಿಪಾದಿಸುತ್ತಿದ್ದವು. ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಕೌಟುಂಬಿಕ ಹಾಗೂ ಎಲ್ಲ ಪ್ರಕಾರಗಳ ಚಲನಚಿತ್ರಗಳಲ್ಲೂ ಡಾ: ರಾಜ್ ಅಭಿನಯಿಸಿ ಕನ್ನಡಿಗರ ಕಣ್ಮಣಿಯಾಗಿದ್ದರು. ಅಭಿನಯದ ಜೊತೆಗೆ ಉತ್ತಮ ಗಾಯಕರೂ ಆಗಿದ್ದರು. ಒಬ್ಬ ನಟರಾಗಿ, ವ್ಯಕ್ತಿಯಾಗಿ, ಚಲನಚಿತ್ರ ಉದ್ಯಮದ ಅವಿಭಾಜ್ಯ ಅಂಗವಾಗಿದ್ದರು. ಕನ್ನಡ ಚಿತ್ರರಂಗದ ಮೇರು ಪರ್ವತ ಡಾ: ರಾಜ್ ಕುಮಾರ್ ಕನ್ನಡ ಜಗತ್ತಿನಲ್ಲಿ ತಮ್ಮ ಅಭಿನಯ ಸಾಮರ್ಥ್ಯದಿಮದ ಒಂಬತ್ತು ಬಾರಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದ ಏಕೈಕ ವ್ಯಕ್ತಿ. ಸರ್ಕಾರ ಮೊಟ್ಟ ಮೊದಲ ಬಾರಿಗೆ 1967–68ರಲ್ಲಿ ಪ್ರಶಸ್ತಿ ನೀಡಲು ಪ್ರಾರಂಭಿಸಿದಾಗ "ಬಂಗಾರದ ಹೂವು" ಚಿತ್ರದಲ್ಲಿನ ಅಭಿನಯಕ್ಕಾಗಿ ಮೊದಲ ಬಾರಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದವರು. ಸಂತ ತುಕಾರಂ, ಚಂದವಳ್ಳಿಯ ತೋಟ ಹಾಗೂ ಸತ್ಯ ಹರಿಶ್ಚಂದ್ರ ಚಿತ್ರಗಳಲ್ಲಿನ ನಟನೆಗಾಗಿ ರಾಷ್ಟ್ರಪತಿಗಳ ಬೆಳ್ಳಿಪದಕವನ್ನು ಪಡೆದಿರುತ್ತಾರೆ. 1974ಎಲ್ಲಿ ರಾಜ್ಯೋತ್ಸವ ಪ್ರಶಸ್ತಿ, 1976ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್, 1982ರಲ್ಲಿ ಅಮೆರಿಕಾದ ಕೆಂಟಕಿ ಪ್ರಾಂತ್ಯದ ಆಡಳಿತ ನೀಡುವ "ಕೆಂಟಕಿ ಕರ್ನಲ್ ಪ್ರಶಸ್ತಿ", 1992ರಲ್ಲಿ ಜೀವನ ಚೈತ್ರ ಚಿತ್ರದ "ನಾದಮಯ ಈ ಲೋಕವೆಲ್ಲ" ಹಾಡಿಗಾಗಿ ಕೇಂದ್ರ ಸರ್ಕಾರದ ಶ್ರೇಷ್ಠ ಗಾಯಕ ಪ್ರಶಸ್ತಿ, ಕರ್ನಾಟಕ ಸರ್ಕಾರದಿಂದ ಕರ್ನಾಟಕ ರತ್ನ, ಭಾರತೀಯ ಚಿತ್ರರಂಗದ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಹಾಗೂ 1983ರಲ್ಲಿ ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿಯನ್ನು ಪಡೆದ ಅಪರೂಪದ ವ್ಯಕ್ತಿಗಳಲ್ಲೊಬ್ಬರು. ಡಾ: ರಾಜ್ ಅವರ ನಿಧನದಿಂದ ಕನ್ನಡದ ಒಂದು ಅಪೂರ್ವ ಯುಗ ಅಂತ್ಯವಾದಂತಾಗಿದೆ. ಅವರ ನೆನಪು ನಮ್ಮಲ್ಲಿ ಸದಾ ಜೀವಂತವಾಗಿರುತ್ತದೆ.

ಶ್ರೀಯುತರ ದಿನಾಂಕ 12.04.2006ರಂದು ನಿಧನ ಹೊಂದಿದರು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈ ಒಂದು ಸಂತಾಪ ಸೂಚನೆಗೆ ನಾನು ಧ್ವನಿಗೂಡಿಸುತ್ತಾ ಡಾ: ರಾಜ್‌ಕುಮಾರ್ ನಿಧನ ರಾಜ್ಯಕ್ಕೆ ತುಂಬಲಾರದ ನಷ್ಟವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅವರು ಒಬ್ಬ ಸಾಮಾನ್ಯ ಗ್ರಾಮೀಣ ಪ್ರದೇಶದ ಕುಟುಂಬದಲ್ಲಿ ಜನಿಸಿ ಪ್ರಥಮವಾಗಿ ರಂಗಕಲಾವಿದರಾಗಿ, ನಂತರ ಅವರು ಕನ್ನಡ ಚಿತ್ರರಂಗದ ಪ್ರಮುಖರಾಗಿ ಕನ್ನಡ ಭಾಷೆಯನ್ನು ಉತ್ತುಂಗಕ್ಕೆ ತೆಗೆದುಕೊಂಡು ಹೋದಂತಹ ಪ್ರಥಮ ಸಾಲಿನಲ್ಲಿ ನಿಲ್ಲತಕ್ಕಂಥ ಅಧ್ಭುತ ಮೇರು ನಟರೆಂದು ಹೇಳುವುದಕ್ಕೆ ಬಯಸುತ್ತೇನೆ. ಅವರ ಚಿತ್ರರಂಗದ ಸೇವೆಯನ್ನು ನಾವು ಈ ಸಂದರ್ಭದಲ್ಲಿ ನೆನೆಸಿಕೊಳ್ಳುವುದರ ಜೊತೆಗೆ ಅವರು ಕನ್ನಡ ಭಾಷೆ ಮತ್ತು ಕನ್ನಡ ಚಿತ್ರರಂಗದ ಸಮಸ್ಯೆಗಳು ಎದುರಾದಂತಹ ಸಂದರ್ಭದಲ್ಲಿ ಅವರು ಸಲ್ಲಿಸಿರುವಂತಹ ಸೇವೆ ಅದ್ಭುತವಾದುದು ಎಂದು ಹೇಳುವುದಕ್ಕೆ ಬಯಸುತ್ತೇನೆ. ಅವರು ಗೋಕಾಕ್ ಚಳುವಳಿಯ ಸಂದರ್ಭದಲ್ಲಿ ಮದ್ರಾಸಿನಲ್ಲಿ ವಾಸವಾಗಿರುವಂತಹ ಸಂದರ್ಭದಲ್ಲೂ ಗೋಕಾಕ್ ಚಳುವಳಿಗೆ ಸಂಪೂರ್ಣವಾದ ಸಹಕಾರವನ್ನು ಕೊಡುವುದರ ಜೊತೆಗೆ ಅವರೇ ಒಂದು ಗೋಕಾಕ್ ಚಳುವಳಿಯಲ್ಲಿ ಪಾತ್ರವನ್ನು ಏನು ನೇರವಾಗಿ ವಹಿಸುವುದರ ಮುಖಾಂತರ ಆ ಸಂದರ್ಭದಲ್ಲಿ ನಿಜವಾದಂತಹ ಹೋರಾಟಕ್ಕೆ ಪ್ರಮುಖವಾದಂತಹ ಅಸ್ತ್ರವಾಗಿ ಏನು ನಿಂತಿದ್ದರೋ ಈ ಸಂದರ್ಭದಲ್ಲಿ ಆ ಒಂದು ಹೋರಾಟವನ್ನು ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಅವರ ಒಂದು ಚಿತ್ರದ ಹಲವಾರು ಪಾತ್ರಗಳು ಏನಿದ್ದಾವೆ ಈ ಒಂದು ರಾಜ್ಯದಲ್ಲಿ ಆ ಒಂದು ಪಾತ್ರಗಳ ಮುಖಾಂತರ ಹಲವಾರು ಜನರು ಅವರ ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಆ ಒಂದು ಪಾತ್ರಗಳಲ್ಲಿ ಅವರ ಒಂದು ಪಾತ್ರಗಳಲ್ಲಿ ಅವರ ಒಂದು ನಟನಾಶೀಲತೆ ಏನಿತ್ತು, ಆ ಒಂದು ನಟನಾಶೀಲತೆಯ ಮುಖಾಂತರ ಅವರು ಹಲವಾರು ಜನರಿಗೆ ಏನು ಒಂದು ಮಾರ್ಗದರ್ಶಕರಾಗಿ ಅವರ ಚಿತ್ರಗಳಲ್ಲಿ ಒಂದು ಒಳ್ಳೆಯ ಸಂದೇಶಗಳನ್ನು ಏನು ನೀಡುತ್ತಿದ್ದರು ಅದರಲ್ಲೂ ವೈಯಕ್ತಿಕವಾಗಿ ಅವರು ನಟಿಸಿದ ಚಿತ್ರಗಳಲ್ಲಿನ ಸನ್ನಿವೇಶಗಳನ್ನು ಕಂಡು ನಾನು ನನ್ನ ಜೀವನದಲ್ಲಿ ಕೆಲವು ಮೌಲ್ಯಗಳನ್ನು ಅಳವಡಿಸಿಕೊಳ್ಳುವುದಕ್ಕೆ ಅವರು ಪ್ರೇರಣೆಯಾಗಿದ್ದರೆಂದು ಈ ಸಂದರ್ಭದಲ್ಲಿ ಡಾ: ರಾಜ್‌ಕುಮಾರ್‌ರವರು ಚಿತ್ರರಂಗಕ್ಕೆ ಸಲ್ಲಿಸಿದ ಸೇವೆಯನ್ನು ನೆನೆಪಿಸಿಕೊಳ್ಳಬಯಸುತ್ತೇನೆ. ಅವರೊಬ್ಬ ಪ್ರಮುಖ ಗಾಯಕರಾಗಿ ಚಿತ್ರರಂಗದಲ್ಲಿ ಹಲವಾರು ರೀತಿಯಲ್ಲಿ ಬಹಳಷ್ಟು ಸೇವೆ ಸಲ್ಲಿಸಿದ್ದಾರೆ. ಇವೊತ್ತು ಅಂತಹ ಒಬ್ಬ ಮಹಾನ್ ನಟರನ್ನು ಅತ್ಯಂತ ಎತ್ತರದ ಮಟ್ಟಕ್ಕೆ ಬೆಳೆದಿರುವ ನಟರನ್ನು ನೋಡತಕ್ಕಂಥಾದ್ದು ಬಹುಶಃ ಅಪರೂಪ, ವಿರಳವೆಂದು ನನ್ನ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದೇನೆ.

ಕನ್ನಡ ಚಿತ್ರರಂಗಕ್ಕೆ ಡಾ: ರಾಜ್‌ಕುಮಾರ್‌ರವರು ಸಲ್ಲಿಸಿರುವ ಅಪೂರ್ವ ಸೇವೆಯನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತಾ ಅವರ ಜೊತೆಗೆ ಈ ಶಾಸನಸಭೆಯ ಸದಸ್ಯರುಗಳಾಗಿ ಕೆಲಸ ಮಾಡಿರುವ ಹಲವಾರು ಹಿರಿಯರು ನಮ್ಮನ್ನು ಅಗಲಿದ್ದಾರೆ. ಶ್ರೀ ಮಾರ್ಗದ ಮಲ್ಲಪ್ಪನವರು ಕೆ. ಹರ್ಷಕುಮಾರಗೌಡ, ಎಸ್.ಬಿ. ತಲ್‌ವಾಲ್‌ಕರ್, ಪಿ. ಮೂಡ್ಲೇಗೌಡ ಮತ್ತು ಕೆ.ಸಿ. ಮೊದಗೇಕರ್ ದೇಸಾಯಿಯವರು ಅಗಲಿದ್ದಾರೆ. ಇವರುಗಳು ತಮ್ಮ ರಾಜಕೀಯ ಜೀವನದಲ್ಲಿ ಹಲವಾರು ರೀತಿಯ ಸಾಮಾಜಿಕ ಸೇವೆಗಳನ್ನು ಸಲ್ಲಿಸುವುದರ ಜೊತೆಗೆ ಹಲವಾರು ರಂಗಗಳಲ್ಲಿ ತಮ್ಮದೇ ಆದ ಸೇವೆ ಸಲ್ಲಿಸಿ, ಶಾಸನಸಭೆಯ ಸದಸ್ಯರಾಗಿ ಅಭಿವೃದ್ಧಿಗೆ ಒಂದು ರೀತಿಯಲ್ಲಿ ಸೇವೆ ಸಲ್ಲಿಸುವುದಲ್ಲದೆ, ಹಲವಾರು ರೀತಿಯ ಹೋರಾಟಗಳಲ್ಲಿ ಭಾಗವಹಿಸಿ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಿರತಕ್ಕ ಅವರುಗಳನ್ನು ಈ ಸಂದರ್ಭದಲ್ಲಿ ನಾನು ಸ್ಮರಿಸಿಕೊಳ್ಳುತ್ತಾ, ಅವರೆಲ್ಲರ ಆತ್ಮಗಳಿಗೆ ಶಾಂತಿ ಕೋರಬಯಸುತ್ತೇನೆ. ಮತ್ತು ಇವೊತ್ತು ಈ ಸದನದಲ್ಲಿ ಮಾನ್ಯ ಅಧ್ಯಕ್ಷರಿಗೆ ನನ್ನ ಮನವಿ ಏನೆಂದರೆ, ಡಾ: ರಾಜ್‌ಕುಮಾರ್‌ರವರು ರಾಜ್ಯಕ್ಕೆ ಸಲ್ಲಿಸಿರುವ ಸೇವೆಯನ್ನು ನಾವು ಗುರ್ತಿಸುವುದರ ಮುಖಾಂತರ ಸದನವು ಅವರಿಗೆ ಸಂತಾಪ ವ್ಯಕ್ತಪಡಿಸುವ ಸಂದರ್ಭದಲ್ಲಿ ಗೌರವ ಸೂಚಿಸುವುದಕ್ಕೆ ಸದನವನ್ನು ಮುಂದೂಡಬೇಕೆಂದು ನಾನು ಎಲ್ಲ ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡುತ್ತಾ ಹಾಗೂ ಅಗಲಿರುವ ಪ್ರತಿಯೊಬ್ಬರ ಆತ್ಮಕ್ಕೂ ಶಾಂತಿ ಕೋರಿ ನನ್ನೆರಡು ಭಾವನೆಗಳನ್ನು ಈ ಸದನದ ಮುಂದಿಡುತ್ತಿದ್ದೇನೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಮಾರ್ಗದ ಮಲ್ಲಪ್ಪ, ಕೆ. ಹರ್ಷಕುಮಾರಗೌಡ ಹಾಗೂ ಇತರೆ ಕೆಲವು ಮಾಜಿ ಶಾಸಕರು ನಮ್ಮಲ್ಲಿ ಅಗಲಿ ಹೋಗಿದ್ದಾರೆ. ಅವರ ಬಗ್ಗೆ ಈ ಸದನ ಸಂತಾಪ ಸೂಚಿಸುತ್ತಿದೆ. ಸಭಾನಾಯಕರು ಈಗಾಗಲೇ ಹೇಳಿದಂತೆ ಡಾ: ರಾಜ್‌ಕುಮಾರ್‌ರವರು ಈ ನಾಡಿನ ಸಂಪತ್ತು. ರಾಜ್‌ಕುಮಾರ್‌ರವರ ಚಿತ್ರರಂಗದಲ್ಲಿನ ಐವತ್ತು ವರ್ಷಗಲ ಸಾಧನೆ ಏನಿತ್ತು, ನಾನು ಮುಖ್ಯಮಂತ್ರಿಯಾದಾಗ ಕರ್ನಾಟಕದ ಸಮಸ್ತ ಜನತೆಯ ಪರವಾಗಿ ಅವರಿಗೆ ಗೌರವ ಸಲ್ಲಿಸುವಂತಹ ದೊಡ್ಡ ಸಮಾರಂಭವನ್ನು ಆಯೋಜಿಸಿದ್ದೆವು. ಇಡೀ ನಮ್ಮ ರಾಷ್ಟ್ರದಲ್ಲಿ ಅಶೋಕ್‌ಕುಮಾರ್ ರವರು ಇದ್ದಾರೆ. ದೇವಾನಂದ್‌ರವರು ಇದ್ದಾರೆ. ದಿಲೀಪ್‌ಕುಮಾರ್‌ರವರಿದ್ದಾರೆ ಹಾಗೂ ದೊಡ್ಡ ದೊಡ್ಡ ಶ್ರೇಷ್ಠ ನಟರೆಲ್ಲರು ಇದ್ದಾರೆ. ಆದರೆ, ಕರ್ನಾಟಕದಲ್ಲಿ ಅವರು ಸುಮಾರು ಐವತ್ತು ವರ್ಷಗಳ ಕಾಲ ಚಿತ್ರರಂಗದಲ್ಲಿ ಯಶಸ್ವಿ ನಟನಾಗಿ ಮೆರೆಯುವ ಮೂಲಕ ಕನ್ನಡ ಜನರಲ್ಲಿ ಕನ್ನಡದ ಭಾವನೆಗಳನ್ನು ಮೂಡಿಸುವ ರೀತಿಯಲ್ಲಿ ಅವರ ಸಾಧನೆ ಏನಿದೆ, ಅದು ಬಹಳ ಎತ್ತರವಾದುದು. ಕರ್ನಾಟಕದಲ್ಲಿ ರಾಜ್‌ಕುಮಾರ್ ಅವರಿಗೆ ಕೊಟ್ಟಂತಹ ಗೌರವವು ವಿಶೇಷವಾಗಿತ್ತು. ಶ್ರೀಮಾನ್

ಎಸ್.ಎಂ. ಕೃಷ್ಣರವರು ಈ ರಾಜ್ಯ ಮುಖ್ಯಮಂತ್ರಿಗಳಾಗಿದ್ದಾಗ ಮತ್ತು ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಗೃಹ ಸಚಿವರಾಗಿದ್ದಾಗ ವೀರಪ್ಪನ್ ಡಾ: ರಾಜ್‌ಕುಮಾರ್ ಅವರನ್ನು ಹಿಡಿದುಕೊಂಡು ಹೋಗಿದ್ದ ಆಗ ಕರ್ನಾಟಕದಲ್ಲಿ ಅಲ್ಲೋಲ-ಕಲ್ಲೋಲದ ಭಾವನೆಗಳುಂಟಾಗಿದ್ದವು ಮತ್ತು ಅದೇ ಸರ್ಕಾರ ರಾಜ್‌ಕುಮಾರ್ ಅವರನ್ನು ವೀರಪ್ಪನ್ ಬಂಧನದಿಂದ ಬಿಡಿಸಿ ಕರ್ನಾಟಕದ ಜನತೆಗೆ ಸಮರ್ಪಿಸತಕ್ಕಂಥ ಕೆಲಸ ಕೂಡ ಆಗಿತ್ತು. ಇಂತಹ ಮಹಾನ್ ವ್ಯಕ್ತಿ ಇವೊತ್ತು ಮರಣ ಹೊಂದಿದಾಗ ನಮ್ಮ ದೇಶದ ಸಂಪ್ರದಾಯದಂತೆ, ವ್ಯಕ್ತಿಗಳು ಎಲ್ಲಿಯವರೆಗೆ ಇರುತ್ತಾರೋ, ಅಲ್ಲಿಯವರೆಗೆ ನಾವು ಅವರ ಗುಣಗಾನ ಮಾಡುವುದಿಲ್ಲ. ಮನುಷ್ಯ ಅಗಲಿದ ಬಳಿಕವೇ ಅವರ ಕುರಿತು ಬಹಳಷ್ಟು ಗುಣಗಾನ ಮಾಡುವ ಪದ್ಧತಿ ಈ ಸಮಾಜದಲ್ಲಿ ಯಾವಾಗಲೂ ಬೆಳದು ಬಂದಂಥ ಸಂಪ್ರದಾಯವಾಗಿದೆ. ರಾಜ್‌ಕುಮಾರ್‌ರವರು ಅಗಲಿದ ಬಳಿಕ ಒಂದೆರಡು ದಿವಸಗಳ ಕಾಲ ಕರ್ನಾಟಕದಲ್ಲಿ ಬಹಳ ಅಲ್ಲೋಲ-ಕಲ್ಲೋಲವಾಯಿತು. ಬೇರೆ ರಾಜ್ಯಗಳಿಂದ ಬಹಳಷ್ಟು ಸಂಖ್ಯೆಯಲ್ಲಿ ಅವರ ಅಭಿಮಾನಿಗಳು ಬಂದಿದ್ದರೂ ರಾಜ್‌ರವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವುದಕ್ಕಾಗಲಿಲ್ಲ. ಇದು ಜನರಿಗೆ ದೊಡ್ಡ ರೀತಿಯಲ್ಲಿ ದುಃಖ ತರುವ ವಿಷಯವಾಗಿದೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ಇಡೀ ಕರ್ನಾಟಕ ರಾಜ್ಯದ ಜನರ ಪರವಾಗಿ ರಾಜ್ ಅಂತ್ಯಕ್ರಿಯೆಯಲ್ಲಿ ಗೌರವ ಸಲ್ಲಿಸುವುದಕ್ಕೂ ಆಗಲಿಲ್ಲ. ಅದು ನಮ್ಮೆಲ್ಲರಿಗೂ ಕೂಡ ನೋವು ತಂದಿದೆ. ಏಕೆಂದರೆ ಸರ್ಕಾರ ನಡೆಸತಕ್ಕವರು ಒಬ್ಬ ಮಹಾನ್ ವ್ಯಕ್ತಿ ಅಗಲಿದ ನಂತರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಜನಸಾಮಾನ್ಯರ ಮತ್ತು ಎಲ್ಲಾ ಹಂತಗಳಲ್ಲಿರುವ ಜನರ ಅಭಿಪ್ರಾಯವಿರುತ್ತದೆ. ಭಾವನೆ ಇರುತ್ತದೆ. ಆದರೆ, ಅವರ ಈ ಭಾವನೆಗಳು ಈಡೇರಲಿಲ್ಲ. ರಾಜ್ ಬಗ್ಗೆ ಶ್ರದ್ಧಾಂಜಲಿ ಅರ್ಪಿಸುವ ಬಗ್ಗೆ ತಾವು ಇವೊತ್ತು ಏನು ಸೂಚನೆ ಮಂಡಿಸಿದ್ದೀರಿ, ನಾವುಗಳೆಲ್ಲರೂ ಅದನ್ನು ಅಂಗೀಕರಿಸಿ ಅವರ ಪರಿವಾರದವರಿಗೆ ಕಳುಹಿಸಿಕೊಡಬೇಕಾಗಿದೆ. ಇಂತಹ ಸಂದರ್ಭದಲ್ಲಿ ನಾವೆಲ್ಲರೂ ಮಾತುಗಳನ್ನು ಉದ್ದ ಬೆಳೆಸಲು ಇಚ್ಛಿಸುವುದಿಲ್ಲ. ನಿನ್ನೆ ನಾವು ರಾಜ್ಯಪಾಲರನ್ನು ಭೇಟಿಯಾಗಿ ಏನೇನು ಘಟನೆಗಳಾಗಿವೆ, ಯಾರ್‍ಯಾರು ಮೃತಪಟ್ಟಿದ್ದಾರೆ, ಅಮಾಯಕರಿಗೆ ಇನ್ನೂ ಕೂಡ ಸರ್ಕಾರದ ವತಿಯಿಂದ ಪರಿಹಾರ ಸಿಕ್ಕಿಲ್ಲವೆಂದು ಎಲ್ಲವನ್ನೂ ತಿಳಿಸಿದ್ದೇವೆ. ಅದರ ಬಗ್ಗೆ ಮತ್ತೊಂದು ರೂಪದಲ್ಲಿ ಪ್ರಸ್ತಾವ ತಂದು ಚರ್ಚಿಸುತ್ತೇವೆ. ಇದರ ಬಗ್ಗೆ ನಿನ್ನೆ ಕೂಡ ಪ್ರತಿಭಟಿಸಿದ್ದೇವೆ. ಆ ಮಾತುಗಳನ್ನು ರಾಜ್ಯಪಾಲರಿಗೆ ಹೇಳಿದ್ದೇವೆ. ಅದನ್ನು ಇಲ್ಲಿ ಸಾಂದರ್ಭಿಕವಾಗಿ ಹೇಳಬೇಕಾಗುತ್ತದೆ. ಇವೊತ್ತು ಕರ್ನಾಟಕದ ಜನರ ಮನಸ್ಸಿನಲ್ಲಿರುವ ಭಾವನೆಗಳೇನಿದೆ, ವಿಶೇಷವಾಗಿ ಬೆಂಗಳೂರು ನಗರದಲ್ಲಿರುವ ಜನರ

ಭಾವನೆಗಳೇನಿವೆ, ನಾವೆಲ್ಲರೂ ಕೂಡ ವಿರೋಧ ಪಕ್ಷದಲ್ಲಿದ್ದು, ಯಾರ್‍ಯಾರು ಸರ್ಕಾರ ನಡೆಸುತ್ತಿದ್ದಾರೆ, ಮುಖ್ಯಮಂತ್ರಿಗಳಾಗಿದ್ದಾರೆ ಎಂಬುದು ನನಗೆ ಗೊತ್ತಿದೆ, ಘಟನೆಗಳು ಹೇಗಾಯಿತು, ಎಲ್ಲೆಲ್ಲಿ ಅಯಿತೆಂದು ಹೇಳಿದ್ದೇವೆ. ಅವರು ಯಾವಾಗಲೂ ಏನು ಮಾಡುತ್ತಾರೆಂದರೆ, ಹಾರಿಕೆ ಹೇಳಿಕೆ ಕೊಡುತ್ತಾರೆ. ಇವರು ಸರ್ಕಾರ ನಡೆಸುತ್ತಿದ್ದು, ಅಪರಾಧಿಗಳು ಎಲ್ಲಿದ್ದಾರೆ, ಯಾರು ಎಂಬುದನ್ನು ಕಂಡುಹಿಡಿದು ಶಿಕ್ಷಿಸಿಹಲ್ಲಿ, ಅವರ ಅಭಿಮಾನಿಗಳಿಗೆ ಇವೊತ್ತು ಸಂತೋಷವಾಗುತ್ತದೆ. ಅದಕ್ಕೋಸ್ಕರ, ನಾನು ಮುಖ್ಯಮಂತ್ರಿಗಳನ್ನು ಕೇಳುತ್ತೇನೆ ಎಷ್ಟು ದಿವಸಗಳ ಕಾಲ ಈ ಸದನ ನಡೆಯುತ್ತದೋ ಗೊತ್ತಿಲ್ಲ ಬಹಳ ತರಾತುರಿಯಾಗಿ ಆಗತಕ್ಕಂಥ ಈ ಸದನದಲ್ಲಿ ಪ್ರಪ್ರಥಮವಾಗಿ ಇವೊತ್ತು ರಾಜ್‌ಕುಮಾರ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವ ಕುರಿತು ತಾವೇನು ರೆಸಲ್ಯೂಷನ್ ಮೂವ್ ಮಾಡಿದ್ದೀರಿ, ನಾನು ಅದನ್ನು ಬೆಂಬಲಿಸುತ್ತಿದ್ದೇನೆ. ನಾವು ಕೂಡ ವಿರೋಧ ಪಕ್ಷದಲ್ಲಿದ್ದು, ರಾಜ್‌ಕುಮಾರ್‌ರವರ ಸೇವೆ ಏನಿದೆ, ರಾಜ್‌ಕುಮಾರ್‌ರವರು ತಮ್ಮ ಜೀವನದಲ್ಲಿ ಕಾಣುತ್ತಿದ್ದ ಕನಸು ಏನಿತ್ತು ಕನ್ನಡದ ಬಗ್ಗೆ, ಕನ್ನಡದ ಬೆಳವಣಿಗೆ ಬಗ್ಗೆ, ವಿಶಾಲ ಕರ್ನಾಟಕದ ಬಗ್ಗೆ ಅವರ ಕನಸು ಏನಿತ್ತು, ಅದನ್ನು ನನಸುಗೊಳಿಸುವ ರೀತಿಯಲ್ಲಿ ನಾವೆಲ್ಲರೂ ಒಟ್ಟಿಗೆ ಸೇರಿ ಕೆಲಸ ಮಾಡಿದಾಗ ಮಾತ್ರ ನಿಜವಾಗಿಯೂ ರಾಜ್‌ಕುಮಾರ್ ಅವರನ್ನು ನೆನೆಸಿಕೊಂಡಂತಾಗುತ್ತದೆ. ಆ ಕೆಲಸವನ್ನು ನಾವು ಮಾಡಬೇಕಾಗಿದೆ. ಈ ಮಧ್ಯೆ ಸಾರ್ವಜನಿಕರ ಮನಸ್ಸಿನಲ್ಲಿ ಒಂದು ತರಹದ ಕಳವಳ ಇದ್ದು, ಅದನ್ನೂ ನಿವಾರಿಸುವುದು ಸರ್ಕಾರದ ಕೆಲಸವೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಸರ್ಕಾರ ನಡೆಸುವ ಕಾಲದಲ್ಲಿ ಸುಮ್ಮನೆ ಎಲ್ಲಿಯೋ ನಡೆಯಿತು, ಹಾಗಾಯಿತು, ಹೀಗಾಯಿತು ಎನ್ನುವುದಲ್ಲ, ನಿನ್ನೆ ಕೂಡ ನಾವು ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ಪ್ರತಿಭಟಿಸಿದ್ದೇವೆ. ಎಲ್ಲಾ ಕಡೆಗಳಲ್ಲೂ ಹೇಳಿದ್ದೇವೆ. ಅಮಾಯಕರಾದ ಯಾರು ಎಂಟು ಮಂದಿ ಸತ್ತರು, ಇನ್ನು ಕೂಡ ಆ ಅಮಾಯಕರಿಗೆ ಪರಿಹಾರ ಕೊಟ್ಟಿಲ್ಲ, ಏಕೆ ಕೊಟ್ಟಿಲ್ಲ, ಏನಿದೆ, ಇವೆಲ್ಲವನ್ನೂ ಕೂಡ ಹೇಳಿದ್ದೇವೆ. ಇದೆಲ್ಲವನ್ನೂ ಹೇಳಿದರೆ ಬಹಳಷ್ಟು ಉದ್ದವಾಗುತ್ತದೆ. ಇವೊತ್ತು ಅವರಿಗೆ ಗೌರವ ಸಲ್ಲಿಸುವ ಈ ಸಂತಾಪ ಸೂಚನೆಯಲ್ಲಿ ವಿಷಯವನ್ನು ಬೇರೆ ಕಡೆಗೆ ಎಳೆಯುವುದಕ್ಕೆ ಬಯಸುವುದಿಲ್ಲ. ಒಟ್ಟಾರೆ, ತಾವು ತಂದಂಥ ಸಂತಾಪ ಸೂಚನೆ ಏನಿದೆ, ಇನ್ನು ಕೂಡ ಕೆಲವು ಜನ ಮಾರ್ಗದ ಮಲ್ಲಪ್ಪನವರಾಗಲಿ, ಹರ್ಷಕುಮಾರ್‌ಗೌಡರಾಗಲಿ, ಇನ್ನು ಬೇರೆ ಬೇರೆಯವರು ಅಗಲಿದ್ದಾರೆ, ಅವರೆಲ್ಲರಿಗೂ ಸಂತಾಪ ಸೂಚನಾ ನಿರ್ಣಯ ಏನು ಮಂಡಿಸಿದ್ದೀರಿ, ಅದಕ್ಕೂ ಕೂಡ ನಾನು ನನ್ನ ಸಂತಾಪ ಸೂಚನೆ ಸಲ್ಲಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ಕಳೆದ ಬಜೆಟ್ ಅಧಿವೇಶನ ಮತ್ತು ಈ ಅಧಿವೇಶನದ ನಡುವೆ ನಮ್ಮನ್ನು ಅಗಲಿರುವಂಥ ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸುವುದಕ್ಕೋಸ್ಕರ ತಾವು ಮಂಡಿಸಿರುವಂಥ ಸಂತಾಪ ಸೂಚನೆಗಳಿಗೆ ನನ್ನ ಧ್ವನಿಯನ್ನೂ ಸೇರಿಸುತ್ತಿದ್ದೇನೆ. ಈ ಸದನದ ಮಾಜಿ ಸದಸ್ಯರು ಮತ್ತು ಮಾಜಿ ಸಚಿವರಾಗಿದ್ದ ಮಾರ್ಗದ ಮಲ್ಲಪ್ಪನವರು, ಮಾಜಿ ಶಾಸಕರುಗಳಾದಂಥ ಶ್ರೀ ಎಸ್.ಬಿ.ತಲವಾಲ್‌ಕರ್, ಶ್ರೀ ಎಸ್.ಡಿ. ಸಾಮ್ರಾಜ್ಯ, ಶ್ರೀ ಕೆ. ಹರ್ಷಕುಮಾರಗೌಡ, ಶ್ರೀ ಪಿ. ಮೂಡ್ಳೇಗೌಡ ಮತ್ತು ಕೆ.ಸಿ. ಮಾದಗೇಕರ್ ದೇಸಾಯಿ ಅವರುಗಳಲ್ಲದೇ ವರನಟ ಡಾ: ರಾಜ್‌ಕುಮಾರ್‌ರವರು ನಮ್ಮನ್ನು ಅಗಲಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರು ಮತ್ತು ಗಾಂಧಿವಾದಿಗಳು ಅನೇಕ ಜನ ಈ ಸಂದರ್ಭದಲ್ಲಿ ನಿಧನರಾಗಿರುವವರಿಗೆ ನಾವು ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ ಇದ್ದೇವೆ. ವರನಟ ರಾಜ್‌ಕುಮಾರ್ ಬಗ್ಗೆ ಹೆಚ್ಚು ಹೇಳುವಂಥ ಅಗತ್ಯ ಇಲ್ಲ; ಅವರ ಸಾಧನೆ ಮತ್ತು ಸಿದ್ಧಿ ನಾಡಿನ ಪ್ರತಿಯೊಂದು ಮನೆ ಮನೆಯ ಮನೆಮಾತು. ಅಬಾಲವೃದ್ಧರಾದಿಯಾಗಿ ಎಲ್ಲರ ಪ್ರೀತಿ ಮತ್ತು ಗೌರವಗಳಿಗೆ ಪಾತ್ರರಾಗಿದ್ದಂಥ, ಸರಳ ಸಜ್ಜನಿಕೆಯ ವಿನಯಮೂರ್ತಿಯಾಗಿದ್ದರು ಡಾ: ರಾಜ್‌ಕುಮಾರ್‌ರವರು. ಅವರೊಬ್ಬ ಮೇರು ಕಲಾವಿದ ಮತ್ತು ನಾಡು ನುಡಿಯ ವಿನಮ್ರ ಸೇವಕರಾಗಿ ತಮ್ಮ ಜೀವನ ಪೂರ್ತಿ ಗಂಧದ ಕೊರಡಿನಂತೆ ಸೇವೆಯನ್ನು ಸಲ್ಲಿಸಿದರು. ಈ ನಾಡಿನ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಅನನ್ಯ ಪ್ರೀತಿ ಹೊಂದಿದ್ದಂಥವರು. ಕನ್ನಡನಾಡು ಮತ್ತು ನುಡಿಗೆ ಸಂಕಟ, ವಿಪತ್ತು ಎದುರಾದಾಗ ಸಿಡಿದೆದ್ದು ಸೆಣೆಸಾಡಿದವರು. ತಮ್ಮ ಕಲಾ ಸೇವೆಗಾಗಿ ರಾಜ್ಯ, ರಾಷ್ಟ್ರ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಗಳಿಸಿದಂಥ ಹಿರಿಯ ವ್ಯಕ್ತಿಗಳು. ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಹೀಗೆ ಯಾವ ಪ್ರಕಾರ ಚಿತ್ರಗಳ ಪಾತ್ರಗಳೇ ಇರಲಿ ಡಾ: ರಾಜ್‌ಕುಮಾರ್‌ರವರು ಅವುಗಳಿಗೆ ಜೀವ ತುಂಬುತ್ತಾ ಇದ್ದರು. ಸುಂದರ ಶರೀರ ಮತ್ತು ಸುಮಧುರ ಶಾರೀರ ಅವರದಾಗಿತ್ತು ಎಂಬುದು ನಮ್ಮೆಲ್ಲರಿಗೂ ಗೊತ್ತಿರುವ ಸಂಗತಿ. ಈ ಶತಮಾನದ ಕಲಾವಿದ ಡಾ: ರಾಜ್‌ಕುಮಾರ್‌ರವರು ನಿಧನದಿಂದ ಭಾರತೀಯ ಚಿತ್ರರಂಗ ವಿಶೇಷವಾಗಿ ಕನ್ನಡ ಚಿತ್ರರಂಗ ಬಹು ದೊಡ್ಡ ನಷ್ಟ ಅನುಭವಿಸಿದೆ. ಕನ್ನಡಿಗರಿಗೆ ತುಂಬಲಾರದ ಒಂದು ದೊಡ್ಡ ನಷ್ಟ ಆಗಿದೆ. ರಾಷ್ಟ್ರದ ಅತ್ಯುಚ್ಚ ಪ್ರಶಸ್ತಿಯಾದ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ, ರಾಜ್ಯದ ಅತ್ಯುಚ್ಚ ಗೌರವ ಕರ್ನಾಟಕ ರತ್ನಕ್ಕೆ ಡಾ: ರಾಜ್‌ಕುಮಾರ್‌ರವರ ನೆನಪು ಚಿರಂತನವಾಗಿರುವಂಥಾದ್ದು. ಡಾ: ರಾಜ್‌ಕುಮರ್‌ರವರ ನೆನಪನ್ನು ಚಿರಸ್ಥಾಯಿಯಾಗಿಸುವ ದಿಸೆಯಲ್ಲಿ ನಮ್ಮ ಸರ್ಕಾರ ಶಾಶ್ವತವಾದಂಥ ಕೆಲಸವನ್ನು ಮಾಡಬೇಕೆಂದು ಆಸೆ ಇಟ್ಟುಕೊಂಡಿದೆ.

ಸದನದ ಹಿರಿಯ ಸದಸ್ಯರೆಲ್ಲರೂ ಏನೇನು ಸಲಹೆಗಳನ್ನು ಕೊಡುತ್ತೀರಿ, ಇಡೀ ನಾಡಿನ ಐದು ಕಾಲು ಕೋಟಿ ಜನರ ಮನ್ನಣೆಗೆ, ಗೌರವಕ್ಕೆ ಪಾತ್ರರಾಗಿದ್ದಂಥ ರಾಜ್‌ಕುಮಾರ್‌ರವರ ಹೆಸರಿನಲ್ಲಿ ನೀವು ಯಾವುದೇ ಸಲಹೆ ಕೊಟ್ಟರೂ ಅವುಗಳನ್ನು ಮುಖ್ಯಮಂತ್ರಿಗಳು ಮತ್ತು ನಾವು ಜಾರಿಗೆ ತರುವುದಕ್ಕೆ ಸಿದ್ದರಿದ್ದೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸರ್ಕಾರದ ಪರವಾಗಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಮುಖ್ಯಮಂತ್ರಿಗಳಿಗೆ ಹೇಳಿ, ಸರ್ಕಾರದ ಪರವಾಗಿ ಅಂತಿಮ ಕ್ರಿಯೆಯಲ್ಲಿ ಭಾಗವಹಿಸಿದೆ. ಇಬ್ಬರೂ ಒಟ್ಟಿಗೆ ಹೊರಟೆವು. ಮೊದಲು ನಾನು ಅಲ್ಲಿಗೆ ಹೋಗಿ, ಅಲ್ಲಿಯ ಪರಿಸ್ಥಿತಿಯನ್ನು ತಿಳಿದುಕೊಂಡು ತಮಗೆ ಹೇಳುತ್ತೇನೆಂದು ತಿಳಿಸಿ ಹೋದೆ. ಅಲ್ಲಿಗೆ ಬರಬೇಡಿ ಎಂದು ಪೊಲೀಸ್ ಅಧಿಕಾರಿಗಳು ಹೇಳಿದರು. ಅಂದರೆ, ವ್ಯವಸ್ಥಿತವಾದಂಥ ಷಡ್ಯಂತ್ರ, ಪಿತೂರಿ ನಡೆದು ಡಾ: ರಾಜ್‌ಕುಮಾರ್‌ರವರ ಮನೆತನದವರೂ ಸಹ ಆ ಸಂದರ್ಭದಲ್ಲಿ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವುದಕ್ಕೆ ಹಿಂದೆಮುಂದೆ ನೋಡುವಂತ ಒಂದು ವಿಚಿತ್ರವಾದಂಥ ಸನ್ನಿವೇಶ, ಪರಿಸ್ಥಿತಿಯನ್ನು ಇಂತಹ ಸಂದರ್ಭದಲ್ಲಿ ವ್ಯವಸ್ಥಿತವಾಗಿ ಮಾಡಿದ್ದರು ಎನ್ನುವುದಾದರೆ, ಆ ದಿನ ಏನೇನು ನಡೆಯಿತು ಎನ್ನುವುದನ್ನು ಚರ್ಚೆ ಮಾಡುವಂಥ ಸಂದರ್ಭ ಇದಲ್ಲ. ಆದರೆ, ಒಂದು ಮಾತು ಹೇಳುತ್ತೇನೆ. ನಾನು, ಅನಂತ್‌ಕುಮಾರ್ ಮತ್ತು ಅಶೋಕ್ ಒಂದು ಕಾರಿನಲ್ಲಿ ಹೋಗುತ್ತಾ ಇದ್ದೆವು. ಅಷ್ಟು ದೊಡ್ಡ ಕಲ್ಲು, ನಮ್ಮ ಎದುರುಗಡೆಯಲ್ಲೇ ಹೊಡೆದರು. ನನ್ನ ಬೆನ್ನ ಹಿಂಭಾಗಕ್ಕೆ ಬಿತ್ತು. ಕಾರಿನ ಗಾಜುಗಳೆಲ್ಲಾ ಪುಡಿಯಾಯಿತು. ಆ ದಿನ ನಾವು ಬದುಕಿದ್ದೇ ಹೆಚ್ಚು. ಅಂದರೆ, ನಾನು ಏನು ಹೇಳುವುದಕ್ಕೆ ಹೊರಟಿದ್ದೆ ಎಂದರೆ, ಇಂತಹ ಒಬ್ಬ ಹಿರಿಯ ನಟನಿಗೆ ಶ್ರದ್ಧಾಂಜಲಿ ಅಥವಾ ಅಂತಿಮ ಸಂಸ್ಕಾರ ಮಾಡುವಂಥ ಕಾಲದಲ್ಲಿ ಈ ರೀತಿ ವ್ಯವಸ್ಥಿತವಾದಂಥ ಪಿತ್ತೂರಿಯನ್ನು ಮಾಡಿ, ರಾಜಕಾರಣವನ್ನು ಬೆಳೆಸುವುದಕ್ಕೆ ಏನಾದರೂ ಹೊರಟಿದ್ದರೆ, ನಾನು ಈಗಾಗಲೇ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಅವು ಯಾವುದೇ ಬಲಿಷ್ಟವಾದಂಥ ಶಕ್ತಿ ಇರಲಿ, ಇಂತಹ ಕೆಲಸಕ್ಕೆ ಕೈ ಹಾಕಿದವರಿಗೆ ಸರಿಯಾದ ಪಾಠ ಕಲಿಸಬೇಕು, ಮತ್ತೊಮ್ಮೆ ಕರ್ನಾಟಕ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಇಂತಹ ಕಾಲದಲ್ಲಿ ಕದಡುವಂಥ ಕೆಲಸ ಮಾಡುವಂಥ ಯಾವುದೇ ಶಕ್ತಿಗಳಿದ್ದರೂ, ಅದಕ್ಕೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ನಾನು ಮತ್ತು ಮುಖ್ಯಮಂತ್ರಿಗಳು ಕುಳಿತು ಮಾತನಾಡಿದ್ದೇವೆ. ವರದಿ ಸಹ ನಮ್ಮ ಕೈಯಲ್ಲಿದೆ. ಅದನ್ನು ಮುಖ್ಯಮಂತ್ರಿಗಳು ಬೇರೆ ಸಂದರ್ಭದಲ್ಲಿ ಹೇಳುತ್ತಾರೆ. ಆದರೆ, ಇದು ಸಂದರ್ಭ ಅಲ್ಲ. ಆದರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದರಿಂದ ಸರ್ಕಾರದ

ಪರವಾಗಿ ನಾನು ಶ್ರದ್ಧಾಂಜಲಿ ಮತ್ತು ಅಂತ್ಯ ಸಂಸ್ಕಾರ ಸಲ್ಲಿಸುವ ಸಂದರ್ಭದಲ್ಲಿ ಅಲ್ಲಿದ್ದೆ ಎನ್ನುವ ಮಾತನ್ನು ಹೇಳುತ್ತೇನೆ. ಅನೇಕ ಹಿರಿಯರು ಮಾರ್ಗದ ಮಲ್ಲಪ್ಪನವರಂಥ ಅಪರೂಪದ ಸ್ವಾತಂತ್ರ್ಯ ಹೋರಾಟಗಾರರು, ಈ ನಾಡಿನಲ್ಲಿ ಸೇವೆ ಮಾಡಿದಂಥ ಅಪರೂಪದ ಹಿರಿಯ ವ್ಯಕ್ತಿ. ಶ್ರೀ ಎಸ್.ಬಿ. ತಲವಾಲ್‌ಕರ್‌ರವರು ಗಾಂಧೀಜಿಯವರ ಕರೆಗೆ ಓಗೊಟ್ಟು ಚಲೇಜಾವ್ ಚಳುವಳಿಯಲ್ಲಿ ಕೂಡ ಭಾಗವಹಿಸಿದರು ಮತ್ತು ಈ ಸಂದರ್ಭದಲ್ಲಿ ಜೈಲು ವಾಸ ಅನುಭವಿಸಿದರು ಎಂದು ಕೇಳಿರುವಂಥ ನಮ್ಮಗೆಲ್ಲರಿಗೂ ಗೊತ್ತಿರುವಂಥ ವ್ಯಕ್ತಿ. ಶ್ರೀ ಎಸ್.ಡಿ. ಸಾಮ್ರಾಜ್ಯರವರು ಸಹ ಗ್ರಾಮೀಣಾಭಿವೃದ್ಧಿ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿದ್ದರು ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಇವರು ಪ್ರಧಾನ ಮಂತ್ರಿಗಳ ಅರ್ಹತಾ : ಪ್ರಮಾಣ ಪತ್ರವನ್ನು ಸಹ ಗಳಿಸಿದ್ದರು, ಗ್ರಾಮ ಪಂಚಾಯ್ತಿ ಸದಸ್ಯರಾಗಿ, ಮದ್ರಾಸ್ ಸೆನೆಟ್ ಸದಸ್ಯರಾಗಿ, ಕಾರ್ಕಳ ರೈತ ಸಂಘದ ಅಧ್ಯಕ್ಷರಾಗಿ ಮತ್ತು ಕಾರ್ಕಳ ತಾಲ್ಲೂಕು ಮಂಡಳಿಯ ಉಪಾಧ್ಯಕ್ಷರಾಗಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಈ ವಿಚಾರಗಳೆಲ್ಲವೂ ನಮಗೆ ಗೊತ್ತಿರುವಂಥ ಸಂಗತಿ. ಶ್ರೀ ಹರ್ಷಕುಮಾರ್ ಗೌಡರು ವಿಶೇಷವಾಗಿ ಕಾವೇರಿ ನೀರಿನ ಚಳುವಳಿಯಲ್ಲಿ, ಅವರ ಪಾತ್ರ ಉಲ್ಲೇಖನೀಯವಾದುದು ಎಂದು ನಮಗೆಲ್ಲರಿಗೂ ಗೊತ್ತಿರುವ ಸಂಗತಿ. ರೈತರ ಪರ ಕಾಳಜಿಯನ್ನು ವಹಿಸಿದಂಥ ವ್ಯಕ್ತಿ. ಶ್ರೀ ಮಾದಗೇಕರ್ ದೇಸಾಯಿಯವರು ಸಹ ಬಾಗೇವಾಡಿ ಕ್ಷೇತ್ರದಿಂದ ಆಯ್ಕೆಯಾಗಿ ಬಂದು ವೃತ್ತಿಯಲ್ಲಿ ವ್ಯಾಪಾರಸ್ಥರಾಗಿದ್ದರೂ ಸಹ ನವದೆಹಲಿಯಲ್ಲಿರುವ ಅಖಿಲ ಭಾರತ ಮೋಟಾರು ಸಾಗಣೆ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸಕ್ರಿಯವಾಗಿ ದುಡಿದಿದ್ದರು ಎಂದು ಕೇಳಿದ್ದೇವೆ. ಇಂತಹ ಅನೇಕ ಹಿರಿಯರನ್ನು ಇಂದು ನಾವು ಕಳೆದುಕೊಂಡಿದ್ದೇವೆ. ಅವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರ ಕುಟುಂಬಕ್ಕೆ ಈ ನೋವನ್ನು, ದುಃಖವನ್ನು ಭರಿಸುವಂಥ ಶಕ್ತಿಯನ್ನು ಪರಮಾತ್ಮ ಕೊಡಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿ, ಮೃತರ ಆತ್ಮಕ್ಕೆ ಶ್ರದ್ಧಾಂಜಲಿ ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. **ಮಾಧುಸ್ವಾಮಿ (ಚಿಕ್ಕನಾಯ್ಕನಹಳ್ಳಿ)**: ಮಾನ್ಯ ಅಧ್ಯಕ್ಷರೆ, ಇವತ್ತೇನು ಸಂತಾಪ ಸೂಚನೆಯನ್ನು ತಂದಿದ್ದೀರಿ, ಮಾರ್ಗದ ಮಲ್ಲಪ್ಪನವರಿಗೆ, ತಲವಾಲ್‌ಕರ್‌ರವರಿಗೆ, ಸಾಮ್ರಾಜ್ಯರವರಿಗೆ, ಹರ್ಷಕುಮಾರ್‌ಗೌಡರಿಗೆ, ಮೂಡ್ಲೇಗೌಡರಿಗೆ, ಮೊದಗೇಕರ್ ದೇಸಾಯಿಯವರಿಗೆ ಮತ್ತು ಡಾ: ರಾಜ್‌ಕುಮಾರ್‌ರವರಿಗೆ ನಾನು ಕೂಡ ನಮ್ಮ ಪಕ್ಷದ ಪರವಾಗಿ ಸಂತಾಪವನ್ನು ಸೂಚಿಸುತ್ತೇನೆ. ಇದರಲ್ಲಿ ಸನ್ಮಾನ್ಯ ಮಾರ್ಗದ ಮಲ್ಲಪ್ಪನವರು, ಮೂಡ್ಲೇಗೌಡರು, ಹರ್ಷಕುಮಾರ ಗೌಡರು ಇವರುಗಳ ಜೊತೆಯಲ್ಲಿ ನಾವು ಒಡನಾಟದಲ್ಲಿದ್ದೆವು.

ಮಾರ್ಗದ ಮಲ್ಲಪ್ಪನವರು ಆರೋಗ್ಯ ಸಚಿವರಾಗಿ, ನಮಗೆಲ್ಲಾ ಅನೇಕ ರೀತಿಯಲ್ಲಿ, ಆವತ್ತು ನಾನು ಶಾಸಕ ಅಲ್ಲದೇ ಹೋದರೂ ಕೂಡ ಆಸ್ಪತ್ರೆ ಕೊಡಬೇಕೆಂದು ಕೇಳಿದಾಗ ಬಹಳ ಹೋರಾಟ ಮಾಡಿ ಕೊಟ್ಟವರು. ನಮ್ಮ ಹಳೇ ಮೈಸೂರು ಪ್ರಾಂತ್ಯದಲ್ಲಿ ಆವತ್ತು ಒಬ್ಬರು ಸಭ್ಯ ಮನುಷ್ಯ ಆರೋಗ್ಯ ಮಂತ್ರಿ ಇದ್ದಾರೆ, ಇಲ್ಲ ಎನ್ನುವುದು ಗೊತ್ತಿರಲಿಲ್ಲ. ಅಷ್ಟು ಸಭ್ಯವಾಗಿ ಜೀವನ ನಡೆಸುತ್ತಿದ್ದರು. ಬೀರೂರಿನಲ್ಲಿ ಮಲ್ಲಪ್ಪನವರಿಗಿಂತ ಅವರ ಶಿಷ್ಯರೇ ಬಹಳ ಪ್ರಭಾವಿಯಾಗಿರುತ್ತಿದ್ದರು. ಅಂತಹ ಒಬ್ಬ ಗಾಂಧಿವಾದಿ, ಸಭ್ಯ ವ್ಯಕ್ತಿ ಮಲ್ಲಪ್ಪನವರೇನು ನಮ್ಮ ಜೊತೆಯಿಂದ ಅಗಲಿದ್ದಾರೆ, ಅವರಿಗೆ ನಾನು ಸಂತಾಪ ಸೂಚಿಸುತ್ತೇನೆ. ಇನ್ನು ಮೂಡ್ಲೇಗೌಡರು ನನ್ನ ಜಿಲ್ಲೆಯವರು. ಶಿರಾ ತಾಲ್ಲೂಕಿನ ಚಿರತೆಹಳ್ಳಿಯವರು. ತಾಲ್ಲೂಕು ಅಭಿವೃದ್ಧಿ ಮಂಡಳಿಯಿಂದ ರಾಜಕೀಯವನ್ನು ಆರಂಭ ಮಾಡಿದರು. ಮೂಡ್ಲೇಗೌಡರು ಶಾಸಕರಾಗುತ್ತಾರೆಂದು ಹೇಳಿ ಅಲ್ಲಿ ಭಾವನೆಯೇ ಇರಲಿಲ್ಲಿ. ಬಸ್ಸಿನಲ್ಲಿ ಬರುವುದು, ಶಿರಾದಿಂದ ವಾಪಸ್ ಹೋಗುವುದು ಅಷ್ಟು ಮಾಡುತ್ತಿದ್ದರು. 1983ರಲ್ಲಿ ಅವರು ಪಕ್ಷೇತರರಾಗಿ ಈ ಶಾಸನ ಸಭೆಯ ಸದಸ್ಯರಾಗಿ ಬಂದರು. ಆಗಲೂ ಕೂಡ ಅವರು ಅದೇ ಜೀವನವನ್ನು ನಡೆಸಿದವರು. ಶಿರಾ ತಾಲ್ಲೂಕಿನಲ್ಲಿ ಮುಕ್ಕಣ್ಣಪ್ಪನವರು ಮತ್ತು ಮೂಡ್ಲೇಗೌಡರನ್ನು ಸ್ಮರಿಸಬೇಕಾಗುತ್ತೆ. ಅಂದರೆ, ಮುಕ್ಕಣ್ಣಪ್ಪನವರು ಬದುಕಿದ್ದಾರೆ, ಅವರಿಗೆ ನಾನು ಸಂತಾಪ ಹೇಳುತ್ತಾ ಇಲ್ಲ. ಆದರೆ, ಮೂಡ್ಲೇಗೌಡರು ಏನಿದ್ದರು, ಇವರು ನಿಜವಾಗಿಯೂ ಒಬ್ಬ ಸಭ್ಯ, ಗಾಂಧಿವಾದಿ. ಯಾವತ್ತೂ ಜೋರು ಧ್ವನಿಯಲ್ಲಿ ಒಬ್ಬರಿಗೆ ಮಾತನಾಡಿದ ಮನುಷ್ಯ ಅಲ್ಲ ಅವರು. ನಮ್ಮ ಮಾನ್ಯ ಚನ್ನಿಗಪ್ಪನವರು ಆಡುವ ಭಾಷೆ ಒಂದೂ ಅವರಿಗೆ ಬರುತ್ತಾ ಇರಲಿಲ್ಲ. ಅಷ್ಟು ಸಭ್ಯವಾದ ಮನುಷ್ಯ ನಮ್ಮ ಜಿಲ್ಲೆಯ ಮೂಡ್ಲೇಗೌಡರು. ಅಷ್ಟೊಂದು ಒಳ್ಳೆಯ ಮನುಷ್ಯ ರಾಜಕಾರಣದಿಂದ 1983–84 ಅಥವಾ 1985ರ ಮಧ್ಯೆ ಇದ್ದವರು, ಮತ್ತೆ ರಾಜಕಾರಣಕ್ಕೆ ಬರಲಿಲ್ಲ. ಸುಮ್ಮನೇ ಓಡಾಡಿಕೊಂಡು ಇದ್ದಂಥವರು. ಅವರಿಗೆ ಮತ್ತು ಅವರ ಮನೆಯವರಿಗೆ ಈ ದುಃಖವನ್ನು ಸಹಿಸುವ ಶಕ್ತಿ ಬರಲಿ ಎಂದು ಪ್ರಾರ್ಥಿಸುತ್ತೇನೆ. ಇನ್ನು ಹರ್ಷಕುಮಾರಗೌಡರು ನಾನು ವಿದ್ಯಾರ್ಥಿದೆಸೆಯಿಂದ ಸ್ನೇಹಿತರು. ಹರ್ಷಕುಮಾರ ಗೌಡರು ಆರಂಭ ಮಾಡಿದ ಅಮೃತ್ ಬೇಕರಿ ಹತ್ತಿರ ಕುಳಿತುಕೊಳ್ಳುವುದು, ಮಾತನಾಡುವುದು ಆಗ ಒಂದು ತರಹ ಸ್ಟೂಡೆಂಟ್ ಲೀಡರುಗಳಿಗೆ ಕೇಂದ್ರ ಆಗಿತ್ತು ಅದು. ಹರ್ಷಕುಮಾರ್ ಗೌಡರು ಇಲ್ಲಿ ಸದಸ್ಯರಾಗಿ ಬಂದಾಗ, ನಾನು ಕೂಡ ಬಂದಿದ್ದೆ. ಆತ ಬಹಳ ಕಷ್ಟಪಟ್ಟು ಮೈಸೂರಿನಲ್ಲಿ 2–3–4 ಬೇಕರಿಗಳನ್ನು ಆರಂಭ ಮಾಡಿ, ಅದರ ಜೊತೆಯಲ್ಲಿ ವಿದ್ಯಾರ್ಥಿದೆಸೆ ಹೋರಾಟ ಮಾಡಿಕೊಂಡು, ಬೆಳೆದುಕೊಂಡು ಬಂದ ಮನುಷ್ಯ. ಮಲ್ಲಪ್ಪನವರು ಮತ್ತು ಮೂಡ್ಲೇಗೌಡರು ವಯಸ್ಸಾಗಿ ದಿವಂಗತರಾದರೆ, ಹರ್ಷಕುಮಾರ

ಗೌಡರಿಗೆ ಇನ್ನೂ ಬಹಳ ವಯಸ್ಸಿತ್ತು. ಬಹುಶಃ ಅ ದುಃಖವನ್ನು ಸಹಿಸಿಕೊಳ್ಳುವಂಥ ಶಕ್ತಿಯನ್ನು ಅವರ ಮನೆಯವರಿಗೆ, ಅವರ ತಮ್ಮಂದಿರಿಗೆ, ನನಗೆ ಅವರ ತಮ್ಮಂದಿರೆಲ್ಲಾ ಖಾಸಗಿಯಾಗಿ ಗೊತ್ತಿರುವುದರಿಂದ ಕೊಡಲಿ ಎಂದು ಹೇಳಿ ಹಾರೈಸುತ್ತೇನೆ. ಇನ್ನಿಬ್ಬರೇನು ದಿವಂಗತರಿದ್ದಾರೆ, ಅವರ ಬಗ್ಗೆ ನನಗೆ ಹೆಚ್ಚು ಪರಿಚಯವಿಲ್ಲದ್ದರಿಂದ, ಅವರ ಕುಟುಂಬಕ್ಕೂ ನಾನು ಸಂತಾಪವನ್ನು ವ್ಯಕ್ತ ಮಾಡುತ್ತೇನೆ. ಸನ್ಮಾನ್ಯ ರಾಜ್‌ಕುಮಾರ್‌ರವರು ಬಹುಶಃ ಅವರ ಬಗ್ಗೆ ಇಡೀ ರಾಜ್ಯ, ಇಡೀ ರಾಷ್ಟ್ರ ಮಾತನಾಡಿಬಿಟ್ಟಿದೆ. ಎಷ್ಟು ಮಾತನಾಡಿದರೂ ಕಡಿಮೆಯೇ ಅಂತಹ ಮೇರು ವ್ಯಕ್ತಿ ರಾಜ್‌ಕುಮಾರ್‌ರವರು. ಕನ್ನಡದ ಕಲಾ ರಂಗಕ್ಕೆ, ಅದರಲ್ಲೂ ನಾಟಕ ಮತ್ತು ಸಿನಿಮಾ ರಂಗಕ್ಕೆ ಅವರು ಕೊಟ್ಟಿರುವ ಕಾಣಿಕೆಯನ್ನು ನಾವು ಯಾವುತ್ತು ಮರೆಯುವ ಹಾಗೆ ಇಲ್ಲ. ನಾವು ಯಾವುದೋ ಒಂದು ಕಾರ್ಯಕ್ರಮ ನಡೆಸಬೇಕಾದರೆ, ರವಿ ಬೆಳಗರೆಯವರು ಒಂದು ಹೇಳಿದರು. ರಾಜ್‌ಕುಮಾರ್ ಏನು ಮಾಡಿದ್ದಾರೆಂದು ಕೇಳುವವರಿಗೆ ಉತ್ತರ ಹೇಳಬೇಕಾದರೆ ಬಹಳ ಕಷ್ಟ ಆಗುತ್ತೆ. ಆದರೆ, ಯಾರು ಯಾರು ಏನೇನು ಮಾಡಿದ್ದಾರೆ ಯಾವ ನೋವನ್ನು, ಯಾವ ನಲಿವನ್ನು ಡಾ: ರಾಜ್‌ಕುಮಾರ್ ವೈಯಕ್ತಿವಾಗಿ ಅಥವಾ ಸಾಮಾಜಿಕವಾಗಿ ಹಾಗೂ ಬೇರೆ ಕ್ಷೇತ್ರದಲ್ಲಿ ರಾಜ್ಯಕ್ಕೆ ಅಷ್ಟು ಮಾಡಿಲ್ಲವೆನ್ನುವ ಭಾವನೆಯಿದ್ದರೂ ಕೂಡ ಆತ ಒಬ್ಬ ಕಲಾತಪಸ್ವಿ. ಆವತ್ತಿನ ಕಾಲದಲ್ಲಿ ಅಂದರೆ 250, 300, 500 ರೂಪಾಯಿಗಳಿಗೆ ಒಂದು ಸಿನಿಮಾದಲ್ಲಿ ನಟಿಸುವಂಥ ಕಾಲದಲ್ಲಿ ಊಟಕ್ಕೆ ಕಷ್ಟ ಎನ್ನುವ ಕಾಲದಲ್ಲಿ ಚೆನ್ನೈನಲ್ಲಿ ವಾಸವಿದ್ದರೂ ಕೂಡ ನಾನು ಕರ್ನಾಟಕದ ಪರವಾಗಿರುತ್ತೇನೆಂಬ ಕೆಚ್ಚೇನಿತ್ತು, ಅದನ್ನು ಯಾವುದೇ ಒಬ್ಬ ಕನ್ನಡಿಗ ಇವತ್ತು ಎದೆ ತಟ್ಟಿಕೊಳ್ಳಬೇಕಾದಂಥ ಕೆಚ್ಚದು. ಅಂಥಾ ಒಬ್ಬ ಕಲಾ ಪ್ರೌಢಿಮೆ ನಮ್ಮ ಜೊತೆ ಇಲ್ಲ. ನಮಗೆ ಹಾಗೂ ನಮ್ಮ ತುಮಕೂರು ಜಿಲ್ಲೆಯವರಿಗೆ ಆತ ನಮಗೆ ಒಂದು ಶಾಲೆ, ಏಕೆಂದರೆ ಗುಬ್ಬಿ ವೀರಣ್ಣ ನಾಟಕ ಕಂಪೆನಿಯಿಂದ ಹೊರಗೆ ಬಂದ ಅನೇಕ ನಟರಲ್ಲಿ ಅವರೊಬ್ಬರು ಸಹಾಯಕ ನಟರಾಗಿ ಅಲ್ಲಿದ್ದು ತಮ್ಮ ತಂದೆಯವರು ಕಂಡ ಕನಸು ನನ್ನ ಮಗ ಒಂದು ದಿವಸ ಚಲನಚಿತ್ರದಲ್ಲಿ ನಟಿಸುತ್ತಾನೆಯೇ ಎಂಬ ಕನಸನ್ನು ಹಿಮಾಲಯ ಪರ್ವತದಷ್ಟು ಎತ್ತರಕ್ಕೇ ತೆಗೆದುಕೊಂಡು ಹೋದ ವ್ಯಕ್ತಿ ಅವರನ್ನು ನಾವು ಸ್ಮರಣೆ ಮಾಡದಿದ್ದರೆ ತಪ್ಪಾಗುತ್ತದೆ. ದುಃಖ ಏನೆಂದರೆ ಅಂತ್ಯಕ್ರಿಯೆಯಲ್ಲಿ ಭಾಗವಹಿಸಬೇಕು ಎಂದು ನಾವು ಅಂದುಕೊಂಡಿದ್ದೆವು. ಆದರೆ ಆವತ್ತಿನ ದಿವಸ ರಾಜ್ಯದಲ್ಲಿ ಬಹಳ ಗೊಂದಲವಿತ್ತು. ಅವರ ಅಂತ್ಯಕ್ರಿಯೆಯನ್ನು ಯಾವಾಗ ಮಾಡುತ್ತಾರೆ ಹೇಗೆ, ಮಾಡುತ್ತಾರೆಂದು ಅರ್ಥ ಮಾಡಿಕೊಳ್ಳುವುದರೊಳಗೆ ದೂರದರ್ಶನ ನ್ಯೂಸ್‌ನಲ್ಲಿ ಇನ್ನೊಂದು ರೀತಿಯಲ್ಲಿ ಅಂತ್ಯಸಂಸ್ಕಾರದಲ್ಲಿ ನಾವು ಭಾಗವಹಿಸಲಿಕ್ಕೆ ಆಗದಂತಹ ಪರಿಸ್ಥಿತಿ

ನಿರ್ಮಾಣವಾಗಿದೆಯೆನ್ನುವ ನ್ಯೂಸ್ ಅನ್ನು ದೂರದರ್ಶನದಲ್ಲಿ ನೋಡಿದೆವು. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಬಹಳ ಆವೇಶದಲ್ಲಿ ಹೇಳಿದರು. ಯಾರೋ ಮಾಡಿದ್ದಾರೆಂದು ತಾವು ಈಗ ರಾಜ್ಯದಲ್ಲಿ ಆಡಳಿತವನ್ನು ನಡೆಸುತ್ತಿದ್ದಿರಿ. ಅದಾಗಿ ಅನೇಕ ದಿವಸಗಳು ಆಗಿಹೋಯಿತು, ಇಷ್ಟರೊಳಗೆ ನೀವು ಒಂದು ವರದಿಯನ್ನು ರಾಜ್ಯಕ್ಕೆ ಕೊಡಬೇಕಾಗಿತ್ತು. ಸತ್ಯ ಅದು, ಡಾ: ರಾಜ್‌ಕುಮಾರ್‌ರವರ ಅಭಿಮಾನಿಗಳು ಮಾಡಿದ್ದಾರೆಂದು ನಾನು ಕೂಡ ಭಾವಿಸುವುದಿಲ್ಲ. ಅದನ್ನು ಕುಳಿತುಕೊಂಡು ಸ್ಕ್ರೀನ್‌ನ ಮೇಲೆ ನಡೆಯುತ್ತಿರುವ ದೃಶ್ಯಗಳನ್ನು ನೋಡಿದಾಗ ಅದು ಮ್ಯಾನ್ ಮೇಡ್ ಎಂದು, ಅದು ಉದ್ದೇಶಪೂರಿತವಾಗಿಯೆ ನಡೆಯುತ್ತಿದೆಯೆಂದು ಯಾರಿಗಾದರೂ ಅನ್ನಿಸುವುದು. ಆದರೆ ಇದಕ್ಕೆ ಪರಿಹಾರವೂ ಗೊತ್ತಾಗುತ್ತಿರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅಂತ್ಯಕ್ರಿಯೆಗೆ ಹೋಗಿ ಅಲ್ಲಿ ಭಾಗವಹಿಸಲಿಕ್ಕೆ ಆಗದೆ ವಾಪಸ್ಸು ಬಂದಿದ್ದು, ಪಾರ್ವತಮ್ಮ ರಾಜ್‌ಕುಮಾರ್ ಅವರು ಹಾಗೂ ಅವರ ಕುಟುಂಬದವರು ಅಂತ್ಯಕ್ರಿಯೆಯಲ್ಲಿ ಭಾಗವಹಿಸಲಿಕ್ಕೆ ಆಗದಿದ್ದುದು, ಕೊನೆಯದಾಗಿ ರಾಜ್‌ಕುಮಾರ್ ಅವರ ಅಂತಿಮ ದರ್ಶನ ಆಗದಿದ್ದುದು ಇವೆಲ್ಲಾ ನೋವಿನ ಸಂಗತಿಯಾದರೂ ನಾವೆಲ್ಲಾ ಭಾವೋದ್ವೇಗ ಎಂದು ಏನೂ ಭಾವಿಸಿಕೊಂಡು ಕುಳಿತಿದ್ದೇವೆ ಅದು ನಮ್ಮ ಹೇಡಿತನವೆಂದು ನಾನು ಭಾವಿಸುತ್ತೇನೆ. ಇಡೀ ರಾಜ್ಯಕ್ಕೆ ಕಪ್ಪು ಚುಕ್ಕೆ ಇಟ್ಟ ದಿವಸ, ಇಡೀ ರಾಜ್ಯದ ಘನತೆಗೆ, ಗೌರವಕ್ಕೆ ಚ್ಯುತಿ ತಂದಂತಹ ದಿವಸವದು. ಆವತ್ತು ರಾಜ್‌ಕುಮಾರ್ ದಿವಂಗತರಾಗಿದ್ದಕ್ಕೆ ಎಷ್ಟು ನೋವಿತ್ತು, ಅವತ್ತು ನಡೆದ ಘಟನೆಗಳನ್ನು ನೋಡಿದರೆ ಕರ್ನಾಟಕದ ಬಗ್ಗೆ ಹೊರಗಡೆ ಏನು ತಿಳಿದುಕೊಳ್ಳುತ್ತಾರೆ, ಈ ರಾಜ್ಯದ ಸ್ಥಿತಿಯೇನು? ಈ ರಾಜ್ಯದ ಗೌರವವೇನು, ಸಂತಾಪ ಸೂಚಿಸುತ್ತಿದ್ದಾರೆಯೇ, ಗೂಂಡಾಗಿರಿ ಮಾಡುತ್ತಿದ್ದಾರೆಯೇ, ಕೈಯಲ್ಲಿ ಹೊಡೆಯುವುದನ್ನು ನಾವು ನೋಡುತ್ತಿದ್ದೆವು. ಪೊಲೀಸರು ಹೊಡೆಯುವುದನ್ನು, ಜನರು ಹೊಡೆಯುವುದನ್ನು ನೋಡುತ್ತಿದ್ದೆವು. ಇದೆಲ್ಲಾ ಕಣ್ಣಿಗೆ ಕಾಣುವಾಗ ಈ ರಾಜ್ಯದ ಗೌರವ, ಸಂಸ್ಕೃತಿ ಒಬ್ಬರ ಸಾವಿನಲ್ಲಿ ಈ ರೀತಿ ವ್ಯಕ್ತವಾಗಬಾರದಿತ್ತು, ನಾವು ಬಹಳ ಶಾಂತವಾಗಿ ಸಮಾಧಾನವಾಗಿ ನಮಗಾಗಿರುವ ದುಃಖವನ್ನು ವ್ಯಕ್ತಪಡಿಸಬೇಕಾಗಿತ್ತು. ಇಷ್ಟನ್ನು ಬಿಟ್ಟರೆ ಯಾರನ್ನೋ ಹೊಡೆದು, ಯಾರನ್ನೊ ಸಾಯಿಸಿದರೋ, ಯಾರದೋ ಆಸ್ತಿಗೆ ನಷ್ಟ ಉಂಟುಮಾಡಿದರೆ ರಾಜ್‌ಕುಮಾರ್ ವಾಪಸ್ಸು ಬರುವ ಸ್ಥಿತಿಯಲ್ಲಿದ್ದರೇ? ಅಕಸ್ಮಾತ್ ರಾಜ್‌ಕುಮಾರ್ ಏನಾದರೂ ವಾಪಸ್ಸು ಬರುವವರಿದ್ದರೆ ಎಲ್ಲರೂ ಸೇರಿ ಏನಾದರೂ ಮಾಡಬಹುದಾಗಿತ್ತು. ಎಲ್ಲರಿಗೂ, ಐದೂವರೆ ಕೋಟಿ ಕನ್ನಡಿಗರಿಗೆ ಆ ರೀತಿಯ ಸಾವಿನಿಂದ ನೋವಿತ್ತು, ಸಂತಾಪ ಇತ್ತು, ನಮ್ಮದೇ ಆದ ಸಂಕಟವಿತ್ತು, ಆವತ್ತಿನ ದಿವಸ ನಡೆದಿರುವ ಘಟನೆಗೆ ಸರ್ಕಾರದವರು ಏನಾದರೂ ಕ್ರಮ ಜರುಗಿಸಬೇಕು,

ಇದು ಆಕಸ್ಮಿಕವಾದದ್ದಲ್ಲ, ನಾನು ಒಪ್ಪುತ್ತೇನೆ, ಮೊದಲನೇ ದಿವಸ ಆಗಿದ್ದು, beyond anybody's control. ನಿರೀಕ್ಷೆ ಮಾಡಿರಲಿಲ್ಲ, ಅವರು ಮೃತರಾಗುತ್ತಾರೆ ಎನ್ನುವುದು ಗೊತ್ತಿರಲಿಲ್ಲ, ಅಂತ್ಯಸಂಸ್ಕಾರ ಎಲ್ಲಿ ಆಗುತ್ತದೆನ್ನುವುದು ಗೊತ್ತಿರಲಿಲ್ಲ. ತರಾತುರಿಯಲ್ಲಿ ತೀರ್ಮಾನ ತೆಗೆದುಕೊಳ್ಳುವಾಗ ಹೆಚ್ಚುಕಡಿಮೆ ಆಗುತ್ತದೆ. ಎರಡನೆಯ ದಿವಸವಾದರೂ ಸರ್ಕಾರದವರು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಅವರ ಅಂತ್ಯಕ್ರಿಯೆ ಮಾಡಲಿಕ್ಕೆ ಅವಕಾಶವನ್ನು ಕಲ್ಪಿಸಬೇಕಾಗಿತ್ತು. ನಾವು ಹೇಗಾದರೂ ಒಂದು ಅಂದಾಜನ್ನು ಮಾಡಬೇಕಾಗಿತ್ತು, ಎಷ್ಟು ಜನ ಸೇರುತ್ತಾರೆ, ಏನು ನಡೆಯಬಹುದು, ಜನಗಳ ಮಧ್ಯೆ ಎಂತೆಂಥ ಕೆಟ್ಟ ವ್ಯಕ್ತಿಗಳು ಸೇರಬಹುದು. ಸರ್ಕಾರ ಕೆಟ್ಟ ಹೆಸರು ತರಲಿಕ್ಕೆ ಚೇಷ್ಠೆಗೆ, ಅವರ ಯಾವುದೋ ಒಂದು ತೀಟೆ ತೀರಿಸಿಕೊಳ್ಳಲಿಕ್ಕೆ ಹೀಗೆ ವರ್ತಿಸಬಹುದು ಎಂಬುದನ್ನು ನೋಡಿಕೊಂಡು ಆ ವ್ಯವಸ್ಥೆಯನ್ನು ಸರಿಪಡಿಸಬೇಕಾಗಿತ್ತು. ಅನೇಕ ಜನ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲಿಕ್ಕೆ ಸಾಧ್ಯವಾಗದಂಥ ಪರಿಸ್ಥಿತಿ ಆವತ್ತು ನಿರ್ಮಾಣವಾಗಿದ್ದಕ್ಕೆ ಕಾರಣ ಏನು ಎಂಬುದಕ್ಕೆ ಈಗಲಾದರೂ ತಾವು ಒಂದು ತನಿಖೆಯನ್ನು ಮಾಡಿಸಬೇಕು. ಸನ್ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಯಾರು ಮಾಡಿದ್ದಾರೆಂಬುದು ನಮಗೆ ಗೊತ್ತಿಲ್ಲ, ಆ ವಾತಾವರಣ ನೋಡಿದರೆ ಏನೋ ನಡೆಯಬಾರದ್ದು ನಡೆಯುತ್ತಿದೆ ಎಂಬುದು, ಮಾಡಬಾರದ್ದು ಮಾಡಿಸುತ್ತಿದ್ದಾರೆಂದು ನಮಗೆ ಅನ್ನಿಸುತ್ತಿತ್ತು. ಅದಕ್ಕೆ ಸರ್ಕಾರ ತಕ್ಷಣ ಕ್ರಮ ಜರುಗಿಸಬೇಕು ಎಂದು ಕೇಳಿಕೊಂಡು ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ಅವರಿಗೆ ಡಾ: ರಾಜ್‌ಕುಮಾರ್‌ರವರ ಮಕ್ಕಳ ಕುಟುಂಬ ವರ್ಗದವರಿಗೆ ನಾನು ಕೂಡ ತಮ್ಮ ಜೊತೆ ಸೇರಿಕೊಂಡು ತಮ್ಮ ಪಕ್ಷದ ಹಾಗೂ ನನ್ನ ವೈಯಕ್ತಿಕ ಸಂತಾಪವನ್ನು ಸೂಚಿಸಿ ಅವರ ಕಲೆ ಮುಂಬರುವ ಕಲಾವಿದರಿಗೆ ಬರಲಿ ಎಂದು ಆಶಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಖರ್ಗೆಯವರನ್ನು ಕರೆದಿದ್ದೇನೆ.

†ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರಮಿಠಕಲ್): ಮಾನ್ಯ ಅಧ್ಯಕ್ಷರೆ, ಈಗಾಗಲೇ ತಾವು ಏನು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದಕ್ಕೆ ಸಂಪೂರ್ಣವಾಗಿ ಬೆಂಬಲಿಸುತ್ತಾ, ಇವತ್ತು ಸುಮಾರು ಏಳು ಜನ ನಿಧನ ಹೊಂದಿದ್ದಾರೆ. ಅದರಲ್ಲಿ ಐದಾರು ಜನರಂತೂ ನಮ್ಮ ಜೊತೆಯಲ್ಲಿ ಕೆಲಸ ಮಾಡಿದಂಥ ಮಹನೀಯರು ಇದ್ದಾರೆ. ವಿಶೇಷವಾಗಿ ಶ್ರೀ ಮಾರ್ಗದ ಮಲ್ಲಪ್ಪನವರು ನಮ್ಮ ಜೊತೆಯಲ್ಲಿ ಹೆಲ್ತ್ ಮಿನಿಸ್ಟ್ರ ಆಗಿದ್ದರು ಮತ್ತು ಸಾಕಷ್ಟು ಕೆಲಸವನ್ನು ಮಾಡಿ ತಮ್ಮದೇ ಆದಂಥ ಛಾಪನ್ನು ವಿಶೇಷವಾಗಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅವರು ಕೆಲಸ ಮಾಡಿದ್ದಾರೆ. ಅವರು ಸುಮಾರು ಮೂರು ನಾಲ್ಕು ಸಲ ಅಸೆಂಬ್ಲಿಗೆ ಆರಿಸಿ ಬಂದು ನಿಜವಾಗಲೂ

† ಮಾನ್ಯ ಸದಸ್ಯರು ನಡಾವಳಿಯನ್ನು ಪರಿಷ್ಕರಿಸಿದ್ದಾರೆ

ಒಬ್ಬ ಪ್ರಾಮಾಣಿಕ ಮತ್ತು ದಕ್ಷ ಮಂತ್ರಿಯಾಗಿ ದೇವರಾಜ್ ಅರಸ್ ಹಾಗೂ ಗುಂಡೂರಾವ್‌ರವರ ಸಚಿವ ಸಂಪುಟದಲ್ಲಿ ಕೆಲಸವನ್ನು ನಿರ್ವಹಿಸಿದ್ದಾರೆ. ಅದೇ ರೀತಿಯಾಗಿ ಎಸ್.ಪಿ. ತಲವಾಲಕರ್ ಇವರು ಬೆಳಗಾಂ ಜಿಲ್ಲೆಯಿಂದ ಬಂದರೂ ಕೂಡ ವಿಶೇಷವಾಗಿ ಹಿಂದುಳಿದ ಜನಾಂಗಕ್ಕೆ ಸೇವೆಯನ್ನು ಸಲ್ಲಿಸಿ ತನ್ನ ಕಾಲಿನ ಮೇಲೆ ನಿಂತು ಆರಿಸಿ ಬಂದಂತಹ ವ್ಯಕ್ತಿ, ಯಾವುದೇ ಒಂದು ಪಕ್ಷಕ್ಕೆ ಅವರು ಸಮೀಪದಿಂದ ಅವರು ಸದಸ್ಯರಿಲ್ಲದಿದ್ದರೂ ಕೂಡ ಸಮಾಜವಾದಿ ತತ್ವದ ಮೇಲೆ ಹೆಚ್ಚಿನ ನಂಬಿಕೆಯನ್ನು ಇಡತಕ್ಕಂಥ ತಲವಾಲಕರ್ ಕೂಡ ನಮ್ಮ ಜೊತೆಯಲ್ಲಿ ಕೆಲಸ ಮಾಡಿರುವುದನ್ನು ನಾವು ನೋಡಿದ್ದೇವೆ. ವಿಶೇಷವಾಗಿ ಈ ಒಂದು ಸಾಮಾಜಿಕ ನ್ಯಾಯದ ಅಡಿಯಲ್ಲಿ ಕೆಲಸವನ್ನು ಮಾಡಿದ್ದಾರೆ. ಎಸ್.ಡಿ. ಸಾಮ್ರಾಜ್ಯರವರು ತಮಗೆಲ್ಲಾ ಗೊತ್ತಿರುವಂತೆ ಸಹಕಾರಿ ಕ್ಷೇತ್ರದಲ್ಲಿ ತನ್ನದೇ ಆದಂಥ ಛಾಪನ್ನು ಹೊಂದಿದ ಹಾಗೂ ಬ್ರಹ್ಮಾವರ ಕ್ಷೇತ್ರದಿಂದ ಸುಮಾರು ಮೂರು ಬಾರಿ ಆರಿಸಿ ಬಂದಂತಹ ವ್ಯಕ್ತಿ, ಜೈನ ಸಮಾಜಕ್ಕೆ ಸೇರಿದ್ದರೂ ಕೂಡ ಅವರು ಸುಮಾರು ಮೂರ್‍ನಾಲ್ಕು ಬಾರಿ ಒಂದೇ ಕ್ಷೇತ್ರದಿಂದ ಸತತವಾಗಿ ಆರಿಸಿ ಬಂದು ಸಹಕಾರಿ ರಂಗದಲ್ಲೂ ಕೂಡ ಅವರು ಒಳ್ಳೆಯ ಕೆಲಸವನ್ನು ಮಾಡಿ ಹೆಸರುವಾಸಿಯಾಗಿದ್ದಾರೆ. ಹರ್ಷಕುಮಾರಗೌಡರು ನಮ್ಮ ಜೊತೆಯಲ್ಲಿ ಶಾಸಕರಾಗಿದ್ದರು. ಯುವಕರಾಗಿದ್ದರು, ಆದರೆ, ಅವರದು ಪ್ರಿಮೆಚೂರ್ ಡೆತ್, ಅವರು ಇಷ್ಟ ಬೇಗ ನಮ್ಮಿಂದ ಅಗಲಿ ಹೋಗುತ್ತಾರೆಂದು ನಮಗೆ ಅನ್ನಿಸಿರಲಿಲ್ಲ, ಹಾಗಾಗಿ ಅವರ ನಿಧನದಿಂದಲೂ ಕೂಡ ನನಗೆ ವೈಯಕ್ತಿಕವಾದ ದುಃಖವಾಗಿದೆ, ಶ್ರೀ ಪಿ. ಮೂಡ್ಲೇಗೌಡರು ಬಹಶಃ ನಮಗಿಂತ ಮುಂಚೆ ಬಹಳ ಹಿಂದೆ ಶಿರಾದಿಂದ ಆರಿಸಿ ಸದಸ್ಯರಾಗಿದ್ದರು, ಇವರ ಜೊತೆಯಲ್ಲಿ ಕೆಲಸ ಮಾಡತಕ್ಕಂಥ ಅವಕಾಶ ನಮಗೆ ಸಿಗದಿದ್ದರೂ ಕೂಡ ಒಬ್ಬ ಒಳ್ಳೆಯ ಸಜ್ಜನ ವ್ಯಕ್ತಿ ಎನ್ನುವಂಥ ಮಾತನ್ನು ಶಿರಾ ಮತ ಕ್ಷೇತ್ರದಿಂದ ಬಂದಂತಹ ಅನೇಕ ಶಾಸಕರು ಹೇಳುತ್ತಿದ್ದರು. ಅವರೂ ಕೂಡ ನಮ್ಮನ್ನು ಅಗಲಿದ್ದಾರೆ ಮತ್ತು ಮೊದಗೇಕರ್ ದೇಸಾಯಿ ನಮ್ಮ ಜೊತೆಯಲ್ಲಿ ಕೆಲಸ ಮಾಡಿದ್ದರು. ಅವರು ಬಹಳ ಸರಳ, ಸಭ್ಯ, ಸಜ್ಜನರು, ಸದನದಲ್ಲಿ ಹೆಚ್ಚಿನ ರೀತಿಯಲ್ಲಿ ಮಾತನಾಡಿ ಯಾವುದೇ ಒಂದು ಗೊಂದಲಕ್ಕೆ ಸಿಲುಕಿಕೊಳ್ಳುವ ಪ್ರಯತ್ನ ಮಾಡಿಲ್ಲ. ಏಕೆಂದರೆ ಇತ್ತೀಚೆಗೆ ಎಂಇಎಸ್ ಸದಸ್ಯರುಗಳ ಮಾತು ದಾಟಿ ನೋಡಿದ ಮೇಲೆ ಇವರಿಗೆ ಹೋಲಿಸಿದಾಗ, ನಿಜವಾಗಿಯೂ ಇವರು ಶಾಂತಪ್ರಿಯರು ಎನ್ನುವ ಮಾತನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ. ಕೊನೆಯದಾಗಿ, ಡಾ: ರಾಜ್‌ಕುಮಾರ್‌ರವರ ಬಗ್ಗೆ ಎಲ್ಲರೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಪದ್ಮಭೂಷಣ, ದಾದಾಸಾಹೇಬ್ ಫಾಲ್ಕೆ ಅವಾರ್ಡ್ ಸ್ವೀಕರಿಸಿದ್ದಾರೆ, ಹೀಗೆ ಅನೇಕ ಪದವಿಗಳನ್ನು ಕೊಟ್ಟರು ಕೂಡ ಕಡಿಮೆ. ಅಂತಹ ಡಾ: ರಾಜ್‌ಕುಮಾರ್‌ರವರು ಕನ್ನಡಿಗರಿಗೆ ವಿಶೇಷವಾದಂತಹ ಕೊಡುಗೆ ಎಂದರೆ ತಪ್ಪಾಗಲಾರದು. ಏಕೆಂದರೆ,

ಅವರಿಗೆ ಯಾವಾಗಲೂ ಕೂಡ ಈ ಫಿಲಂನಲ್ಲಿ ಪಾತ್ರ ವಹಿಸುತ್ತಿದ್ದಾಗ, ಕನ್ನಡ ಚಿತ್ರಗಳನ್ನು ಬಿಟ್ಟು ಬೇರೆ ಯಾವ ಭಾಷೆಯ ಚಿತ್ರದಲ್ಲೂ ಕೂಡ ಕೆಲಸ ಮಾಡಲಿಲ್ಲ. ಅನೇಕ ಜನ ಹಣದ ಆಸೆಗಾಗಿ ಅಥವಾ ಬೇರೆ ರೀತಿಯಿಂದ ಆಕರ್ಷಿತರಾಗಿ ಬೇರೆ ಬೇರೆ ಭಾಷೆಗಳ ಚಲನಚಿತ್ರಗಳಲ್ಲಿ ನಟಿಸುವುದನ್ನು ಮಾಡಿದ್ದಾರೆ. ಆದರೆ ಡಾ: ರಾಜ್‌ಕುಮಾರ್‌ರವರು ಕನ್ನಡ ಚಲನ ಚಿತ್ರಗಳನ್ನು ಬಿಟ್ಟು ಬೇರೆ ಯಾವುದೇ ಭಾಷೆಯ ಚಲನಚಿತ್ರಗಳಲ್ಲಿ ಅವರು ಪಾದಾರ್ಪಣೆ ಮಾಡಿ ಕೆಲಸ ಮಾಡಲಿಲ್ಲ, ಇದು ಅವರ ವಿಶೇಷವಾದಂತಹ ಗುಣ, ಹಠ, ಛಲ ಇವುಗಳನ್ನು ಅವರು ಕೊನೆಯವರೆಗೆ ಉಳಿಸಿಕೊಂಡು ಈ ರಾಜ್ಯಕ್ಕೆ, ಭಾಷೆಗೆ, ನೆಲಕ್ಕೆ, ಜಲಕ್ಕೆ ಅವರು ತಮ್ಮದೇ ಆದಂತಹ ಕೊಡುಗೆಯನ್ನು ಕೊಟ್ಟಿದ್ದಾರೆ. ಅಂತಹ ಮಹಾನ್ ವ್ಯಕ್ತಿಯನ್ನು ನೆನೆಸಿಕೊಂಡು ಇವತ್ತು ಈ ದಿವಸದ ಅಧಿವೇಶನವನ್ನು ಮುಂದೂಡಬೇಕೆನ್ನುವ ಪ್ರಸ್ತಾವನೆ ಏನಿದೆ ಅದಕ್ಕೆ ನಾವು ಕೂಡ ಒಪ್ಪುತ್ತೇವೆ. ಆದರೆ, ಜೊತೆಗೆ, ಅವರು ನಿಧನದ ಸಂದರ್ಭದಲ್ಲಿ ಏನು ಘಟನಾವಳಿಗಳು ನಡೆಯಿತು ಎನ್ನುವುದರ ಬಗ್ಗೆ ನಾವು ವಿವರವಾಗಿ ಮಾತನಾಡುವುದಕ್ಕಾಗುವುದಿಲ್ಲ. ಏಕೆಂದರೆ ಸಂತಾಪ ಸೂಚನೆಯ ಮೇಲೆ ನಾವೆಲ್ಲರೂ ಸೇರಿ ಒಗ್ಗಟ್ಟಾಗಿ ಒಪ್ಪಿ ಸಂತಾಪ ಸೂಚನೆಯನ್ನು ಅವರ ಕುಟುಂಬ ವರ್ಗದವರಿಗೆ ಕಳುಹಿಸಬೇಕಾದರೆ ನಾಳೆ ನಾವು ಇದರ ಮೇಲೆ ಚರ್ಚೆ ಮಾಡೋಣ. ಯಾರದು ತಪ್ಪು, ಏತಕ್ಕೆ ಈ ರೀತಿಯಾಗಿ ಅಯಿತು? ಏತಕ್ಕೆ ಸರ್ಕಾರ ವಿಫಲವಾಯಿತು? ಅಥವಾ ಇದರಲ್ಲಿ ಯಾರ್ಯಾರದು ವಿಫಲತೆ ಎಂಬುವ ಪ್ರಶ್ನೆಗಳನ್ನು ನಾವು ಅವಾಗ ಪ್ರಸ್ತಾಪ ಮಾಡೋಣ. ಆದರೆ, ನಾನು ಒಂದು ಅಂಶವನ್ನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಉಪ ಮುಖ್ಯ ಮಂತ್ರಿಗಳು ಇಲ್ಲಿರುವುದರಿಂದ ಕೇಳುವುದಿಷ್ಟೆ, ಯಾರು ಪೋಲೀಸ್ ಫೈರಿಂಗ್‌ಲ್ಲಿ ಸತ್ತು ಹೋಗಿದ್ದಾರೊ ಅಥವಾ ನೊಂದಂತಹ ಜನರಿಗೆ ಪರಿಹಾರ ಕೊಡಬೇಕೆಂದು ನಾವು ಪದೇ ಪದೇ ಪ್ರಸ್ತಾಪ ಮಾಡಿದ್ದೇವೆ, ಅ ದಿವಸವು ಪ್ರಸ್ತಾಪ ಮಾಡಿದ್ದೇವೆ ತದನಂತರ ನಾಲ್ಕೈದು ದಿವಸಗಳಾದ ಮೇಲು ಪ್ರಸ್ತಾಪ ಮಾಡಿದ್ದೇವೆ, ಇತ್ತೀಚೆಗೆ 50 ದಿವಸಗಳಲ್ಲಿ ಸುಮಾರು ಮೂರ್ನಾಲ್ಕು ಸಲವಾದರೂ ಪ್ರಸ್ತಾಪ ಮಾಡಿದ್ದೇವೆ. ಆದರೂ ಇನ್ನು ಸರ್ಕಾರ ಏಕೋ ಮನಸ್ಸು ಮಾಡಿಲ್ಲ. ಈ ಹಿಂದೆ ನಡೆದಂತಹ ಅನೇಕ ಘಟನೆಗಳಿಗೆ ಸರ್ಕಾರ ಒಂದಲ್ಲ ಒಂದು ರೂಪದಲ್ಲಿ ಕೊಟ್ಟಂತಹ ಉದಾಹರಣೆಗಳಿವೆ ಆದರೆ ಈ ಘಟನೆಗೆ ಸಂಬಂಧಿಸಿದಂತೆ ಏತಕ್ಕೆ ಪರಿಹಾರ ಕೊಡುತ್ತಿಲ್ಲವೆಂಬುದು ನನಗೆ ಅರ್ಥವಾಗುತ್ತಿಲ್ಲ. ಎರಡನೆಯದಾಗಿ, ಅಂತಹ ಸಂದರ್ಭದಲ್ಲಿ ಏನೊಂದು ಘಟನೆ ನಡೆಯಿತು, ಆ ಬಗ್ಗೆ ಮಾನ್ಯ ಯಡಿಯೂರಪ್ಪನವರು ಕೂಡ ಬಹಳ ಗಂಭೀರವಾಗಿ ಹೇಳಿದ್ದಾರೆ ಮತ್ತೆ ಜೆಡಿ(ಯು)ನ ನಾಯಕರಾದ ಮಾನ್ಯ ಮಾಧುಸ್ವಾಮಿಯವರು ಕೂಡ ಹೇಳಿದ್ದಾರೆ, ಆ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆಯೂ ಇದೆ. ಇದು ಹೇಗಾಯಿತು, ಏನಾಯಿತು,

ಯಾರು ಮಾಡಿದ್ದಾರೆಂಬುದನ್ನು ಕಂಡು ಹಿಡಿಯುವ ಅವಶ್ಯಕತೆಯೂ ಇದೆ, ಏಕೆಂದರೆ ಇಂತಹ ಘಟನೆಗಳು ಇನ್ನು ಮುಂದೆ ಆಗಬಾರದು. ಆ ಸಂದರ್ಭದಲ್ಲಿ ಏನು ಘಟನೆಗಳಾಗಿವೆ ಮುಂದೆ ಈ ರೀತಿಯಾಗಿ ಆಗಬಾರದೆನ್ನುವ ರೀತಿಯಲ್ಲಿ ನಾವು ನಡೆದುಕೊಳ್ಳಬೇಕಾದರೆ ಅದರ ಬಗ್ಗೆ ತಿಳಿದುಕೊಳ್ಳುವ ಒಂದು ವ್ಯವಸ್ಥೆಯಾಗಬೇಕು. 50 ದಿವಸಗಳಾದರೂ ನಾವು ಸುಮ್ಮನೆ ಆ ಬಗ್ಗೆ ಅದನ್ನೇ ಹೇಳುತ್ತಾ ಹೋದರೆ ಯಾರೂ ಕೂಡ ಮೆಚ್ಚುವುದಿಲ್ಲ. ಅದಕ್ಕಾಗಿ ನನ್ನ ಮನವಿ ಏನಿದೆ ಆ ಬಗ್ಗೆ ನಾನು ಇಲ್ಲಿ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಇವತ್ತು ವಿಶೇಷವಾಗಿ ಸಂತಾಪ ಸೂಚನೆಯನ್ನು ಪ್ರಸ್ತಾಪ ಮಾಡುತ್ತಿದ್ದೇವೆ, ನಾನು ಕೂಡ ಈ ಸಂತಾಪ ಸೂಚನೆಯಲ್ಲಿ ಭಾಗಿಯಾಗಿ ತಾವು ಮಂಡಿಸಿದ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ): ಮಾನ್ಯ ಅಧ್ಯಕ್ಷರೆ, ಅನೇಕ ಗಣ್ಯರ ನಿಧನ ಹೊಂದಿರುವ ಬಗ್ಗೆ ತಾವು ತಂದಿರುವ ಸಂತಾಪ ಸೂಚನೆಗೆ ನನ್ನ ಸಂಪೂರ್ಣವಾದ ಬೆಂಬಲವನ್ನು ನೀಡಿ ಕೆಲವು ಮಾತುಗಳನ್ನು ಮಾತನಾಡುತ್ತೇನೆ. ಶ್ರೀಮಾನ್ ಮಾರ್ಗದ ಮಲ್ಲಪ್ಪನವರು ಸೇರಿದಂತೆ ನಾವೆಲ್ಲರೂ ಒಟ್ಟಿಗೆ ಶಾಸನಸಭೆಯಲ್ಲಿದ್ದೂ, ಪಾಪ ಒಳ್ಳೆಯ ವ್ಯಕ್ತ ಅಜಾತಶತ್ರು. ಆ ಕ್ಷೇತ್ರದಲ್ಲಿ ಅಪಾರವಾದ ಕೆಲಸವನ್ನು ಮಾಡಿರುವವರು, ಆರೋಗ್ಯ ಸಚಿವರಾಗಿಯೂ ಬಹಳ ಉತ್ತಮವಾದ ಕೆಲಸವನ್ನು ಮಾಡಿದರು. ಅದೇ ರೀತಿಯಾಗಿ ಹರ್ಷಕುಮಾರ್ ಗೌಡ ಅವರು ಬಹಳ ಚಿಕ್ಕವಯಸ್ಸಿನಲ್ಲೆ ನಿಧನ ಹೊಂದಿದ್ದು ನಮಗೆಲ್ಲರಿಗೂ ನೋವಾಗಿದೆ, ಮತ್ತೆ ಶಾಸನ ಸಭೆಗೆ ಬರಬೇಕೆಂದು ಬಹಳ ತೀವ್ರವಾದ ಚಿಂತನೆ ನಡೆದಿತ್ತು. ಆದರೆ ಶಾಸನಸಭೆಗೆ ಬರುವುದಕ್ಕಾಗಲಿಲ್ಲ. ಬಹಳ ಒಳ್ಳೆಯ ಸ್ನೇಹಿತರು. ಮೈಸೂರು ನಗರದ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಅಪಾರವಾದ ಕೆಲಸ ಮಾಡಿದವರು ಹರ್ಷಕುಮಾರಗೌಡರವರು. ಅದೇ ರೀತಿಯಾಗಿ ಶ್ರೀಯುತರಾದ ಎಸ್.ಬಿ. ತಲೆವಾಲ್‌ಕರ್‌ರವರು, ಎಸ್.ಡಿ. ಸಾಮ್ರಾಜ್ಯರವರು, ಪಿ. ಮೂಡ್ಲೇಗೌಡರು, ಕೆ.ಸಿ. ಮೊದಗೇಕರ್ ದೇಸಾಯಿಯವರು ಹೀಗೆ ಅನೇಕರು ಈ ಸದನದ ಸದಸ್ಯರಾಗಿ ಕೆಲಸ ಮಾಡಿರತಕ್ಕಂಥವರು.

ಈ ಸಂದರ್ಭದಲ್ಲಿ ಅತ್ಯಂತ ಮೇರು ವ್ಯಕ್ತಿತ್ವ ಹೊಂದಿ, ಈ ನಾಡಿನ ಚಲನಚಿತ್ರರಂಗಕ್ಕೆ ಅಪಾರವಾದ ಸೇವೆಯನ್ನು ಮಾಡಿದವರು ಶ್ರೀಮಾನ್ ಡಾ: ರಾಜ್‌ಕುಮಾರ್‌ರವರು. ಡಾ: ರಾಜ್‌ಕುಮಾರ್‌ರವರನ್ನು ಬಹಳ ವರ್ಷದಿಂದ ನಾನು ನೋಡಿದ್ದೇನೆ, ಹತ್ತಿರದಿಂದ ನೋಡಿದ್ದೇನೆ. ಸುಮಾರು 1959-60ನೇ ಇಸವಿಯಲ್ಲಿ ತಮಿಳುನಾಡಿನಲ್ಲಿ ರಾ ಫಿಲಮ್ಸ್ ನಿಂತು ಹೋದಾಗ, ನಮ್ಮ ಕನ್ನಡ ಚಲನಚಿತ್ರರಂಗಕ್ಕೆ ಚಿತ್ರ ತೆಗೆಯುವುದಕ್ಕೆ ಫಿಲಮ್ ಸಿಗದೆ ತೊಂದರೆಯಾದ ಕಾಲ 1959-60ನೇ ಇಸವಿ. ಆಗ ನಾವು ತಮಿಳುನಾಡಿನಲ್ಲಿದ್ದಂತ ಎಲ್ಲಾ ನಟರನ್ನು,

ರಾಜ್‌ಕುಮಾರ್‌ರವರು, ಬಾಲಕೃಷ್ಣರವರು, ನರಸಿಂಹರಾಜುರವರು, ಜಿ.ವಿ. ಅಯ್ಯರ್ ಸೇರಿದಂತೆ ಎಲ್ಲರನ್ನು ಬೆಂಗಳೂರಿಗೆ ಕರೆದು ನಾಟಕಗಳನ್ನು ಗುಬ್ಬಿ ಥಿಯೇಟರ್‌ನಲ್ಲಿ ಮತ್ತು ಪುರಭವನದಲ್ಲಿ ಆಡಿಸಿದೆವು. ಇವೆಲ್ಲಾ ನೆನಪುಗಳು, ಇವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಗುಬ್ಬಿ ಥಿಯೇಟರ್ ಕಂಪನಿ ಸಾಹುಕಾರ್ ನಾಟಕ ಹೆಚ್‌ಎಂ ನಾಯಕ ನಾಟಕವಾಡಿದಾಗ, ಆ ನಾಟಕದ ಅಧ್ಯಕ್ಷತೆಯನ್ನು ಪ್ರಜವಾಣಿ ಪತ್ರಿಕೆಯ ಮಾಲೀಕರಾದ ಕೆ.ಎನ್. ಗುರುಸ್ವಾಮಿಯವರು ವಹಿಸಿದ್ದರು. ಕಿಡಿ ಶೇಷಪ್ಪನವರು ಮುಖ್ಯ ಅಥಿತಿಗಳು ಪಿ. ಕಾಳಿಂಗರಾವ್‌ರವರಿಂದ ಸ್ವಾಗತ ಗೀತೆ, ಇದು ಸಮಾರು 50 ವರ್ಷದ ಇತಿಹಾಸ. ಅ ಸಂದರ್ಭದಲ್ಲಿ ಸಾಹುಕಾರ್ ನಾಟಕವನ್ನು ನೆನಪಿಸಿಕೊಂಡರೆ, ನಾನು ನೋಡಿದಂತೆ ಇಂತಹ ನಟರು ಇಡೀ ಪ್ರಪಂಚದಲ್ಲಿ ಇಲ್ಲ. ನರಸಿಂಹರಾಜು, ಬಾಲಕೃಷ್ಣ, ಜಿ.ವಿ. ಐಯ್ಯರ್, ರಾಜ್‌ಕುಮಾರ್‌ರವರದು ಇವರದೇ ಆದಂತಹ ಒಂದು ಗುಂಪು. ಅದಾದ ಮೇಲೆ ಬೆಂಗಳೂರಿನಿಂದ ದೊಡ್ಡಬಳ್ಳಾಪುರ ಮತ್ತು ಚನ್ನಪಟ್ಟಣ ಇಲ್ಲಿ ನಾಟಕಗಳನ್ನು ಆಡಿಸಿದರು. ಅಂತಿಮವಾಗಿ ಅವರು ಒಂದು ಸಂಘವನ್ನು ಸ್ಥಾಪನೆ ಮಾಡಿದರು, ಅದು ಕನ್ನಡ ಚಲನಚಿತ್ರ ಕಲಾವಿದರ ಸಂಘ. ಆ ಸಂಘದ ಮೂಲಕ ರಣಧೀರ ಕಂಠೀರವ ಚಿತ್ರ ಆರಂಭದಲ್ಲಿ ತೆಗೆದರು, ಈ ಚಿತ್ರಕ್ಕೆ ಬೆಂಗಳೂರು ನಗರದಲ್ಲಿ ಚಿತ್ರ ಮಂದಿರಗಳಿಲ್ಲ, ಯಾವ ಚಿತ್ರಮಂದಿರಗಳು ಇಲ್ಲ, ದೊಡ್ಡ ಹೋರಾಟ ಮಾಡಿ ಅಂತಿಮವಾಗಿ ಸಿಕ್ಕ ಚಿತ್ರಮಂದಿರವೆಂದರೆ ಹಿಮಾಲಯ ಟಾಕೀಸ್, ಆ ಕಾಲದಲ್ಲಿ ಉತ್ತಮವಾದ ಟಾಕೀಸ್‌ಗಳು ಸಿಗಲಿಲ್ಲ. ತಮಗೆ ಹೇಳುವುದಾದರೆ, ಕನ್ನಡ ಚಿತ್ರರಂಗ ಬೆಳೆಯಬೇಕೆಂದು ಅಪಾರವಾದ ಹೋರಾಟವನ್ನು ನಾವೆಲ್ಲ ಮಾಡಿ ಸಂಪೂರ್ಣವಾದ ಬೆಂಬಲವನ್ನು ಕನ್ನಡ ಚಿತ್ರರಂಗಕ್ಕೆ ಆ ಸಂದರ್ಭದಲ್ಲಿ ಕೊಟ್ಟಿದ್ದೇವೆ. ರಣಧೀರ ಕಂಠೀರವ ಚಿತ್ರ ಇಡೀ ನಾಡಿನಲ್ಲೆ ಉತ್ತಮವಾದ ಚಿತ್ರವಾಗಿತ್ತು. ಅವರದೆ ಸ್ವಂತ ಚಿತ್ರ. ಅದಾದ ಮೇಲೆ ಬಂದ ಚಿತ್ರಗಳಲ್ಲಿ ಬಂಗಾರದ ಮನುಷ್ಯ ಚಿತ್ರ, ಕೆಂಪೇಗೌಡ ರಸ್ತೆಯಲ್ಲಿರುವ ಸ್ಟೇಟ್ ಟಾಕೀಸ್‌ನಲ್ಲಿ 100 ದಿವಸ ಪ್ರದರ್ಶನ ಕಾಣುವಾಗ ಈ ಚಿತ್ರವನ್ನು ತೆಗೆಯಬೇಕೆಂದು ಒಂದು ವಾಗ್ವಾದವಾಯಿತು. ಆವತ್ತಿನ ಸರ್ಕಾರದಲ್ಲಿ ಹೆಚ್.ಎಂ. ಚನ್ನಬಸಪ್ಪನವರು ಗೃಹಮಂತ್ರಿಗಳಾಗಿದ್ದರು. ಹೆಚ್.ಎಂ. ಚನ್ನಬಸಪ್ಪನವರು ಈ ನಾಡಿನ ಅತ್ಯಂತ ಎತ್ತರವಾದ ವ್ಯಕ್ತಿತ್ವವುಳ್ಳ, ಆದರ್ಶಪ್ರಾಯರಾದವರು. ನಾನು ಅವರಿಗೆ ಹೇಳಿದ್ದೆ, ಅಲ್ಲಿ ಸ್ಟೇಟ್ ಟಾಕೀಸ್‌ನಲ್ಲಿ ಚಿತ್ರ ತೆಗೆಯುತ್ತಿದ್ದಾರೆ, ಗಲಾಟೆಯಾಗುತ್ತದೆ ನೀವು ಆ ಚಿತ್ರಮಂದಿರದ ಮಾಲೀಕರನ್ನು ಕರೆದು ಹೇಳಿ ಖಂಡಿತ ಗಲಾಟೆ ನಿಲ್ಲುತ್ತದೆ ಅಂತ. ಅವರು ಸ್ವಲ್ಪ ಉದಾಸೀನ ಮಾಡಿದರು. ದೊಡ್ಡ ಗಲಾಟೆಯಾಗಿ ಹೋಯಿತು. ಆಗ ಈ ಸದನದಲ್ಲಿ ಚನ್ನಬಸಪ್ಪನವರು ಇದೆಲ್ಲ ವಾಟಾಳ್ ನಾಗರಾಜ್ ಮಾಡಿಸಿರುವುದು ಅಂತ ಹೇಳಿಕೆ ಕೊಟ್ಟರು. ನನ್ನ ಬಗ್ಗೆ ಒಂದು ತನಿಖೆ ಆಗ ಆರಂಭವಾಯಿತು. ನಾನು

ಮಾಡಿಲ್ಲ ಅಂದರೂ ಇಲ್ಲ ಮಾಡಿಸಿದ್ದೀರಿ ಅಂತ. ರಾಮಣ್ಣ ಅಂತ ಒಬ್ಬ ದಕ್ಷ ಪೋಲೀಸ್ ಕಮಿಷನರ್ ಬೆಂಗಳೂರಿನಲ್ಲಿದ್ದರು. ನಮ್ಮನ್ನೆಲ್ಲ ಬಂಧಿಸಿದರು, ಕೊನೆಗೆ ತನಿಖೆಯಾಯಿತು. ಅದರ ವರದಿಯನ್ನು ನಾನು ಕೇಳಿದಾಗ ಚನ್ನಬಸಪ್ಪನವರು ಎಷ್ಟು ಜಾಣ್ಮೆಯಿಂದ ಉತ್ತರ ಕೊಟ್ಟರು ಅಂದರೆ, ವರದಿಯನ್ನು ಇಲ್ಲಿ ಮಂಡಿಸಿದರೆ ವಾಟಾಳ್ ನಾಗರಾಜ್ ತಮ್ಮ ಸದಸ್ಯತ್ವ ಕಳೆದುಕೊಂಡು ಹೊರಗಡೆ ಹೋಗಬೇಕಾಗುತ್ತದೆ, ಅವರು ಈ ಸದನದಲ್ಲಿರಬೇಕೆಂದು ನಮ್ಮಿಚ್ಛೆ, ಆದ್ದರಿಂದ ವರದಿ ಮಂಡಿಸುವುದಿಲ್ಲ ಅಂತ ಬಹಳ ಬುದ್ಧಿವಂತಿಕೆಯಿಂದ ಮಾತನಾಡಿದರು. ಯಾಕೆ ಈ ಮಾತು ಹೇಳುತ್ತೇನೆ ಅಂದರೆ ಒಬ್ಬ ಯುಗಪುರುಷನ ಅಂತ್ಯ, ಕನ್ನಡ ಚಿತ್ರರಂಗದ ಒಬ್ಬ ದೊಡ್ಡ ಯುಗಪುರುಷ, ಅದರಲ್ಲೇನೂ ಬೇರೆ ಮಾತೇ ಇಲ್ಲ. ನಾನು ರಾಜಕುಮಾರ್‌ರನ್ನು ನೋಡಿದದ್ದು ಹಿಂದೆ ಅವರು ನಾಟಕದಲ್ಲಿ ಪಾತ್ರ ಮಾಡುತ್ತಿದ್ದರು ಉದ್ದನೆಯ ಕೂದಲು ಬಿಡುತ್ತಿದ್ದರು. ನರಸಿಂಹರಾಜುರವರ ನೆಂಟರ ಮನೆ ನಮ್ಮ ಪಟಾಲಮ್ಮ ಗುಡಿ ಬೀದೀಲಿ ಇತ್ತು. ಕೆ.ಎನ್. ಗುರುಸ್ವಾಮಿಯವರ ಸಂಬಂಧಿಕರು. ನಮ್ಮ ಊರಿನದೂ ಸಂಬಂಧ ಇತ್ತು. ನಾವು ಯಾವಾಗಲೂ ಅಲ್ಲಿ ಹೋದಾಗ ಪ್ರತಿದಿನ ಕೆ.ಎನ್. ಗುರುಸ್ವಾಮಿ ಇರುತ್ತಿದ್ದರು, ರಾಜಕುಮಾರ್ ಇರುತ್ತಿದ್ದರು. ಇದೆಲ್ಲ ದೊಡ್ಡ ಇತಿಹಾಸ. ರಂಗಭೂಮಿ ಮತ್ತು ಚಲನಚಿತ್ರ ಎರಡರಲ್ಲೂ ಅಪಾರ ಸೇವೆ ಮಾಡಿರುವವರು. ಗುಬ್ಬಿ ವೀರಣ್ಣನವರ ಕಂಪನಿಯಲ್ಲಿ ಸುಬ್ಬಯ್ಯನಾಯ್ಡು ಕಂಪೆನಿಯಲ್ಲಿ ಅಪಾರ ಕೆಲಸ ಮಾಡಿರುವವರು. ಇದಲ್ಲದೆ ನಮ್ಮಲ್ಲಿ ಅನೇಕ ನಾಟಕ ಕಂಪೆನಿಗಳು, ಹಿರಣ್ಣಯ್ಯ ನಾಟಕ ಕಂಪೆನಿ, ಪಿರ್‌ಸಾಹೇಬರ ನಾಟಕ ಕಂಪೆನಿ, ಈಗ ಅವೆಲ್ಲವೂ ಸಂಪೂರ್ಣವಾಗಿ ಮುಚ್ಚಿ ಹೋಗಿವೆ. ಶತಮಾನೋತ್ಸವ ಆಚರಿಸಿದಂತಹ ಗುಬ್ಬಿ ಕಂಪೆನಿ ಮುಚ್ಚಿಹೋಯ್ತು. 96 ವರ್ಷ ಆಗಿ ಇನ್ನು 4 ವರ್ಷ ಉಳಿದಿತ್ತು. ಆಗ ಕಂಪನಿಯನ್ನು ಮುಚ್ಚುತ್ತಿದ್ದರು, ಅದು ಶತಮಾನೋತ್ಸವ ಆಗ ಬೇಕೂಂತ ನಮ್ಮ ಇಚ್ಛೆಯಿತ್ತು. ಆಗ ಇಲ್ಲಿ ಡಿಕೆ ನಾಯ್ಕರ್ ಪುರಸಭಾ ಸಚಿವರಾಗಿದ್ದರು, ಅವರಿಗೆ ಹೇಳಿದೆ ಅವರು ಪ್ರತಿವರ್ಷ ಆ ಕಂಪೆನಿಗೆ ಸಹಕಾರ ಕೊಡುತ್ತೇವೆ ಇನ್ನು ಶತಮಾನೋತ್ಸವ ಆಚರಿಸಿ ಅಂದರು. ಶತಮಾನೋತ್ಸವ ಆಚರಣೆ ಆಯಿತು. ಈ ತರಹದ ಅನೇಕ ಕಂಪೆನಿಗಳು, ರಂಗಭೂಮಿ ಮತ್ತು ಚಲನಚಿತ್ರ ಎರಡರಲ್ಲೂ ಅದ್ವಿತೀಯ ಪಾಂಡಿತ್ಯ ಇದ್ದ ಪರಿಸ್ಥಿತಿಯಲ್ಲಿ ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ಮಾಡುತ್ತಿದ್ದೇನೆ. ಸರ್ಕಾರ ರಂಗಭೂಮಿ ಮತ್ತು ಚಲನಚಿತ್ರ ಭಂಡಾರ ಅಂತ ಸ್ಥಾಪನೆ ಮಾಡಿ. ಇವತ್ತು ಗುಬ್ಬಿ ವೀರಣ್ಣ ಧರಿಸುತ್ತಿದ್ದ ಉಡುಪು ಎಲ್ಲೂ ನಮ್ಮಲ್ಲಿಲ್ಲ. ವರದಾಚಾರರು ದೊಡ್ಡ ಮಹಾರಾಜನ ಪಾತ್ರ ಮಾಡಿದರೆ, ರಾಜರೇ ಬಂದರೇನೋ ಅನ್ನುವಂತೆ ಕಾಣುತ್ತಿತ್ತಂತೆ. ಅವರ ಉಡುಪುಗಳು ಇವತ್ತಿಲ್ಲ. ಮಾಸ್ಟರ್ ಹಿರಣ್ಣಯ್ಯನವರ ತಂದೆ ಕೆ. ಹಿರಣ್ಣಯ್ಯನವರಂತಹ ಒಬ್ಬ ವ್ಯಕ್ತಿ ಸಿಗುವುದಕ್ಕೆ ಸಾಧ್ಯವಿಲ್ಲ.

ಪೀರ್‌ಸಾಹೇಬ್ರದು ಅದ್ವಿತೀಯ ದೊಡ್ಡ ನಾಟಕ ಕಂಪೆನಿ. ಆಗೆಲ್ಲ ಕರ್ನಾಟಕದಲ್ಲಿ ವೃತ್ತಿ ರಂಗಭೂಮಿಯಿಂದ ಚಿತ್ರರಂಗದ ಬೆಳವಣಿಗೆಯಾಯಿತು. ನರಸಿಂಹರಾಜು ರಂಗಭೂಮಿ, ಬಾಲಕೃಷ್ಣ ರಂಗಭೂಮಿ, ಜಿ.ವಿ. ಅಯ್ಯರ್ ರಂಗಭೂಮಿ ರಾಜ್‌ಕುಮಾರ್ ರಂಗಭೂಮಿ, ಗಿರೀಶ್‌ಕಾರ್ನಾಡ್‌ರದು ಬೇರೆ ತರಹ, ವೃತ್ತಿ ರಂಗಭೂಮಿಯವರದು ಬೇರೆ ತರಹ. ವೃತ್ತಿ ರಂಗಭೂಮಿ ಅಂದರೆ ಅದೊಂದು ಇತಿಹಾಸ. ಅದಕ್ಕೆ ದೊಡ್ಡ ದೊಡ್ಡ ಶಕ್ತಿ ಇರುವುದು, ನಾನು ತಮಗೆ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ದಯಮಾಡಿ ತೀರ್ಮಾನ ತೆಗೆದುಕೊಳ್ಳಿ. ರಂಗಭೂಮಿ ಮತ್ತು ಚಲನಚಿತ್ರ ಭಂಡಾರ ಅಂತ ಮಾಡಿ. ರಾಜ್‌ಕುಮಾರ್‌ರವರು ಸುಮಾರು 200ಕ್ಕೂ ಮೇಲ್ಪಟ್ಟು ಚಿತ್ರಗಳಲ್ಲಿ ಮಾಡಿದ್ದಾರೆ. ಒಂದೊಂದೂ ಐತಿಹಾಸಿಕ ಚಿತ್ರ. ಎಲ್ಲಕ್ಕಿಂತ ಹೆಚ್ಚಾಗಿ ಭಾಷೆ ಸಂಭಾಷಣೆ ಕಾಗುಣಿತ ಯಾವುದೇ ಆಗಲಿ ಒಂದು ದಿನ ನಾನು ನೋಡಿದಂತೆ ಅದ್ವಿತೀಯವಾದ ಮಾತು. ಕೊನೆಕೊನೆಯಲ್ಲಿ ಹಾಡುವುದಕ್ಕೂ ಬಂದರು. ಅದರಲ್ಲೂ ಮೇರು ಶಿಖರಕ್ಕೆ ಹೊರಟುಹೋದರು. ಅದು ನನಗೆ ಬಹಳ ಸಂತೋಷದಾಯಕವಾದದ್ದು. ಅದರಲ್ಲೂ ಓಹಿಲೇಶ್ವರ, ಬಂಗಾರದ ಮನುಷ್ಯ ಬೇಡರ ಕಣ್ಣಪ್ಪ – ಪ್ರತಿ ಚಿತ್ರವೂ ಇವತ್ತು ಐತಿಹಾಸಿಕವಾಗಿ ಉಳಿಯುವಂತಹವು. ಆದ್ದರಿಂದ ಆ 200 ಚಿತ್ರಗಳ ಪ್ರಿಂಟ್ ಎಲ್ಲಿ ಯಾರ ಹತ್ತಿರ ಇದೆಯೋ ಅದನ್ನೆಲ್ಲ ಸರ್ಕಾರ ತೆಗೆದುಕೊಳ್ಳಬೇಕು. ಅದು ಯಾರೇ ತೆಗೆದುಕೊಂಡಿದ್ದರೂ ಅದಕ್ಕೊಂದು ಕಾಯಿದೆ ಮಾಡಿ ಚಲನಚಿತ್ರ ಹಾಗೂ ರಂಗಭೂಮಿ ಭಂಡಾರ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಅಷ್ಟೂ ಚಿತ್ರಗಳನ್ನು ಸರ್ಕಾರ ಈ ಭಂಡಾರಕ್ಕೆ ತರಬೇಕು. ಯಾಕೆಂದರೆ ಮತ್ತೆ ಅದು ಸಿಗುವುದಿಲ್ಲ. ಹರಿಶ್ಚಂದ್ರದಂತಹ ಚಿತ್ರ ಇನ್ನಿಲ್ಲ, ಹರಿಶ್ಚಂದ್ರ ಚಿತ್ರದ ಉದ್ಘಾಟನೆಯಲ್ಲಿ ನಿಜಲಿಂಗಪ್ಪವರು, ವಿಜಯಭಾಸ್ಕರ ರೆಡ್ಡಿ ಮುಖ್ಯ ಅತಿಥಿ. ಇವತ್ತಿಗೂ ಅದು ಭಟ್ಟಿ ಇಳಿಸಿದಂತಿದೆ. ನಿಜವಾಗಲೂ ಎಂ.ಪಿ. ಶಂಕರ್ ಎಂಥ ನಟ, ನಮ್ಮ ಕನ್ನಡದ ನರಸಿಂಹರಾಜು ಬಾಲಕೃಷ್ಣ ಲಾರೆಲ್ ಹಾರ್ಡಿಯವರೆನ್ನಲ ಮೀರಿಸಿ ಪ್ರಪಂಚವನ್ನೇ ಮೀರಿಸುವಂಥ ಇಬ್ಬರು ನಟರು. ತಮಗೆ ಹೇಳುತ್ತೇನೆ, ತಾವು ಯಾರೂ ನೋಡಿಲ್ಲ ಸಾಹುಕಾರ ನಾಟಕದಲ್ಲಿ ನರಸಿಂಹರಾಜು ಬಾಲಕೃಷ್ಣ ಇಬ್ಬರೂ ಗುಮಾಸ್ತರ ಪಾತ್ರ ಮಾಡುತ್ತಿದ್ದರು. ಒಂದು ನಿಮಿಷದಲ್ಲಿ 50 ಬಟ್ಟೆಗಳನ್ನು ಹೀಗೆ ತೆಗೆಯುವ ದೃಶ್ಯ ಇದೆಯಲ್ಲ ಹಾಗೆ ಇನ್ನೊಬ್ಬ ತೆಗೆಯಲು ಸಾಧ್ಯವಿಲ್ಲ. ಇಂಥ ಈ ಕನ್ನಡ ಚಿತ್ರರಂಗ ಭೂಮಿಯಲ್ಲಿ ಅಪಾರ ನಟರು ಹುಟ್ಟಿದ್ದು ನಮ್ಮ ಸೌಭಾಗ್ಯ ಈ ರಾಜ್ಯ ಧನ್ಯ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮಾನ್ಯ ಹಣಕಾಸು ಸಚಿವರಿಗೆ ಹೇಳುತ್ತಿದ್ದೇನೆ, ರಂಗಭೂಮಿ ಚಿತ್ರರಂಗದ ಭಂಡಾರ ತಾವು ದಯಮಾಡಿ, ನೂರು ಎಕರೆ 200 ಎಕರೆ ಪ್ರದೇಶವಾಗಲಿ ಅದರಲ್ಲಿ ರಂಗಭೂಮಿಯದೆಲ್ಲ ವಸ್ತು ಸಂಗ್ರಹ ಒಂದು ಕಡೆ, ಚಿತ್ರರಂಗದ ವಸ್ತುಗಳ ಸಂಗ್ರಹವೇ ಒಂದು ಕಡೆ, ಆ ಹಳೆಯ ಎಲ್ಲ

ಚಿತ್ರಗಳ ರೀಲುಗಳು ಪೋಸ್ಟರು ಉಡುಪು ಪ್ರತಿಯೊಂದನ್ನೂ ಅಲ್ಲಿಟ್ಟು ಇಡೀ ವಿಶ್ವದ ಜನರೇ ಬಂದು ನೋಡಬೇಕು. ಮಾನ್ಯ ಯಡಿಯೂರಪ್ಪನವರೇ ನಾವು ನೀವೂ ಇಂಗ್ಲೆಂಡಿಗೆ ಹೋದಾಗ ನೋಡಿದೆವು; ಷೇಕ್ಸ್‌ಪಿಯರ್ ನಾಟಕ ನೋಡಿದೆವು. ಆವತ್ತಿನ ಮರ ಹಗ್ಗ ಮಣ್ಣು ಹಾಗೆ ಇಟ್ಟಿದ್ದಾರೆ. ಲಂಡನಿನಲ್ಲಿ ಷೇಕ್ಸ್‌ಪಿಯರ್ ನಾಟಕ ಕಂಪೆನಿ ಹಾಗೇ ಇದೆ. ಎಷ್ಟು ವರ್ಷದ ಇತಿಹಾಸ. ನಮ್ಮಲ್ಲೂ ಆ ತರಹ ಇಡುವ ವ್ಯವಸ್ಥೆ ಆಗಬೇಕು. ಮತ್ತು ಪ್ರತಿ ಜಿಲ್ಲೆಗೂ, ಇವತ್ತೇನಾಗಿದೆ ಚಿತ್ರರಂಗ ಮತ್ತು ಟಿವಿ ಗದ್ದಲದಲ್ಲಿ ವೃತ್ತಿ ರಂಗಭೂಮಿ ನಾಶದ ಅಂಚಿಗೆ ಹೋಗಿದೆ. ಯಾವ ರಾಜಕುಮಾರ್ ವೃತ್ತಿರಂಗಭೂಮಿಯಿಂದ ಬಂದರು, ಯಾವ ರಾಜ್‌ಕುಮಾರ್ ತಂದೆ ವೃತ್ತಿ ರಂಗಭೂಮಿಯಲ್ಲಿದ್ದರು ಯಾವ ಪೀರ್ ಸಾಹೇಬ್ರಿದ್ದರು ಗುಬ್ಬಿ ವೀರಣ್ಣನವರಿದ್ದರು, ವರದಾಚಾರ್ ಇದ್ದರು ಇವರೆಲ್ಲರ ನೆನಪಿಗಾಗಿ ವೃತ್ತಿರಂಗಭೂಮಿಯನ್ನು ಪುನರುಜ್ಜೀವನಗೊಳಿಸಲು ಸಂಪೂರ್ಣ ಒಂದು ವ್ಯವಸ್ಥೆ ತಾವು ಮಾಡಬೇಕು. ಬೆಂಗಳೂರು ಒಂದರಲ್ಲಿ ಒಂದು ಕಾಲದಲ್ಲಿ ಒಂದು ಕಡೆ ಸುಬ್ಬಯ್ಯನಾಯ್ಡು ನಾಟಕ, ಗುಬ್ಬಿ ವೀರಣ್ಣನವರದು ಒಂದು ಕಡೆ, ಇನ್ನೊಂದು ಕಡೆ ಹಿರಣ್ಣಯ್ಯ, ಎಂ.ಸಿ. ಮಹಾದೇವಸ್ವಾಮಿ. ತಮಗೆ ಗೊತ್ತಿರಬಹುದು, ರಾಜ ವಿಕ್ರಮ ನಾಟಕ ಎಂ.ಸಿ. ಮಹಾದೇವಸ್ವಾಮಿಯವರದು ಜವಾಹರ್‌ಲಾಲ್ ನೆಹರೂ ಬಂದು ನೋಡಿದರು. ನೆಹರೂ 5 ನಿಮಿಷ ಸಾಕು ಅಂತ ಕೂತವರು, ಒಂದು ಗಂಟೆ ನೋಡಿದರು. ಅದರಲ್ಲಿ ಎಚ್.ಟಿ. ಅರಸು ದುರ್ಜಯನ ಪಾತ್ರ ಇನ್ನೊಬ್ಬರು ಮಾಡುವುದಕ್ಕೆ ಆಗುವುದಿಲ್ಲ. ಈ ತರಹ ಇತಿಹಾಸವೇ ಇದೆ. ರಾಜ್‌ಕುಮಾರ್‌ರವರದು ಇಷ್ಟು ಬೇಗ ತೀರುತ್ತಾರೆ ಅಂತ ನಾವ್ಯಾರೂ ಎಣಿಸಿರಲಿಲ್ಲ. ನನ್ನ ಕ್ಷೇತ್ರದ ಪಕ್ಕದ್ದೇ ತಾಳವಾಡಿ, ಅಲ್ಲೇ ಗಾಜನೂರು, ನಮ್ಮ ಜಿಲ್ಲೆಯಲ್ಲೇ ಸಿಂಗಾನಲ್ಲೂರು, ತಾಳವಾಡಿ ಕರ್ನಾಟಕಕ್ಕೆ ಸೇರಬೇಕು ಅಂತ ನಿರಂತರ ಹೋರಾಟ 69ನೇ ಇಸವಿಯಲ್ಲಿ ನಡೆಯಿತು, ತಮಗೆ ಗೊತ್ತಿದೆ. ಮತ್ತೆ ಅದು ಕನ್ನಡದ ಭೂಮಿಯಾಗಿ ಪರಿವರ್ತನೆಯಾಗಬೇಕು. ತಾಳವಾಡಿ ರಾಜ್‌ಕುಮಾರ್‌ರವರು ಬೆಳೆದು ಓಡಾಡಿದ ನೆಲ. ಅದು ನಮಗೆ ಸೇರಬೇಕು ಎಂಬುದು ನನ್ನ ಉದ್ದೇಶ. ಇದರ ಜತೆಗೆ ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ ಗಲಭೆ ಬಗ್ಗೆ ಹೇಳಿದರು. ಸುಮ್ಮನೆ ನಾವು ಸ್ವಲ್ಪ ಆತ್ಮಶೋಧನೆ ಮಾಡಿಕೊಳ್ಳೋಣ. ಒಬ್ಬರಿಗೊಬ್ಬರು ಯಾರು ಏನು ಮಾಡಿದರು ಎಂಬ ವಿಚಾರ ಬೇಡ. ನಾನು ನೇರವಾಗಿ ಹೇಳುತ್ತೇನೆ. ಇದು ತನಿಖೆಯಾಗಿ ಬಿಡಲಿ. ಯಾಕೆಂದರೆ ಒಬ್ಬ ಮೇರುನಟ ಸತ್ತಾಗ ಏನೇನು ವ್ಯವಸ್ಥೆ ಆಗಬೇಕಾಗಿತ್ತು ಅದಕ್ಕಿಂತ ಹೆಚ್ಚಾಗಿ ಎಲ್ಲೋ ಒಂದು ಕಡೆ ನಾವು ಆತ್ಮಶೋಧ ಮಾಡಿಕೊಳ್ಳೋಣ. ನಾವು ವಿಫಲರಾಗಿದ್ದೇವೆ. ನಾನೂ ಸಹ ತಮಗೆ ಹೇಳುವುದಾದರೆ ಆ ಗದ್ದಲದಲ್ಲಿ ನೋಡುವುದಕ್ಕಾಗದೇ ರಾತ್ರಿ 4 ಗಂಟೆಯಲ್ಲಿ ಹೋಗಿ ಸ್ಟೇಡಿಯಂನಲ್ಲಿ ನೋಡಿದೆ. ನಾವು ಮಧ್ಯೆ ಹೋದರೆ ನೀವೂ ಮೆರವಣಿಗೆಗೆ

ಬನ್ನಿ ಅಂತರೆ, ಅಲ್ಲೇನೋ ಗಲಾಟೆಗಳಾಗುತ್ತವೆ, ಇವೆಲ್ಲ ಆಗಬಾರದು ಅಂತ. ಆದ್ದರಿಂದ ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ: ಇದರಲ್ಲಿ ಯಾರೇ ಆಗಲಿ ಸಮಗ್ರ ತನಿಖೆಗೆ ತಾವು ಆದೇಶ ಮಾಡಿ. ಇದನ್ನು ತಾವು ಪಿತ್ೂರಿ ಎಂದು ಹೇಳಿದರೂ ಸಂತೋಷ. ನಾವು ಸ್ವಾಗತಿಸುತ್ತೇವೆ. ಈ ಪ್ರಕರಣದಲ್ಲಿ ನಡೆದಿರುವ ಪಿತೂರಿ ಹೊರಗಡೆ ಬರಲಿ, ಪೊಲೀಸಿನವರ ಗುಂಡಿಗೆ ಸತ್ತವರು ಅಮಾಯಕರು, ಗೋಲಿಬಾರ್ ಆಗುವುದು ಬೇಕಾಗಿತ್ತೆ? ಎಂಬುದು ನಮ್ಮ ಪ್ರಶ್ನೆ, ಶವ ಸಂಸ್ಕಾರದ ಸ್ಥಳದಲ್ಲಿ ಎಷ್ಟು ಜನ ಕುಳಿತುಕೊಳ್ಳಬೇಕಾಗಿತ್ತು? ಕನಿಷ್ಠ ಐವತ್ತು ಸಾವಿರ ಕುರ್ಚಿಗಳ ವ್ಯವಸ್ಥೆ ಮಾಡಿ ಅಲ್ಲಿ ಜನಗಳನ್ನು ನೋಡಿಕೊಳ್ಳುವ ವ್ಯವಸ್ಥೆ ಒಂದು ಕಡೆ, ರಸ್ತೆಗಳು ಯಾವ್ಯಾವ ಕಡೆಗೆ ಶವವಾಹನ ಹೋಗುತ್ತದೆ, ಇವೆಲ್ಲವನ್ನು ವ್ಯವಸ್ಥಿತಗಾಗಿ ಕುಳಿತು ಮಾತನಾಡಿ ಒಂದು ವ್ಯವಸ್ಥೆ ಮಾಡಿದರೆ ಹೀಗಾಗುತ್ತಿರಲಿಲ್ಲ ಎಂದು ನನಗೆ ಅನ್ನಿಸುತ್ತಿದೆ. ಎಲ್ಲೋ ಒಂದು ಕಡೆ ಪೊಲೀಸ್ ಸಂಪೂರ್ಣವಾಗಿ ವಿಫಲವಾಗಿದೆ ಎಂಬುದನ್ನು ನಾವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳೋಣ. ಹಾಗಾಗಿ ದಯಮಾಡಿ ಮಾನ್ಯ ಯಡಿಯೂರಪ್ಪನವರೇ ತಾವು ಹಾಗೂ ಮಾನ್ಯ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಇದರ ಬಗ್ಗೆ ಸಮಗ್ರವಾದ ತನಿಖೆ ಮಾಡಿಸಿ, ಈ ಪ್ರಕರಣದಲ್ಲಿ ಯಾರಿದ್ದಾರೆ ಎಂಬ ಬಗ್ಗೆ ಬಯಲಾಗಲಿ, ಮತ್ತೆ ವಿಶೇಷವಾದ ಸಂದರ್ಭ – ಯಾವಾಗಲೂ ಸತ್ತವರಿಗೆ ನೀವು 1 ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ, ನಮ್ಮ ಶರೀರಕ್ಕೆ ಸತ್ತ ತಕ್ಷಣ 1 ಲಕ್ಷ ರೂಪಾಯಿಗಳನ್ನು ಕೊಡುವುದು ಮುಖ್ಯವಲ್ಲ, ನಾನು ಇವತ್ತೇನು ಹೇಳುತ್ತೇನೆಂದರೆ ಕನಿಷ್ಠ ಆ ಸಂಸಾರಗಳ ಬಗ್ಗೆ ಕಾಳಜಿ ವಹಿಸಿ ಅವರು ಏನು ತೊಂದರೆಗಳನ್ನು ಅನುಭವಿಸುತ್ತಿದ್ದರೆ? ಅವರು ಯಾವ ಉತ್ಸಾಹದಲ್ಲಿ ಬಂದರು? ಯಾವುದಕ್ಕೋಸ್ಕರ ಬಂದರು? ಅವರು ಗುಂಡಿಗೆ ಏಕೆ ಬಲಿಯಾದರು? ಇದನ್ನೆಲ್ಲಾ ನೋಡಿದಾಗ, ಈಗಾಗಲೇ ಸರ್ಕಾರಕ್ಕೆ ಸತ್ತಿರುವವರ ಬಗ್ಗೆ ಮಾಹಿತಿ ಬಂದಿದೆ. ಹಾಗಾಗಿ ಪ್ರತಿ ಸಂಸಾರಕ್ಕೆ 5 ಲಕ್ಷ ರೂಪಾಯಿಗಳನ್ನು ತಾವು ಸತ್ತವರ ಕುಟುಂಬದವರಿಗೆ ಕೊಡಬೇಕೆಂದು ನಾನು ಒತ್ತಾಯಿಸುತ್ತೇನೆ. ಮತ್ತೊಂದು ನೋವಿನ ಪ್ರಸಂಗ, ನಮ್ಮ ಎಂ.ಡಿ. ನಂಜುಂಡಸ್ವಾಮಿಯವರು ತೀರಿಕೊಂಡರು. ಅವರು ಈ ರಾಜ್ಯದ ರೈತ ಸಂಘಕ್ಕೆ ಒಂದು ಶಕ್ತಿ ಕೊಟ್ಟವರು. ಅವರೇ ಹಸಿರು ಶಾಲನ್ನು ತಂದವರು. ಅವರು ತಂದಂತಹ ಆ ಹಸಿರು ನಾವು ರೈತರ ಮುಖಂಡರುಗಳು ಎಂದು ಎಲ್ಲರೂ ಹಾಕಿಕೊಳ್ಳುತ್ತೇವೆ. ಹಸಿರು ಶಾಲನ್ನು ತಂದಂತಹ ಬ್ರಹ್ಮ ನಮ್ಮ ಎಂ.ಡಿ. ನಂಜುಂಡಸ್ವಾಮಿಯವೆರು, ಅದರ ಬಗ್ಗೆ ಎರಡನೇ ಮಾತಿಲ್ಲ, ರೈತ ಸಂಘಕ್ಕೆ ಶಕ್ತಿ ಕೊಟ್ಟವರು ನಮ್ಮ ಎಂ.ಡಿ. ನಂಜುಂಡಸ್ವಾಮಿಯವರು. ಅವರು ತೀರಿಕೊಂಡಾಗ ಅವರ ಕಾಯಿಲೆಗಾಗಿ ಖರ್ಚಾಗಿದ್ದ ಹಣ ಒಂದು ಲಕ್ಷದ ಮುವತ್ತು ಸಾವಿರ ರೂಪಾಯಿಗಳನ್ನು ಕೊಡಿ ಎಂದು ನಾನು ಹಿಂದಿನ ಈ ಸದನದಲ್ಲಿ

ತಮಗೆ ಕಳುಹಿಸಿಕೊಟ್ಟಿದ್ದೆ. ಅದಕ್ಕೆ ಉತ್ತರ ಬಂದಿದೆ, ಕಾಲಕ್ಕೆ ಸರಿಯಾಗಿ ನೀವು ಪತ್ರ ಬರೆದಿಲ್ಲ, ಬಿಲ್‌ಗಳನ್ನು ಕೊಟ್ಟಿಲ್ಲ, ಆದ್ದರಿಂದ ಹಣವನ್ನು ನಿಮಗೆ ಕೊಡಬೇಕಾಗಿಲ್ಲವೆಂದು ಪತ್ರ ನನಗೆ ಬಂದಿದೆ. ಇದು ಯಾವ ನ್ಯಾಯ ಸ್ವಾಮಿ? ಸತ್ತಿರತಕ್ಕಂಥ ಮಾಜಿ ಶಾಸಕರುಗಳಿಗೆ ನೀವು ಕೊಡತಕ್ಕಂಥ ಗೌರವವೇ ಇದು? ಈ ಸಂದರ್ಭದಲ್ಲಿ ನಾನು ಬಹಳ ನೋವಿನಿಂದ ಹೇಳುತ್ತೇನೆ. ಇಲ್ಲಿ ಇಂದು ಯಾವ ಉದ್ದೇಶಕ್ಕೆ ನೀವು ಮಾಜಿ ಶಾಸಕರ ಬಗ್ಗೆ ನೀವು ಸಂತಾಪ ಮಾಡುತ್ತಿದ್ದೀರಿ? ಇದೇನು ಮೋಜಾ ಇದು, ಯಾರಿಗೋಸ್ಕರ ಬೇಕಾಗಿದೆ ಈ ಸಂತಾಪ ಸೂಚನೆ ಇದು? ಎಂ.ಡಿ. ನಂಜುಂಡಸ್ವಾಮಿಯವರಿಗೆ ಇಬ್ಬರು ತಾಯಂದಿರು ತೀರಕೊಂಡರು, ನಂಜುಂಡಸ್ವಾಮಿಯವರು ಹೋದರು, ಅವರ ಇಬ್ಬರು ಮಕ್ಕಳು, ಚುಕ್ಕಿ ನಂಜುಂಡಸ್ವಾಮಿ ಮತ್ತೊಬ್ಬರು, ಇಡೀ ಮನೆಯ ತುಂಬ ಇಬ್ಬರೇ ಇಬ್ಬರು, ಯಡಿಯೂರಪ್ಪನವರೇ, ಅಧ್ಯಕ್ಷರೇ ಕಣ್ಣೀರಿನ ಕಥೆಯನ್ನು ನಾನು ತಮಗೆ ಹೇಳುತ್ತಿದ್ದೇನೆ. ಇದರಲ್ಲಿ ನೀವು ಕಾಯ್ದೆಯನ್ನು ಬೇಕಾದರೂ ಬದಲಾವಣೆ ಮಾಡಿ, ಆದರೆ ಇದರಲ್ಲಿ ಮಾತ್ರ ಈ ಕ್ಷಣ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ, ತಾವಾದರೂ ಇದರ ಬಗ್ಗೆ ಗಮನ ಕೊಡಬೇಕು. ಒಂದು ಲಕ್ಷದ ಮೂವತ್ತು ಸಾವಿರ ರೂಪಾಯಿಗಳನ್ನು ಮಾತ್ರ, ಅದಕ್ಕಿಂತ ಹೆಚ್ಚಿಗೆ ಅವರೇನು ಕೇಳಿಲ್ಲ. ಅವರು ಬಿಲ್‌ಗಳನ್ನು ಕೊಟ್ಟಿದ್ದಾರೆ, ಈ ಬಗ್ಗೆ ಎರಡು ಬಾರಿ ನಾನು ಅರ್ಜಿಯನ್ನು ಕೊಟ್ಟಿದ್ದೇನೆ, ಅದು ಹಿಂದಕ್ಕೆ ಬಂದಿತು, ಇವತ್ತು ತಮಗೆ ಮೊದಲೇ ಹೇಳಿರುತ್ತೇನೆ, ಇದರ ಬಗ್ಗೆ ನಾಳೆಯೊಳಗೆ ತಾವು ತೀರ್ಮಾನ ತೆಗೆದುಕೊಳ್ಳಬೇಕು, ಇಲ್ಲವಾದರೆ ನಾನು ಬೆಳಿಗ್ಗೆ ಧರಣಿ ಮಾಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ತಮಗೆ ಸ್ಪಷ್ಟವಾಗಿ ಹೇಳಿ ಡಾ: ರಾಜ್‌ಕುಮಾರ್‌ರವರಿಗೆ ಅತ್ಯುನ್ನತವಾದಂಥ ಗೌರವವನ್ನು ಸರ್ಕಾರ ಮಾಡಬೇಕು, ಅವರ ಸ್ಮಾರಕವನ್ನು ಮಾಡಬೇಕು, ಇನ್ನು ಹೇಳುತ್ತಿದ್ದರೆ ಬೇಕಾದಷ್ಟು ದೊಡ್ಡ ಇತಿಹಾಸವೇ ಇದೆ. ಆದ್ದರಿಂದ ನಾನು ಅತ್ಯಂತ ಕಳಕಳಿಯಿಂದ ಮನವಿಯನ್ನು ಮಾಡುತ್ತಿದ್ದೇನೆ. ತಾವು ಈ ಸದನವನ್ನು ಏತಕ್ಕೆ ಕರೆದಿರಿ ಎಂಬ ಬಗ್ಗೆ ಆಮೇಲೆ ಮಾತನಾಡೋಣ. ಆದರೆ ಈ ಸದನವನ್ನು ಕರೆದ್ದು ಒಳ್ಳೆಯದಾಯಿತು. ಈಗ ತಕ್ಷಣಕ್ಕೆ ಅಂದರೆ ಯಾವುದೋ ಒಂದು ಸುದೈವ ಅಥವಾ ದೈವ, ಎಲ್ಲೋ ಒಂದ ಶಕ್ತಿ, ಅದ್ಯಾವುದನ್ನು ಸಹ ನಾವು ನಂಬದಿದ್ದರೂ ಈ ಸದನ ಆದಷ್ಟು ಬೇಗ ಡಾ: ರಾಜ್‌ಕುಮಾರ್‌ರವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾಗಿತ್ತು. ಹಾಗಾಗಿ ಬಹಳಷ್ಟು ಕಾಲ ಸದನ ಮುಂದಕ್ಕೆ ಹೋಗದೆ ಯಾವುದೋ ರೂಪದಲ್ಲಿ ಈ ಸದನ ಸೇರಿದೆ, ಆದ್ದರಿಂದ ಈ ಸಂತಾಪ ಸೂಚನೆಯಲ್ಲಿ ನಾನು ಭಾಗಿಯಾಗಿ ತಮಗೆ ಬಂಬಲ ಕೊಟ್ಟು ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಮಕ್ಕಳು, ಮನೆಯವರೆಲ್ಲರ ಬಗ್ಗೆಯೂ ನಮಗೆ ಅಪಾರವಾದ ಗೌರವವಿದೆ, ವಿಶೇಷವಾದ ಅನುಕಂಪವಿದೆಯೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಒಂದು ನಿಮಿಷ ಮಾನ್ಯ ಶ್ರೀರಾಮರೆಡ್ಡಿಯವರೆ, ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ನಂಜುಂಡಸ್ವಾಮಿಯವರ ವಿಚಾರ ಏನು ಪ್ರಸ್ತಾಪ ಮಾಡಿದ್ದಾರೆ. ಕೆಲವು ನಿಮಗಳು ಬದಲಾವಣೆಯಾಗಬೇಕಾಗಿದೆ. ಸ್ಪೆಷಲ್ ಬೋರ್ಡ್ ಕೆಲವು ನಿಯಮಗಳ ಪ್ರಕಾರ ಆ ವಿಷಯವನ್ನು ಅಂಗೀಕರಿಸಲು ಸಾಧ್ಯವಿಲ್ಲವೆಂದು ತಿರಸ್ಕರಿಸಿದೆ. ಆದ್ದರಿಂದ ಅದನ್ನು ಪರಿಗಣಿಸಿ, ಸ್ವಲ್ಪ ತಿದ್ದುಪಡಿ ಅಗತ್ಯವಿದ್ದರೆ ತಿದ್ದುಪಡಿ ಮಾಡಿ, ಇಂತಹ ಕೇಸ್‌ನಲ್ಲಿ ಕೊಡಲಿಕ್ಕೆ ಅವಕಾಶ ಮಾಡಿಕೊಡಲಾಗುವುದು.

ಶ್ರೀ ವಾಟಾಳ್ ನಾಗರಾಜ್: ಸರ್ ಮಾಜಿ ಶಾಸಕರೊಬ್ಬರು ಸತ್ತರೆ?

ಅಧ್ಯಕ್ಷರು: ಮಾನ್ಯ ನಾಗರಾಜ್‌ರವರೆ, ಎಲ್ಲವೂ ನಿಯಮಗಳಂತೆ ನಡೆಯಬೇಕಾಗುತ್ತದೆ, ಆದ್ದರಿಂದ ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಕೆಲವು ನಿಯುಮಗಳನ್ನು ಸಡಿಲಿಸಿ ತಿದ್ದುಪಡಿ ಮಾಡಿ ಎಂದು ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳಿಗೆ ನಾನು ಹೇಳುತ್ತಿದ್ದೇನೆ. ಅವರು ಹಾಗೆಯೇ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪರಿಹಾರ ನಿಧಿಯಿಂದ ಕೊಡಲಿ, ಯಾವುದರಿಂದಲಾದರೂ ಕೊಡಲಿ, ಇದರಿಂದ ನಮಗೆ ಬಹಳ ನೋವಾಗುತ್ತದೆ.

ಅಧ್ಯಕ್ಷರು: ಅದಕ್ಕೆ ನಾನು ಅವರಿಗೆ ಈ ನಿಯಮವನ್ನು ಸಡಿಲಿಸಿ ಮಾಡಿಕೊಡಿ ಎಂದು ಹೇಳಿದ್ದೇನೆ. ಮಾನ್ಯ ಶ್ರೀರಾಮರೆಡ್ಡಿಯವರೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ಸರ್, ಈ ವಿಷಯವನ್ನು ಪ್ರಸ್ತಾಪಿಸಲಿಕ್ಕೆ ಇದು ಒಳ್ಳೆಯ ಸಂದರ್ಭ, ಅದಕ್ಕಾಗಿಯೇ ಈ ಮಾತನ್ನು ಹೇಳುತ್ತೇನೆ. ಶ್ರೀ ಪುಟ್ಟದಾಸ್ ಅವರೂ ಸಹ ಮಾಜಿ ಶಾಸಕರು, ಅವರು ಸಹ ಆಸ್ಪತ್ರೆಗೆ ಹೋಗುತ್ತಿದ್ದಾರೆ, ಅವರೂ ಸಹ ಅರ್ಜಿಯನ್ನು ಕಳುಹಿಸಿರುತ್ತಾರೆ. ಆಗ ಅವರ ಅರ್ಜಿಯೂ ಸಹ ನಮಗೆ ಬಂದೇ ಇಲ್ಲ ಎಂದು ಹೇಳುತ್ತಾರೆ. ಈ ರೀತಿ ಆದರೆ ಮಾಜಿ ಶಾಸಕರ ಗತಿಯೇನು? ಇದರ ಬಗ್ಗೆ ತಾವೆಲ್ಲಾ ಚಿಂತನೆ ಮಾಡಬೇಕು.

ಅಧ್ಯಕ್ಷರು: ನಿಯಮಗಳ ಪ್ರಕಾರ ಮಾಡಬೇಕಾಗುತ್ತದೆ, ನಿಯಮಗಳನ್ನು ಬಿಡುವುದಕ್ಕಾಗುವುದಿಲ್ಲ. ಆದರೆ ಕೆಲವೊಂದು ವಿಚಾರಗಳಲ್ಲಿ ನಿಯಮಗಳ ಬದಲಾವಣೆಯಾಗಬೇಕಾದರೆ ಅಂತಹ ಸಂದರ್ಭದಲ್ಲಿ ಬದಲಾವಣೆ ಮಾಡಲಾಗುವುದು.

ಶ್ರೀ ವಾಟಾಳ್ ನಾಗರಾಜ್: ಸರ್ ಒಂದು ಇಂಜೆಕ್ಷನ್ ಮೂವತ್ತು ಸಾವಿರ ರೂಪಾಯಿಗಳಾಗುತ್ತದೆ.

ಅಧ್ಯಕ್ಷರು: ಆಯಿತು, ನೀವು ದಯಮಾಡಿ ಕುಳಿತುಕೊಳ್ಳಿ, ಶ್ರೀರಾಮರೆಡ್ಡಿಯವರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್: ಇವತ್ತು ಆಯಿತು ಎಂದು ಕುಳಿತುಕೊಳ್ಳಿ ಎಂದು ಹೇಳಿಬಿಡುತ್ತೀರಿ, ನಾಳೆ ಮತ್ತೆ ಅದೇ ಪರಿಸ್ಥಿತಿ.

ಅಧ್ಯಕ್ಷರು: ಈಗ ನಂಜುಂಡಸ್ವಾಮಿಯವರ ಬಗ್ಗೆ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಮಾಜಿ ಸಚಿವರು ಹಾಗೂ ಮಾಜಿ ಸದಸ್ಯರಾದ ಶ್ರೀ ಮಾರ್ಗದ ಮಲ್ಲಪ್ಪ, ವಿಧಾನಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಎಸ್.ಪಿ. ತಲವಾಲ್‌ಕರ್, ಶ್ರೀ ಎಸ್.ಡಿ. ಸಾಮ್ರಾಜ್ಯ, ಶ್ರೀ ಕೆ. ಹರ್ಷಕುಮಾರಗೌಡ, ಶ್ರೀ ಪಿ. ಮೂಡ್ಲಿಗೌಡ, ಶ್ರೀ ಕೆ.ಸಿ. ಮೊದಗೇಕರ್ ದೇಸಾಯಿ ಹಾಗೂ ಡಾ: ರಾಜ್‌ಕುಮಾರ್ ಅವರುಗಳ ನಿಧನಕ್ಕೆ ತಂದಿರುವ ಸಂತಾಪ ಸೂಚನೆಗೆ ನನ್ನ ಪಕ್ಷದಿಂದ ನಾನು ಬೆಂಬಲಿಸುತ್ತೇನೆ. ಈ ಮಾಜಿ ಶಾಸಕರ ಬಗ್ಗೆ ನಾವಿರುವಾಗ ಇವರ್‍ಯಾರು ಸದಸ್ಯರಾಗಿಲ್ಲದ ಕಾರಣ ಅವರ ಬಗ್ಗೆ ನಮಗೆ ಅಷ್ಟೇನೂ ಗೊತ್ತಿಲ್ಲ. ಆದರೆ ಮಾರ್ಗದ ಮಲ್ಲಪ್ಪ ಮತ್ತಿತರ ಬಗ್ಗೆ ಅವರ ಸರಳತೆ ಹಾಗೂ ಪ್ರಮಾಣಿಕತೆಯ ಬಗ್ಗೆ ನಾವು ಸಣ್ಣ ಹುಡುಗರಾಗಿದ್ದಾಗ ಪತ್ರಿಕೆಗಳಲ್ಲಿ ಓದುತ್ತಿದ್ದೆವು. ಆದರೆ ಇಂದಿನ ರಾಜಕಾರಣದಲ್ಲಿ ಅಂದಿನ ಸದಸ್ಯರಲ್ಲಿದ್ದ ಪ್ರಾಮಾಣಿಕತೆ, ಸರಳತೆ, ಸಜ್ಜನಿಕೆ ನಾಪತ್ತೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಅವರನ್ನು ಎಲ್ಲೋ ಒಂದು ಕಡೆ ಆದರ್ಶರನ್ನಾಗಿ ನೋಡಬೇಕಾದಂತಹ ಸ್ಥಿತಿ ನಿರ್ಮಾಣವಾಗಿದೆ, ಹಾಗಾಗಿ ಅವರೆಲ್ಲರಿಗೂ ನಾವು ಗೌರವವನ್ನು ಸಲ್ಲಿಸಬೇಕು. ರಾಜಕಾರಣದಲ್ಲಿ, ಸಾರ್ವಜನಿಕ ಜೀವನದಲ್ಲಿದ್ದಂತಹ ವ್ಯಕ್ತಿಗಳು ಅಪರೂಪವಾಗಿದ್ದರು. ಈಗಂತೂ ಕಡಿಮೆಯಾಗುತ್ತಿದ್ದಾರೆ, ಹಿಂದೆ ಇದ್ದರೂ ಎಂಬುದೇ ಒಂದು ಹೆಮ್ಮೆಯ ವಿಚಾರ. ಇನ್ನೂ ಡಾ: ರಾಜ್‌ಕುಮಾರ್‌ರವರ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಭಾರತದ ಸಾಂಸ್ಕೃತಿಕ ರಂಗ ಕಂಡಂತಹ ಒಂದು ಅಪರೂಪದ ಪ್ರತಿಭೆ ರಾಜ್‌ಕುಮಾರ್‌ರವರು. ಅವರ ಕಲಾಪ್ರತಿಭೆಯೇನಿದೆ, ಅದು ಬಹುಶಃ ಭಾರತ ದೇಶದ ಕಲಾಪ್ರತಿಭೆಗಳಲ್ಲಿ ಅಪರೂಪವಾದಂಹದು. ಅವರು ಅಪ್ಪಟ ಕಲಾವಿದರು ಅಷ್ಟೆ. ಬೇರೆ ಕಲಾವಿದರ ರೀತಿಯಲ್ಲಿ ಬೇರೆ ಬೇರೆ ವ್ಯವಹಾರಗಳನ್ನೇನೂ ಮಾಡುತ್ತಿರಲಿಲ್ಲ. ನೂರಕ್ಕೆ ನೂರರಷ್ಟು ಅವರು ಅಪ್ಪಟ ಕಲಾವಿದರು, ಕಲೆಯನ್ನು ಬಿಟ್ಟು ಬೇರೇನನ್ನು ಅಲೋಚನೆ ಮಾಡದ ವ್ಯಕ್ತಿ ಈ ದೇಶದಲ್ಲಿ ಯಾರಾದರೂ ಇದ್ದರೆ ಅದು ರಾಜ್‌ಕುಮಾರ್‌ರವರು ಮಾತ್ರ. ಬೇರೆ ಕಲಾವಿದರು ಇದ್ದಾರೆ, ಅವರು ಬೇರೆ ಬೇರೆ ವ್ಯವಹಾರಗಳಲ್ಲಿ, ಬೇರೆ ಬೇರೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಆದರೆ ಬರೀ ಕಲೆಯೇ ನನ್ನ ಜೀವನ, ನನ್ನ ಉಸಿರು ಎಂದು ಹೇಳತಕ್ಕಂಥ ರೀತಿಯಲ್ಲಿ ವರ್ತನೆ ಮಾಡಿದಂತಹ ಒಬ್ಬ ಕಲಾವಿದ ಈ ದೇಶದಲ್ಲಿದ್ದರೆ ಅದೂ ರಾಜ್‌ಕುಮಾರ್ ಮಾತ್ರ. ಅಂತಹ ಒಬ್ಬ ಅಪರೂಪದ ಕಲಾವಿದರು ಹುಟ್ಟುತಕ್ಕಂತಹದು ಬಹಳ ಕಷ್ಟ. ಅಂತಹ ಒಬ್ಬ ಮನುಷ್ಯನಿಗೆ

ಸತ್ತಂತಹ ಸಂದರ್ಭದಲ್ಲಿ ಈ ರಾಜ್ಯದಲ್ಲಿ ನಡೆದ ಘಟನೆ ಏನಿದೆ ಅದು ಖಂಡಿತವಾಗಿಯೂ ಅ ವ್ಯಕ್ತಿಗೆ ಗೌರವ ತರುವಂತಹದ್ದಲ್ಲ. ಅದು ಯಾರ ವಿಫಲತೆ, ಯಾರ ಪಿತೂರಿ? ಅದೆಲ್ಲಾ ಬೇರೆ ಪ್ರಶ್ನೆ. ಆದರೆ ಈ ಮೇರುನಟ ಸತ್ತ ಸಂದರ್ಭದಲ್ಲಿ ಒಬ್ಬ ಮಹಾನ್ ನಟನಿಗೆ ಸಂತಾಪ ಸೂಚನೆಯನ್ನು ಮಾಡಬೇಕಾದಂತಹ ಸಂದರ್ಭದಲ್ಲಿ, ಒಂದು ಸೂತಕದ ಛಾಯೆ ಇದ್ದಂತಹ ಸಂದರ್ಭದಲ್ಲಿ ಆಗ ನಡೆದಂತಹ ಘಟನೆಗಳೇನಿವೆ ಅವು ಖಂಡಿತವಾಗಿಯೂ ಆ ಮೇರುನಟನಿಗೆ ಅಥವಾ ಈ ರಾಜ್ಯಕ್ಕೆ ಗೌರವ ತರತಕ್ಕಂದ್ದಲ್ಲ ಎನ್ನುವುದನ್ನು ನಾವೆಲ್ಲರೂ ಕೂಡ ಪ್ರಾಮಾಣಿಕವಾಗಿ ಒಪ್ಪಬೇಕಾದಂತಹ ವಿಚಾರವಾಗಿದೆ. ಆ ಎರಡೂ ಮೂರು ದಿವಸಗಳಲ್ಲಿ ಕಾನೂನಿನ ಕುಸಿತವೇನಿದೆ ಅದನ್ನು ನಾವು ಬಹಳ ಸ್ಪಷ್ಟವಾಗಿ ಕಂಡಿದ್ದೇವೆ. ಎಷ್ಟರಮಟ್ಟಿಗೆ ಕಾನೂನು ವ್ಯವಸ್ಥೆ ಕುಸಿತವಾಗಿತ್ತೆಂದರೆ ಆ ಎರಡು ಮೂರು ದಿವಸ ಅದೊಂದು ಜಂಗಲ್ ರಾಜ್ ಆಗಿಬಿಟ್ಟಿತ್ತು. ಕಾಡಿನ ಕಾನೂನಾಗಿತ್ತು. ಯಾರೂ ಯಾರನ್ನೂ ನಿಯಂತ್ರಣ ಮಾಡುವಂತಹ ಸ್ಥಿತಿಯಲ್ಲಿರಲಿಲ್ಲ. ಆ ದೂರದರ್ಶನದಲ್ಲಿ ತೋರಿಸುತ್ತಿದ್ದ ದೃಶ್ಯಗಳು ಹೇಗಿತ್ತೆಂದರೆ ಅದು ವ್ಯವಸ್ಥಿತವಾಗಿ ಅವರು ದುಃಖದಿಂದ, ಭಾವನಾತ್ಮಕವಾಗಿ ಬಂದಂತಹ ಪ್ರತಿಭಟನೆ, ಆಕ್ರೋಶವಲ್ಲ ಅದು. ಅದು ದ್ವೇಷದಿಂದ ಬಂದಿರತಕ್ಕಂಥ ಆಕ್ರೋಶವೆಂದು ನಮಗೆ ಸ್ಪಷ್ಟವಾಗಿ ಕಾಣುತ್ತಿತ್ತು. ಭಾವನ್ಮಾತಕವಾದ ಆಕ್ರೋಶ ಉಂಟಾದರೆ ಅಥವಾ ನೋವಾದರೆ, ಮನುಷ್ಯ ಅದನ್ನು ವ್ಯಕ್ತಪಡಿಸತಕ್ಕಂಥ ವಿಧಾನವೇ ಬೇರೆ. ಆದರೆ ಅಂದು ವ್ಯಕ್ತಪಡಿಸಿದಂತಹ ವಿಧಾನವನ್ನು ನೋಡಿದಾಗ, ಅದು ನಿಜವಾಗಿಯೂ ಕೂಡ ನೋವಿನಿಂದ ವ್ಯಕ್ತಪಡಿಸಿದಂತಹ ಭಾವನೆಗಳು ಆಗಿರಲಿಲ್ಲ, ಅವು ಆಕ್ರೋಶದಿಂದ ಮತ್ತು ಸಿಟ್ಟಿನಿಂದ ವ್ಯಕ್ತಪಡಿಸಿದಂತಹ ಭಾವನೆಗಳಾಗಿದ್ದವು. ಅದರ ಜೊತೆಗೆ ಆವತ್ತು ಇಡೀ ಬೆಂಗಳೂರಿನ ಕಾನೂನಿನ ವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಬಿದ್ದಿತ್ತು. ಅದಕ್ಕೆ ಗೃಹ ಇಲಾಖೆ ನೇರವಾದಂತಹ ಜವಾಬ್ದಾರಿಯನ್ನು ಹೊರಬೇಕಾಗಿತ್ತದೆ. ಇದಕ್ಕೆ ಬೇರೆ ಯಾರನ್ನೂ ಕೂಡ ದೂಷನೆ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಏಕೆಂದರೆ ಡಾ: ರಾಜ್‌ಕುಮಾರ್‌ರಂತಹ ವ್ಯಕ್ತಿ ಸತ್ತಂತಹ ಸಂದರ್ಭಧಲ್ಲಿ, ಈ ರಾಜ್ಯದಲ್ಲಿ ಏನಾಗುತ್ತದೆ? ಏನಾಗಬಹುದು? ಎಂಬುದನ್ನು ಆಸೆಸ್ ಮಾಡಲಿಕ್ಕೆ, ಊಹೆ ಮಾಡಲಿಕ್ಕೆ ಸಾಧ್ಯವಿಲ್ಲದೇ ಇರತಕ್ಕಂಥ ಸ್ಥಿತಿಯಲ್ಲಿ ಈ ರಾಜ್ಯದ ಬೇಹುಗಾರಿಕೆ ಸಮಸ್ಯೆ ಇದೆ ಎನ್ನುವುದಾದರೆ, ಇದು ನಾಚಿಕೆಗೇಡಿನ ಪ್ರಸಂಗ. ನನ್ನ ಲೆಕ್ಕದಲದಲಿ ಬೇಹುಗಾರಿಕೆ ಇಲಾಖೆ ಏನಿದೆ, ಅದು ಸಂಪೂರ್ಣವಾಗಿ ಹಾಳಾಗಿದೆ. ಡಾ: ರಾಜ್‌ಕುಮಾರ್‌ರಂತಹ ಒಬ್ಬ ವ್ಯಕ್ತಿ ಸತ್ತಾಗ, ಏನಾಗಬಹುದು? ಈ ರಾಜ್ಯದಲ್ಲಿ ಯಾವ ರೀತಿಯ ಪರಿಣಾಮಗಳಾಗಬಹುದು ಎಂಬುದನ್ನೂ ಕೂಡ ಊಹೆ ಮಾಡಲಾರದಂತಹ ಸ್ಥಿತಿಯಲ್ಲಿ ಈ ರಾಜ್ಯದ ಬೇಹುಗಾರಿಕಾ ವ್ಯವಸ್ಥೆ ಹಾಳಾಗಿದೆ, ಡೀ-ಜನರೇಟ್ ಆಗಿದೆ, ಅದನ್ನು

ನಿಯಂತ್ರಿಸತಕ್ಕಂಥ ಶಕ್ತಿ, ಗೃಹ ಇಲಾಖೆಗೆ ಇಲ್ಲದೆ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರೆ, ಈ ಗೃಹ ಇಲಾಖೆ ಯಾರ ಪ್ರಾಣ ಮಾನವನ್ನು ಕೂಡ ರಕ್ಷಣೆ ಮಾಡಲಿಕ್ಕೆ ಸಾಧ್ಯವಿಲ್ಲ. ಎಂತಹ ದುರಂತದ ಪರಿಸ್ಥಿತಿ ಇತ್ತು. ಪಾರ್ವತಮ್ಮ ರಾಜ್‌ಕುಮಾರ್‌ರವರು ಕಣ್ಣಿನಲ್ಲಿ ನೀರು ತುಂಬಿಕೊಂಡು, ನನ್ನ ಗಂಡನ ಶವವನ್ನು ನೋಡಲಿಕ್ಕೆ ನನಗೆ ಅವಕಾಶ ಸಿಗಲಿಲ್ಲವೆಂದು ಗೋಳೋ ಎಂದು ಅತ್ತಾಗ, ಈ ರಾಜ್ಯದಲ್ಲಿ ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂಥ ನಾವೆಲ್ಲರೂ ಕೂಡ ತಲೆ ತಗ್ಗಿಸುವಂತಾಯಿತು. ಅಂತಹ ಘಟನೆ ಈ ರಾಜ್ಯದಲ್ಲಿ ನಡೆದಿದ್ದು ಸರಿಯೇ? ತನ್ನ ಗಂಡ ಸತ್ತಾಗ, ಆ ಹೆಣವನ್ನೂ ಕೂಡ ನೋಡಲು ಅವಕಾಶ ಸಿಗದಿರತಕ್ಕಂಥ ಪರಿಸ್ಥಿತಿ ಈ ಒಂದು ರಾಜ್ಯದಲ್ಲಿ ನಿರ್ಮಾಣವಾಗಿದೆ ಎಂದರೆ ಇದಕ್ಕೆ ಯಾರು ಹೊಣೆ? ಯಾರು ಜವಾಬ್ದಾರಿ ಸ್ಥಾನದಲ್ಲಿ ಇದ್ದರೋ, ಯಾರೂ ಕಾನೂನು ಮತ್ತು ಸುವ್ಯವಸ್ಥೆಯ ಜವಾಬ್ದಾರಿಯನ್ನು ಹೊತ್ತಿದ್ದರೋ, ಅವರೇ ಇದಕ್ಕೆ ಹೊಣೆ. ಈ ರಾಜ್ಯದ ಮುಖ್ಯಮಂತ್ರಿಗೇ ಅಂದು ರಾಜ್‌ಕುಮಾರ್‌ರವರ ಅಂತಿಮ ದರ್ಶನ ಪಡೆಯಲಿಕ್ಕೆ ಸಾಧ್ಯವಾಗಲಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳಿಗೂ ಸಾಧ್ಯವಾಗಲಿಲ್ಲ. ಯಾರಿಗೂ ಆಗಲಿಲ್ಲ. ಮತ್ತೆ ನೋಡಿದ್ದು ಯಾರು? ದಫನ್ ಮಾಡಿದ್ದು ಯಾರು? ಯಾರು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋದರು? ಅಂತಹ ಒಂದು ಸ್ಥಿತಿ ಆವತ್ತು ರಾಜ್ಯದಲ್ಲಿ ನಿರ್ಮಾಣವಾಗಿತ್ತು ಎಂದರೆ ಅದು ನಾಚಿಕೆಗೇಡಿನ ಸಂಗತಿ; ಅವಮಾನಕರವಾದಂತಹ ಸಂಗತಿ. ಇದರಲ್ಲಿ ಪಿತೂರಿ ಏನಾದರೂ ಇದೆಯೇ? ಅಥವಾ ಉದ್ದೇಶ ಪೂರ್ವಕವಾಗಿ ಯಾರಾದರೂ ಮಾಡಿದ್ದಾರಾ? ಅದು ನಮಗೆ ಗೊತ್ತಿಲ್ಲ. ಅದರ ಬಗ್ಗೆ ಸರ್ಕಾರಕ್ಕೆ ಮಾತ್ರ ಮಾಹಿತಿ ಇದೆ. ಬೇರೆ ಯಾರಿಗೂ ಕೂಡ ಮಾಹಿತಿ ಇರಲಿಕ್ಕೆ ಸಾಧ್ಯವಿಲ್ಲ. ಸರ್ಕಾರದ ಬಳಿ ಆ ಮಾಹಿತಿ ಇಲ್ಲವೆಂದು ಅವರು ಹೇಳುವುದಾದರೆ, ಅದು ಅವರ ವೈಫಲ್ಯವೆಂದು ಅವರು ಒಪ್ಪಿಕೊಳ್ಳಬೇಕಾಗುತ್ತದೆ. ಆ ಘಟನೆಯ ಬಗ್ಗೆ ತನಿಖೆ ಮಾಡಲಿಕ್ಕೆ ಸದನ ಸಮಿತಿಯೊಂದನ್ನು ರಚಿಸಬೇಕೆಂದು ನಾನು ಒತ್ತಾಯಿಸುತ್ತೇನೆ. ಏಕೆಂದರೆ, ಕೋಟ್ಯಾಂತರ ರೂಪಾಯಿಗಳ ಮೌಲ್ಯದ ಆಸ್ತಿ–ಪಾಸ್ತಿಗಳು ಆವತ್ತು ಬೆಂಗಳೂರಿನಲ್ಲಿ ನಷ್ಟವಾಗಿದೆ; ಪ್ರಾಣ ಹಾನಿಯಾಗಿದೆ, ಜೀವ ಹಾನಿಗಾಗಿದೆ. ಅಂದು ಕಾನೂನು ಮತ್ತು ಸುವ್ಯವಸ್ಥೆ ಕುಸಿದು ಹೋಗಿಬಿಟ್ಟಿತು. ಆದ್ದರಿಂದ ಇದರ ಬಗ್ಗೆ ತನಿಖೆ ನಡೆಸಲು ಸದನ ಸಮಿತಿ ರಚಿಸಬೇಕೆಂದು ಒತ್ತಾಯಿಸುತ್ತಾ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ರಾಜೇಂದ್ರನ್ (ಕೆಜಿಎಫ್): ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ತೀರಿ ಹೋಗಿರುವವರಿಗೆ ಕಂಡೋಲೆನ್ಸ್ ಮಾಡುವಂತಹ ಅವಕಾಶ ನಮಗೆ ಸಿಕ್ಕಿದೆ. ನಿನ್ನೆ ತೀರಿ ಹೋಗಿರುವವರಿಗೆ ನಾಳೆ ತೀರಿ ಹೋಗುವವರು ಕಂಡೋಲೆನ್ಸ್

ಮಾಡುತ್ತಿದ್ದೇವೆ. ಇವತ್ತು ಯಾರು ಸತ್ತು ಹೋಗಿದ್ದಾರೋ ಅವರಿಗೆ ನಾಳೆ ಸತ್ತು ಹೋಗುವವರಾದ ನಾವು ಕಂಡೋಲೆನ್ಸ್ ಮಾಡುತ್ತಿದ್ದೇವೆ. ನಾಳೆ ಏನು ಗತಿ ಆಗುತ್ತದೋ ಅದಕ್ಕೆ ಈಗಲೇ ಟ್ರೈನಿಂಗ್ ಮಾಡಿಕೊಳ್ಳಬೇಕು. ಇಡೀ ರಾಜ್ಯದಲ್ಲಿ ಡಾ: ರಾಜ್‌ಕುಮಾರ್‌ರವರಿಗೆ ನಾವೆಲ್ಲಾ ಅಣ್ಣಾವ್ರು, ಅಣ್ಣಾವ್ರು ಎಂದು ಕರೆಯುತ್ತೇವೆ. ಅಂತಹ ಅಣ್ಣಾವ್ರಿಗೆ ಸರ್ಕಾರ ಏನು ಮಾಡಬೇಕು? ಅವರಿಗೆ ಬರೇ ಕಂಡೋಲೆನ್ಸ್ ಹೇಳುವುದು ಮಾತ್ರವಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಆಗಲೇ ಮಾತನಾಡುತ್ತಾ ಇಂಥಿಂಥ ನಾಟಕಗಳನ್ನೆಲ್ಲಾ ನಾವು ನೋಡಿದ್ದೇವೆ ಎಂದು ಹೇಳಿದರು. ಆದರೆ ನಾವು ಯಾವ ನಾಟಕವನ್ನೂ ಕೂಡ ನೋಡಿಲ್ಲ ಸ್ವಾಮಿ. ನಾವು ಬಹಳ ಲೇಟಾಗಿ ಹುಟ್ಟಿದೆವು. ನಾವು ನೋಡಿರುವ ನಾಟಕಗಳೆಲ್ಲಾ, ಶ್ರೀಮಾನ್ ಕುಮಾರಸ್ವಾಮಿ ಅವರ ನಾಟಕ, ಶ್ರೀಮಾನ್ ಧರ್ಮಸಿಂಗ್‌ರವರ ನಾಟಕ. ಈ ನಾಟಕಗಳನ್ನೆಲ್ಲಾ ನಾವು ನೋಡಿದ್ದೇವೆ. ಅವು ಒಂದು ಹಿಸ್ಟರಿಯಲ್ಲಿ ಬರುತ್ತವೆ. ಇಂಥಿಂಥವರ ಕಾಲದಲ್ಲಿ ಇಂಥಿಂಥದ್ದು ಆಯಿತು ಎಂದು ದಾಖಲಾಗುತ್ತವೆ. ಡಾ: ರಾಜ್‌ಕುಮಾರ್ ಅವರದು ಬಹಳ ಸಿಂಪಲ್ ಪರ್ಸನಾಲಿಟಿ. very disciplined personality in the field of Cinema. ಅವರದು ಹಿಸ್ಟರಿಯಲ್ಲಿ ಒಳ್ಳೊಳ್ಳೆಯ ಕಥೆಗಳು, ನಾಟಕಗಳು, ಅವರು ಜನರಿಗೋಸ್ಕರ ಮಾಡಿರುವುದು ಏನೇನಿದೆ, ಅದು ಸ್ಕೂಲ್ ಪಠ್ಯಪುಸ್ತಕದಲ್ಲಿ ಬರಲಿ. ಸ್ಕೂಲ್ ಮಕ್ಕಳು ರಾಜ್‌ಕುಮಾರ್ ಎಂಬ ವ್ಯಕ್ತಿಯೊಬ್ಬರಿದ್ದರು, ಅವರು ಇಂಥಿಂಥದ್ದನ್ನು ಮಾಡಿದ್ದರೆ ಎಂಬುದನ್ನು ಓದಲಿ. ಓದುವ ಮಕ್ಕಳಿಗೆ ಈ ವಿಷಯವನ್ನು ಪಠ್ಯದಲ್ಲಿ ಸೇರಿಸಿದರೆ, ಮಕ್ಕಳು ರಾಜ್‌ಕುಮಾರ್‌ರವರು ಮಾಡಿದ್ದನ್ನು ತಿಳಿದುಕೊಳ್ಳುವಂತೆ ಮಾಡಿದರೆ ಅವರ ಆತ್ಮಕ್ಕೆ ನಿಜವಾಗಿಯೂ ಶಾಂತಿ ಸಿಗುತ್ತದೆ ಎಂದು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಹೂವಿನ ಹಡಗಲಿ): ಸನ್ಮಾನ್ಯ ಅಧ್ಯಕ್ಷರೆ, ಸಂತಾಪ ಸೂಚನೆಗಳಿಗೆ ಸಂಬಂಧಪಟ್ಟ ಹಾಗೆ ಮಾತನಾಡುವುದಾದರೆ, ನನಗೆ ಗೊತ್ತಿದ್ದಂತೆ ಮಾನ್ಯ ಮಾರ್ಗದ ಮಲ್ಲಪ್ಪನವರು ಹಾಗೂ ಮಾನ್ಯ ಮೂಡ್ಲೇಗೌಡರು, ಇವರಿಬ್ಬರೂ ಕೂಡ ನನಗೆ ಚಿರಪರಿಚಿತರಾದಂತಹವರಾಗಿದ್ದರು. ಮಾನ್ಯ ಮೂಡ್ಲೇಗೌಡರಂತಹ ಒಬ್ಬ ಸ್ವಾತಂತ್ರ್ಯ ಹೋರಾಟಗಾರ ಮತ್ತು ಗಾಂಧಿವಾದಿ ಇವತ್ತಿನ ರಾಜಕೀಯ ಸ್ಥಿತಿಯಲ್ಲಿ ಇರುತ್ತಾರೆಂದೂ ಕೂಡ ನಂಬಲಿಕ್ಕೆ ಸಾಧ್ಯವಿಲ್ಲ. ಅವರ ಸಾವಿಗಿಂತ ಮುಂಚಿತರಾಗಿ ಅವರು ನನ್ನಲ್ಲಿ ಬಂದು ಶಿರಾ ತಾಲ್ಲೂಕಿನ ಕೆಲವು ಬೇಡಿಕೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕೆಂದು ಒಂದು ಪತ್ರವನ್ನು ಕೊಟ್ಟು ಹೋಗಿದ್ದರು. ಅವರದು ಅದೇ ಮಾಸಿದ ಪಂಚೆ, ಅದೇ ಮಾಸಿದ ಜುಬ್ಬ, ರೈತರು ಬಳಸುತ್ತಿದ್ದಂತಹ ಚಪ್ಪಲಿಗಳು. ಅವರು ಶಾಸಕರಾಗಿದ್ದಾಗ ಕೂಡ

ಅದೇ ತರಹ ಇದ್ದರು. ನಂತರದ ದಿನಮಾನಗಳಲ್ಲಿ ಕೂಡ ಅವರು ಹಾಗೆ ಇದ್ದರು. ಒಂದು ಸಂತೋಷದ ಸಂಗತಿ ಏನೆಂದರೆ ಪ್ರಜಾಪ್ರಭುತ್ವದ ಈ ಎಲ್ಲಾ ವ್ಯವಸ್ಥೆಗಳ ನಡುವೆಯೂ ಕೂಡ ಅಂತಹ ಒಬ್ಬ ಗಾಂಧೀವಾದಿಗೆ ಸರಳ ವ್ಯಕ್ತಿಗೆ ಮನ್ನಣೆ ಕೊಡುತ್ತೇವೆ ಎನ್ನುವಂಥಾದ್ದೇ ನಿಜವಾಗಿ ಸಂತೋಷ ಪಡುವಂತಹ ಒಂದು ಸಂಗತಿ. ಹಾಗೆಯೇ ಮಾನ್ಯ ಮಾರ್ಗದ ಮಲ್ಲಪ್ಪನವರೂ ಕೂಡ ಆರೋಗ್ಯ ಸಚಿವರಾಗಿ ಒಳ್ಳೆಯ ಕೆಲಸ ಮಾಡಿದ್ದರು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಹಳ ದೊಡ್ಡ ಹೆಸರನ್ನು ಪಡೆದಂತಹ ಮನೆತನ ಅವರದಾಗಿತ್ತು. ಅವರ ಸಾಮಾಜಿಕ ಕಳಕಳಿ ಮತ್ತು ರಾಜಕೀಯದಲ್ಲಿ ಅವರು ತೋರಿಸಿದಂತಹ ಜಾಣ್ಮೆ ಇವುಗಳನ್ನು ಸದಾ ಕಾಲ ನಾವು ನೆನಪಿಸಿಕೊಳ್ಳಬೇಕಾಗಿದೆ. ಈಗಾಗಲೇ ಅನೇಕರು ಡಾ: ರಾಜ್‌ಕುಮಾರ್‌ರವರ ಬಗ್ಗೆ ಮಾತನಾಡಿದ್ದಾರೆ. ಅವರ ವೈವಿಧ್ಯಮಯ ಬದುಕು ಮತ್ತು ಅವರ ಕಲಾ ತಪಸ್ಸಿನ ಬಗ್ಗೆ ಈ ಸದನ ಒಕ್ಕೊರಲಿನಿಂದ ತನ್ನ ಅಭಿಮಾನವನ್ನು ವ್ಯಕ್ತ ಮಾಡಿದೆ. ಕನ್ನಡ ನಾಡೂ ಸಹ ವ್ಯಕ್ತ ಮಾಡಿದೆ. ಈ ಸಂದರ್ಭದಲ್ಲಿ 'ಜನಪ್ರಿಯತೆ' ಎನ್ನುವಂಥಾದ್ದು ಎಂತಹ ಹಿಂಸೆ ಮತ್ತು ಮುಜುಗರವನ್ನು ತಂದು ಕೊಡುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಫ್ರಾನ್ಸ್ ದೇಶದಲ್ಲಿ ನಿಮಗೆ ಗೊತ್ತಿದ್ದಂತೆ ಬ್ರೂಸೋ, ವಾಲ್ಟೇರ್ ಮೊದಲಾದವರೆಲ್ಲಾ ಬಹಳ ಜನಪ್ರಿಯರಾದಂತಹ ರಾಜ ತಂತ್ರಜ್ಞರಾಗಿದ್ದರು ಮತ್ತು ರಾಜ ನೀತಿಯನ್ನು ಬೋಧಿಸಿದವರಾಗಿದ್ದರು. ವಾಲ್ಟೇರ್ ಬಹಳ ಪ್ರಖ್ಯಾತರಾಗಿದ್ದರು. ಆ ಕಾಲದಲ್ಲಿ ಫ್ರಾನ್ಸ್ ದೇಶದಲ್ಲಿ ಒಂದು ಮೂಢ ನಂಬಿಕೆ ಇತ್ತು. ಯಾರಾದರೂ ಬಹಳ ಜನಪ್ರಿಯರಾಗಿರತಕ್ಕ ವ್ಯಕ್ತಿ ಇದ್ದರೆ, ಅವರ ಬಟ್ಟೆಗಳನ್ನೆಲ್ಲಾ ಹರಿದು, ಅದನ್ನು ತಾವು ಇಟ್ಟುಕೊಂಡರೆ, ಅದೂ ಒಂದ ತರಹ ಜ್ಞಾಪಕಾರ್ಥವಾಗಿ, ಅವರೂ ಕೂಡ ಬಹಳ ಜನಪ್ರಿಯ ವ್ಯಕ್ತಿಗಳಾಗುತ್ತಾರೆ ಎನ್ನುವಂತಹ ಮೂಢ ನಂಬಿಕೆ ಅ ಕಾಲದಲ್ಲಿತ್ತು. ಆಗ ಒಮ್ಮೆ ವಾಲ್ಟೇರ್‌ರವರು ಪ್ಯಾರಿಸ್ ನಗರದ ಬೀದಿಗಳಲ್ಲಿ ಬಂದಾಗ, ಆತನ ಅಭಿಮಾನಿಗಳೆಲ್ಲಾ ಸುತ್ತುವರಿದು ಆತನ ಬಟ್ಟೆಗಳನ್ನೆಲ್ಲಾ ಹರಿದು, ಆತನನ್ನು ಬೀದಿಯಲ್ಲಿ ಬೆತ್ತಲೆಯನ್ನಾಗಿ ಮಾಡಿದರು. ಆಗ ಅವರು ಈ ಜನಪ್ರಿಯತೆ ಇನ್ನು ನನಗೆ ಸಾಕು, ಇದರಿಂದ ದೂರ ಹೋಗಬೇಕು ಎಂದು ಪ್ಯಾರಿಸ್‌ನ ಆ ಗಡಿಬಿಡಿ ಬದುಕಿನಿಂದಲೇ ದೂರವಾಗಿ ಹೋಗಿದ್ದರು. ಅದರ ಮುಂದಿನ ಕಥೆ ಬೇರೆ ವಿಷಯವಾಗುತ್ತದೆ. ಅವರು ಎಷ್ಟೋ ವರ್ಷಗಳ ನಂತರ ಸತ್ತಾಗ ಅಲ್ಲಿಯ ಪತ್ರಿಕೆಗಳೆಲ್ಲಾ Voltaire is no more. Voltaire is dead ಎಂದು ಬರೆದವು. ಜನ ಸುದ್ದಿಯಲ್ಲಿ ಇರದಿದ್ದರೆ ಆತ ಸತ್ತೇ ಹೋಗಿದ್ದಾನೆಂದು ಭಾವಿಸಿಕೊಳ್ಳುತ್ತಾರೆ. ಆಗ ಅದೇ ಫ್ರಾನ್ಸಿನ ಜನ, ಯಾರನ್ನು ಜನಪ್ರಿಯತೆಯ ಉತ್ತುಂಗದಲ್ಲಿ ಕೂರಿಸಿದ್ದರೋ, ಅವರು ಸತ್ತ ನಂತರ Was he alive? – ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಿದರು. Voltaire is no more, Voltaire is dead ಎಂದರೆ was

he alive? ಎಂದರು. ಅಂದರೆ ಸುದ್ದಿಯಲ್ಲಿ ಇಲ್ಲವೆಂದರೆ, ಅವರು ಇಲ್ಲವೇ ಇಲ್ಲವೆಂದು ಜನತೆಯ ನೆನಪಿನಿಂದ ಮಾಸಿ ಹೋಗುತ್ತಾರೆ. ಅದರ ಮುಂದಿನ ಭಾಗದ ಕಥೆ ಬೇರೆ. ಆದರೆ ಈ ಜನಪ್ರಿಯತೆಯಿಂದ ಎಷ್ಟು ದೊಡ್ಡ ಹಿಂಸೆ ಆಗುತ್ತದೆ ಎಂದರೆ ಅವರಿಗೆ ವೈಯಕ್ತಿಕ ಬದುಕು ಎನ್ನುವುದು ಇರುವುದಿಲ್ಲ, ಕೌಟುಂಬಿಕ ಬದುಕು ಎಂಬುದು ಇರವುದಿಲ್ಲ. ಅವರ ಮಕ್ಕಳ ಮದುವೆ ಮೊದಲಾದಂತಹ ಸಮಾರಂಭದಲ್ಲಿ ಆದಂತಹ ಅನೇಕ ಅನಾಹುತಗಳನ್ನು ನಾವು ನೋಡಿದ್ದೇವೆ. ನಾವೂ ಕೂಡ ನಮ್ಮಲ್ಲಿ ಇರತಕ್ಕಂಥ ಅಭಿಮಾನಿಗಳಿಗೆ ಒಂದು ಘನತೆಯನ್ನು ತಂದುಕೊಡಲಿಲ್ಲ. ಮದರ್ ಥೆರೇಸಾರವರು ಯಾರಾದರೂ ಕಲ್ಕತ್ತಾ ನಗರದ ಬೀದಿಗಳಲ್ಲಿ ಸಾಯುತ್ತಾ ಬಿದ್ದಿದ್ದರೆ, ಅವರಿಗೂ ಕೂಡ ಒಳ್ಳೆಯ ಘನತೆಯಿಂದ ಸಾವಿನ ನಂತರದ ಅಂತ್ಯ ಸಂಸ್ಕಾರ ಮಾಡಬೇಕು ಎಂದು ಅವರನ್ನೆಲ್ಲಾ ಎತ್ತಿಕೊಂಡು ಬಂದು ಅವರಿಗೆ ಶುಶ್ರೂಷೆ ಮಾಡಿ ಘನತೆಯಿಂದ ಅಂತ್ಯ ಸಂಸ್ಕಾರವನ್ನು ಮಾಡಿರತಕ್ಕದ್ದನ್ನು ನಾವು ಹೊಗಳುತ್ತೇವೆ. ಮದರ್ ಥೆರೇಸಾರವರಿಗೆ ನೋಬೆಲ್ ಪಾರಿತೋಷಕ ಬಂದಿತ್ತು. ನಾವೆಲ್ಲರೂ ಬಹಳ ದೊಡ್ಡ ಅಭಿಮಾನಿಗಳು ಎಂದು ಹೇಳಿಕೊಳ್ಳುತ್ತೇವೆ. ಆದರೆ ದುಃಖಕ್ಕೆ ಒಂದು ಸೂಕ್ತವಾದಂತಹ ಘನತೆಯನ್ನು ನಾವು ತಂದುಕೊಡಬೇಕಾಗಿರುತ್ತದೆ. ಆದರೆ ಡಾ: ರಾಜ್‌ಕುಮಾರ್‌ರವರ ಸಾವು ಇದರಲ್ಲಿ ಹಿಂಸೆಯನ್ನು ಪ್ರಚೋದನೆ ಮಾಡಿತು. ಅಶಿಸ್ತನ್ನು ಪ್ರಚೋದನೆ ಮಾಡಿತು. ಕಾನೂನು ಬಾಹಿರ ಚಟುವಟಿಕೆಗಳಲ್ಲಿ, ಯಾರ ವಿರುದ್ಧ ತಮ್ಮ ಸಿಟ್ಟನ್ನು ವ್ಯಕ್ತಪಡಿಸಿದರೋ ಗೊತ್ತಾಗಲಿಲ್ಲ. ಸಿಟ್ಟನ್ನು ಅವರು ವ್ಯಕ್ತ ಮಾಡಬೇಕಾಗಿದ್ದರೆ, ಅದು ಯಮಧರ್ಮನ ಮೇಲೆ ಅವರು ವ್ಯಕ್ತ ಮಾಡಬೇಕಾಗಿತ್ತು. ಇನ್ನೂ ನಾಲ್ಕು ವರ್ಷಗಳ ಕಾಲ ಇವರು ಬದುಕಬೇಕಾಗಿತ್ತು, ತುರ್ತಾಗಿ ಜವರಾಯ ಇವರನ್ನು ತೆಗೆದುಕೊಂಡ ಎಂಬ ಸಿಟ್ಟು ಇರಬೇಕೇ ವಿನಃ ಸಾರ್ವಜನಿಕರ ಎಲ್ಲಾ ಆಸ್ತಿ-ಪಾಸ್ತಿಗಳನ್ನು ನಾಶ ಮಾಡತಕ್ಕಂಥ ಹಿಂಸೆ, ಕಾನೂನು ಬಾಹಿರ ಚಟುವಟಿಕೆಗಳು ಬೇಕಾಗಿರಲಿಲ್ಲ. ಮಾನ್ಯ ಸದಸ್ಯರು ಹೇಳಿದಂತೆ ಇದರಿಂದ ನಾವೆಲ್ಲಾ ತಲೆ ತಗ್ಗಿಸುವಂತಾಯಿತು. ನಾವು ಯಾವುದಾದರೂ ದೃಶ್ಯವನ್ನು ದೂರದರ್ಶನದಲ್ಲಿ ನೋಡಿದ ತಕ್ಷಣ ಅದನ್ನು ಅನುಕರಣೆ ಮಾಡುತ್ತೇವೆ. ಅನೇಕ ಅಪೇಕ್ಷಣೀಯವಲ್ಲದ ವಿಚಾರಗಳನ್ನೂ ಅನುಕರಣೆ ಮಾಡುತ್ತೇವೆ. ಆದರೆ, ಪರದೇಶದಲ್ಲಿ ಯಾರಾದರೂ ಸತ್ತಾಗ ನಡೆದುಕೊಂಡಂತಹ ರೀತಿಯನ್ನು ನಾವು ನೋಡಿದರೆ, ಸಾಲಾಗಿ ರಸ್ತೆಯಲ್ಲಿ ನಿಂತಿರುತ್ತಾರೆ, ಕೆನಡಿ ಸತ್ತಾಗ ಆಗರಿತಕ್ಕಂಥದ್ದನ್ನು ನೋಡಿದ್ದೇವೆ, ಬಹಳಷ್ಟು ಜನಪ್ರಿಯವಾದಂತಹ ವ್ಯಕ್ತಿಗಳು ಸತ್ತಾಗ ನೋಡಿದ್ದೇವೆ, ಅಲ್ಲಿ ಯಾವುದೇ ತರಹದ ಗೊಂದಲಕ್ಕೆ ಅವಕಾಶವಿರುವುದಿಲ್ಲ. ನಾವು ಶಾಸಕರುಗಳು ಅನೇಕರನ್ನು ಸ್ವಾಗತ ಮಾಡಬೇಕೆಂದು ನಿಂತಾಗ, ಮುಖ್ಯಮಂತ್ರಿಗಳು ಬರುತ್ತಾರೆಂದರೆ, ನಾವು ಸಾಲಾಗಿ ನಿಂತು ಅವರನ್ನು ಸ್ವಾಗತ ಮಾಡಬೇಕಾಗುತ್ತದೆ. ಪ್ರಧಾನ ಮಂತ್ರಿಗಳು ಹೊರದೇಶಕ್ಕೆ

ಹೋಗಬೇಕಾಗಿದ್ದರೆ, ದೇಶದೊಳಗೆ ಬರಬೇಕಾಗಿದ್ದರೆ ಸಾಲಾಗಿ ನಿಂತು ಅವರ ಕೈ ಕುಲುಕಿ ಅವರಿಗೆ ವಿದಾಯವನ್ನು ಹೇಳಬೇಕಾಗುತ್ತದೆ. ನಾವು ಅಲ್ಲಿಯವರೆಗೂ ಸಾಲಾಗಿ ನಿಂತಿರುತ್ತೇವೆ. ಪೊಲೀಸಿನವರು ನಮಗೆ ಹೇಳಿರುತ್ತಾರೆ. ಆದರೆ ಮುಖ್ಯಮಂತ್ರಿಗಳು ಬಂದ ತಕ್ಷಣ ಒಬ್ಬರ ಮೇಲೆ ಒಬ್ಬರು ಬಿದ್ದು ಗೊಂದಲದ ಸ್ಥಿತಿಯನ್ನು ನಾವೇ ನಿರ್ಮಾಣ ಮಾಡುತ್ತೇವೆ. ಈ ರೀತಿಯಾದ ಗೊಂದಲವನ್ನು ಕಂಡಾಗ ಡಾ: ರಾಜ್‌ಕುಮಾರ್‌ರವರ ಅಂತ್ಯಕ್ರಿಯೆಯಲ್ಲಿ ತೋರಿಸಿದಂತಹ ಈ ಘಟನೆಯಲ್ಲಿ ನಿಜವಾಗಿಯೂ ಕೂಡ ಕೆಲವು ಪಿತೂರಿ ಪರವಾಗಿರತಕ್ಕಂಥದ್ದು, ಮತ್ತು ಇದರಲ್ಲಿ ಏನಾದರೂ ಒಂದು ಹುನ್ನಾರ ಇದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಆ ಕಾರಣಕ್ಕಾಗಿ ಡಾ: ರಾಜ್‌ಕುಮಾರ್‌ರವರು ಒಬ್ಬ ಮೇರು ನಟ ಆಗಿದ್ದ ಎನ್ನುವುದಕ್ಕಿಂತ ಹೆಚ್ಚಾಗಿ ಆತ ಕನ್ನಡದ ನೆಲ ಮತ್ತು ಜಲದ ಬಗ್ಗೆ ತನ್ನದೇ ಆಗಿರತಕ್ಕಂತಹ ಕಳಕಳಿ ಮತ್ತು ಬದ್ಧತೆಯನ್ನು ಇಟ್ಟುಕೊಂಡಿದ್ದರು. ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಬಳ್ಳಾರಿ ನಗರಕ್ಕೆ ಬಂದಿದ್ದಂತಹವರು ಇಡೀ ದಾವಣಗೆರೆಯನ್ನು ದಾಟುವವರೆಗೂ ನಾವು ಎಲ್ಲರೂ ಅವರ ಜೊತೆಯಲ್ಲಿದ್ದೆವು. ಆ ಸಂದರ್ಭದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಕೂಡ, ನಾವು ಒಬ್ಬ ಜನಪ್ರಿಯ ವ್ಯಕ್ತಿಯನ್ನು ನಾವು ಆರಾಧಿಸಲಿಕ್ಕೆ ಪ್ರಾರಾಂಭ ಮಾಡಿದರೆ ಒಂದು ಒಳ್ಳೆಯ ಸದ್ಗುಣಗಳು ಮತ್ತು ಭಾವನೆಗಳು ಬರುತ್ತವೆ. ನೇತ್ರ ದಾನದ ವಿಷಯದಲ್ಲಿ ತಾವು ಪತ್ರಿಕೆಯಲ್ಲಿ ಕೂಡ ಓದಿದ್ದೀರಿ, ಅನೇಕ ಕಡೆ ಮನವಿಗಳನ್ನು ಸಲ್ಲಿಸಿದ್ದರೂ ಕೂಡ ನೇತ್ರ ದಾನವನ್ನು ಮಾಡಬೇಕೆನ್ನುವಂಥವರು ಯಾರೂ ಮುಂದೆ ಬರಲಿಲ್ಲ. ಒಂದು ಮೂಢ ನಂಬಿಕೆ ನಮ್ಮಲ್ಲಿ ಇದೆ. ಶರೀರದಲ್ಲಿರುವ ಯಾವುದೇ ತರಹದ ಅವಯವಗಳು ಭಂಗ ಆಗಬಾರದು, ಅಥವಾ ಕುಂಠತೆ ಆಗಬಾರದು ಎನ್ನುವ ಕಾರಣಕ್ಕಾಗಿ ಅನೇಕರು ದಾನವನ್ನು ಕೊಡುತ್ತಿರಲಿಲ್ಲ. ಇವರ ದಾನ ಕೊಟ್ಟಿದ್ದಾರೆಂದು ಗೊತ್ತಾದಾಗ, ಅವರಿಂದ ಬೇರೊಬ್ಬರಿಗೆ ಕಣ್ಣು ಬಂದಿತು, ದೃಶ್ಯ ನೋಡಲಿಕ್ಕೆ ಸಾಧ್ಯತೆ ಅಯಿತು ಎಂದು ಗೊತ್ತಾದ ತಕ್ಷಣ ಇವತ್ತು ಸಾವಿರಾರು ಅಭಿಮಾನಿಗಳು ಸಾಲಾಗಿ ನಿಂತು ಆ ತರಹದ ನೇತ್ರ ದಾನ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಹಾಗೆ ಕನ್ನಡದ ಬಗ್ಗೆ ಅವಜ್ಞೆಯನ್ನು ಇಟ್ಟುಕೊಂಡಿರತಕ್ಕಂತಹ ಅನೇಕ ಜನಗಳಿಗೆ, ಗೋಕಾಕ್ ವರದಿಯಲ್ಲಿ ಭಾಷೆಯನ್ನು ಯಾವ ತರಗತಿಯಿಂದ ಕಲಿಸಬೇಕು, ಮಾಧ್ಯಮವಾಗಿರಬೇಕು, ಅಥವಾ ಒಂದು ಭಾಷೆಯಾಗಿ ಕಲಿಸಬೇಕು ಎನ್ನುವಂತಹ ಜಿಜ್ಞಾಸೆ ಇದ್ದಂತಹ ಸಂದರ್ಭದಲ್ಲಿ ಗೋಕಾಕ್ ಚಳವಳಿಯಲ್ಲಿ ಡಾ: ರಾಜ್‌ಕುಮಾರ್‌ರವರು ಭಾಗವಹಿಸಿದರು ಎಂಬ ಕಾರಣಕ್ಕಾಗಿ ನಮ್ಮಲ್ಲಿ ಬೇರೆ ದೇಶಗಳಿಗೂ ನಮಗೂ ಇರುವಂತಹ ವ್ಯತ್ಯಾಸ ಅಥವಾ ವೈಚಾರಿಕರಿಗೂ ಭಾವ ಜೀವಿಗಳಿಗೆ ಇರುವಂತಹ ವ್ಯತ್ಯಾಸ ಕೂಡ ಇದೆ. ಒಂದು ಬೆಳ್ಳಿಯ ಪರದೆ ಮೇಲೆ ಕಾಣತಕ್ಕಂತಹ ಆ ಕಥಾನಕಕ್ಕೆ ಸಂಬಂಧಪಟ್ಟ

ವ್ಯಕ್ತಿ ಬೇರೆ. ನಿಜ ಜೀವನದಲ್ಲಿರತಕ್ಕಂತಹ ವ್ಯಕ್ತಿ ಬೇರೆ. ಆದರೆ ನಿಜ ಜೀವನದಲ್ಲಿರತಕ್ಕಂತಹ ವ್ಯಕ್ತಿಗೆ ಆ ಕಥಾ ಪ್ರಸಂಗದಲ್ಲಿ ಬರುವಂತಹ ಆದರ್ಶದ ಗುಣಗಳನ್ನು ಆರೋಪಿಸುವುದರ ಮೂಲಕ ಅವರನ್ನು ನಾವು ಆರಾಧಿಸಲಿಕ್ಕೆ ಪ್ರಾರಂಭ ಮಾಡುತ್ತೇವೆ. ಬೇರೆ ಬೇರೆ ಅನೇಕರು ಯಾವ ರೀತಿ ಇದ್ದಾರೆಂದು ನಾವು ಕಂಡಿದ್ದೇವೆ. ಆದರೆ ಡಾ: ರಾಜ್‌ಕುಮಾರ್‌ರವರು ತಾವು ಬೆಳ್ಳಿ ಪರದೆ ಮೇಲೆ ಯಾವ ತರಹದ ಒಂದು ಪಾತ್ರಗಳನ್ನು ನಿರ್ವಹಿಸುತ್ತಿದ್ದರು ಅದೇ ತರಹದ ಗುಣಗಳನ್ನು ಕೂಡ ತಮ್ಮ ನಿಜ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಇದು ಬಹಳ ಮಟ್ಟಿಗೆ ಬಹಳ ಪರಿಚಿತ ಆಗಿರತಕ್ಕಂಥದ್ದು. ಮತ್ತು ಇಂತಹ ಜನಗಳು ಕೇವಲ ಕೆಲವೇ ಕೆಲವು ಕಲಾವಿದರು ಈ ದೇಶದಲ್ಲಿ ಇದ್ದರು ಎನ್ನತಕ್ಕಂಥದ್ದನ್ನು ನಾವು ಕಂಡಿದ್ದೇವೆ. ನಾವು ಹೈಸ್ಕೂಲ್‌ನ ವಿದ್ಯಾರ್ಥಿಗಳಾಗಿದ್ದಾಗ 'ಭಕ್ತ ಅಂಬರೀಶ' ಎನ್ನತಕ್ಕಂತಹ ಒಂದು ನಾಟಕವನ್ನು ಸುಬ್ಬಯ್ಯ ನಾಯ್ಡು ಕಂಪೆನಿಯಲ್ಲಿ ಹೊಸಪೇಟೆಯಲ್ಲಿ ಅವರು ಮಾಡಿದ್ದರು. ಆ ಸಂದರ್ಭದಲ್ಲಿ ಯಾರೋ ಕೆಲವು ಕಿಡಿಗೇಡಿಗಳು ಅದೇ ಪ್ರಥಮ ಬಾರಿಗೆ 1953ರಲ್ಲಿ ತುಂಗಬದ್ರ ಅಣೆಕಟ್ಟೆಯ ಹಿನ್ನೀರನ್ನು ನಿಲ್ಲಿಸಿದ್ದರು. ಬಹಳ ಜನ ಕೌತುಕದಿಂದ ಈ ಅಣೆಕಟ್ಟೆಯಲ್ಲಿರುವಂತಹ ದೊಡ್ಡ ಸಾಗರೋಪಾದಿಯಲ್ಲಿರುವಂತಹ ಹಿನ್ನೀರನ್ನು ನೋಡಲಿಕ್ಕೆ ಹೋಗುತ್ತಿದ್ದರು. ಆಗ ಕಾಲುವೆಯಿಂದ ಸ್ವಲ್ಪ ಹೆಚ್ಚಿನ ನೀರು ಹರಿದಿದ್ದರಿಂದ ಕಿಡಿಗೇಡಿಗಳು ಕೆಲವರೆಲ್ಲರೂ ಸೇರಿ ಡ್ಯಾಂ ಹೊಡೆಯಿತು ಎಂದು ಸುಳ್ಳು ಪ್ರಚಾರ ಮಾಡಿ, ಹೊಸಪೇಟೆ ನಗರದಲ್ಲಿ ಅನೇಕ ಕಡೆ ದರೋಡಗಳನ್ನು ಮಾಡಿದರು. ಡ್ಯಾಂ ಹೊಡೆಯಿತು ಎಂದರೆ, ಹೊಡೆದಿರುವುದು ಸರಿಪಡಿಸಲಿಕ್ಕೆ ಸಾಧ್ಯ ಇದೆ ಎನ್ನುವುದು ಕೂಡ ಗೊತ್ತಿಲ್ಲದೆ ಇರತಕ್ಕಂತಹ ಸಂದರ್ಭದಲ್ಲಿ ಭಕ್ತ ಅಂಬರೀಶ ನಾಟಕ ಮಾಡುತ್ತಿದ್ದ ಡಾ: ರಾಜಕುಮಾರ್ ಆದಿಯಾಗಿಯೂ ಕೂಡ ಅನೇಕರು ತಮ್ಮ ಪಾತ್ರ ಮತ್ತು ವೇಷಭೂಷಣಗಳ ಸಮೇತವಾಗಿ ಅಲ್ಲಿ ಜೋಳದ ರಾಶಿ ಗುಡ್ಡ ಎಂದು ಇದೆ, ಆ ಗುಡ್ಡದ ಕಡೆಗೆ ಹೋದರು. ಎಲ್ಲಾ ಜನರು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಇಡೀ ಹೊಸಪೇಟೆ ನಗರದಲ್ಲಿ ಕಳ್ಳತನ, ದರೋಡೆಗಳು ಆಗಿರತಕ್ಕಂಥದ್ದು ಕಂಡಿದ್ದೇವೆ. ಈ ಮಾನವ ನಡವಳಿಕೆಗಳು ಏನಿವೆ, ಅವು ಬಹಳ ಮುಖ್ಯವಾಗಿ ಗಮನಿಸಬೇಕಾಗಿರತಕ್ಕಂತಹ ಅಂಶಗಳು. ಇದರ ಜೊತೆಗೆ ಸಾಮಾಜಿಕ ಕಳಕಳಿ ಎಂದರೆ, ಈಗಾಗಲೇ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ, ಅವರು ಎಂದೂ ಕೂಡ ತಮಿಳಿನ ಚಿತ್ರಗಳಲ್ಲಿ ಅಥವಾ ಪರ ಭಾಷೆ ಚಿತ್ರಗಳಲ್ಲಿ ನಟಿಸಲಿಲ್ಲ. ನಟಿಸಲಿಲ್ಲ ಎನ್ನುವಂಥದ್ದು ನಟಿಸಬಾರದು ಎಂದು ಅಲ್ಲ. ಒಬ್ಬ ಕಲಾವಿದನಿಗೆ ಭಾಷೆ ಮತ್ತು ಪ್ರದೇಶ ಅಡ್ಡ ಹಾಕುತ್ತದೆ ಎನ್ನತಕ್ಕಂತಹ ಪ್ರಶ್ನೆ ಇಲ್ಲ. ಅಲ್ಲಿರತಕ್ಕಂತಹ ಬದ್ದತೆ ಕನ್ನಡ ಚಲನಚಿತ್ರ ರಂಗ ಬೆಳೆಯಬೇಕೆಂಬ ಸದಾಶಯವನ್ನು ಇಟ್ಟುಕೊಂಡಿರತಕ್ಕಂತಹ ಒಬ್ಬ ವ್ಯಕ್ತಿ, ಇಲ್ಲಿರುವಂತಹ ಚಿತ್ರೀಕರಣ ಒಂದು ಸಮೂಹ

ಪ್ರಯತ್ನ. ಒಬ್ಬ ವ್ಯಕ್ತಿ ಮೇಲೆ ಅವಲಂಬಿತವಾಗಿರತಕ್ಕಂಥದ್ದು ಅಲ್ಲ. ಚಲನಚಿತ್ರದಲ್ಲಿ ನಿರ್ದೇಶಕನಿಂದ ಹಿಡಿದು ಒಬ್ಬ ಲೈಟ್ ಬಾಯ್‌ವರೆಗೆ ಬಹಳ ಮುಖ್ಯವಾದ ಪಾತ್ರವನ್ನು ಮಾಡುತ್ತಾರೆ. ಅದು ಬೆಳೆಯಬೇಕೆಂಬ ಕಾರಣಕ್ಕಾಗಿ ಅವರು ಬೇರೆ ಚಿತ್ರಗಳಲ್ಲಿ ನಾನು ಭಾಗವಹಿಸುವುದಿಲ್ಲ ಮತ್ತು ಮರು ಚಿತ್ರಣ ಆಗಿರತಕ್ಕಂಥದ್ದು ಇದ್ದರೆ ಅದರಲ್ಲಿ ನಾನು ಪಾತ್ರ ಮಾಡುವುದಿಲ್ಲ ಸಂಗೀತವನ್ನು ನಾನೇ ಹಾಡುತ್ತೇನೆ ಎನ್ನತಕ್ಕಂತಹ ರೀತಿಯಲ್ಲಿ ಅವರು ಅತ್ಯಂತ ಎಲ್ಲ ವಿಭಾಗಗಳಲ್ಲಿ ಬಹಳ ದೊಡ್ಡದಾಂತಹ ಉತ್ತುಂಗ ಶಿಖರವನ್ನು ಅವರು ತಲುಪಿದ್ದರು. ಅಂತಹ ಡಾ: ರಾಜ್‌ಕುಮಾರ್‌ರವರ ಬಗ್ಗೆ ಕನ್ನಡದ ಜನ ಬಹಳ ಭಾವುಕರಾಗಿ ಪ್ರತಿಕ್ರಿಯೆ ಮಾಡುತ್ತಾರೆ. ತಮಿಳುನಾಡಿನಲ್ಲಿ ಅಂತಹ ಭಾವುಕತೆ ಇದೆ. ಆದರೆ ನಮ್ಮಲ್ಲಿ ಅಂತಹ ಭಾವುಕತೆ ಇಲ್ಲದಿದ್ದರೂ ಕೂಡ ಜನ ಅವರ ಬಗ್ಗೆ ತೋರಿಸಿದಂತಹ ಗೌರವ ಮತ್ತು ಪ್ರೀತಿ ಅದನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರ, ಮಾನ್ಯ ಮುಖ್ಯಮಂತ್ರಿಗಳು ಕೂಡ ಚಲನಚಿತ್ರ ರಂಗದಲ್ಲಿ ಬಹಳ ನಿಕಟವಾದ ಸಂಪರ್ಕ ಇಟ್ಟುಕೊಂಡಿರತಕ್ಕಂತಹ ಕಾರಣಕ್ಕಾಗಿ ಮುಂದೆ ಎಲ್ಲರ ಜೊತೆ ಸಮಾಲೋಚನೆ ಮಾಡಿ ಅವರಿಗೆ ಘನತೆ ತಂದು ಕೊಡುವಂತಹ ರೀತಿಯಲ್ಲಿ ಚಿರಕಾಲ ಅದು ಉಳಿಯುವಂತಹ ರೀತಿಯಲ್ಲಿ ಒಂದು ಸ್ಮಾರಕವನ್ನು ನಿರ್ಮಾಣ ಮಾಡಬೇಕು. ಅದನ್ನು ತತ್‌ಕ್ಷಣ ಮಾಡಬೇಕೆಂದು ಹೇಳುವುದರಲ್ಲಿ ಅರ್ಥವಲ್ಲ. ಕೆಲವರು ವಿಶ್ವವಿದ್ಯಾನಿಲಯ ಮಾಡಬೇಕೆಂದು ಹೇಳುವುದು ಇನ್ನು ಕೆಲವರು ಬೇರೆ ಬೇರೆ ವಿಷಯುಗಳನ್ನು, ಸಲಹೆಗಳನ್ನು ಕೊಟ್ಟಿದ್ದಾರೆ, ಅದರೆ ಈ ಬಗ್ಗೆ ಪರಿಣಿತರಾಗಿರತಕ್ಕಂಥವರು ಮತ್ತು ಕಲಾ ಪ್ರಪಂಚದಲ್ಲಿ ರಂಗ ಭೂಮಿಗೆ ಸಂಬಂಧಪಟ್ಟವರನ್ನೆಲ್ಲಾ ಕರೆಸಿ ಅದರ ಬಗ್ಗೆ ಮಾತನಾಡಿ, ಸೂಕ್ತವಾದ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಹೇಳಿ, ತಾವು ತಂದಿರತಕ್ಕಂತಹ ಈ ಸಂತಾಪ ಸೂಚನೆಗೆ ಇಡೀ ಸದನ ಇದರಲಿ ಭಾಗಿಯಾಗಿದೆ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಇದನ್ನು ದುಃಖತಪ್ತರಾದ ಕುಟುಂಬದವರು ಭರಿಸುವಂತಹ ರೀತಿಯಲ್ಲಿ ನಮ್ಮ ಈ ತೀರ್ಮಾನವನ್ನು ಅವರಿಗೆ ಕಳುಹಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿ, ನನಗೆ ಮಾತನಾಡಲು ಅವಕಾಶ ಕೊಟ್ಟು ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ): ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂತಹ ಈ ಸಂತಾಪ ಸೂಚನೆ, ಇಲ್ಲಿ ಬಹಳಷ್ಟು ಜನ ಹಿರಿಯರು, ಸಮಾಜ ಸೇವೆ ಮಾಡಿರತಕ್ಕಂತಹವರು ಮತ್ತು ಹಿರಿಯ ವ್ಯಕ್ತಿಗಳು ಮಾರ್ಗದ ಮಲ್ಲಪ್ಪನವರು, ಎಸ್.ಬಿ. ತಲ್‌ವಾಲ್‌ಕರ್‌ರವರು, ಕೆ.ಸಿ. ಮೊದಗೇಕರ್ ದೇಸಾಯಿಯವರು, ಕೆ. ಹರ್ಷಕುಮಾರಗೌಡರವರು, ಪಿ. ಮೂಡ್ಲೇಗೌಡರವರು ವಿಶೇಷವಾಗಿ ಒಬ್ಬ ಕಲಾವಿದನಾಗಿ. ಮತ್ತು ಅಭಿಮಾನಿಯಾಗಿ ಡಾ:

ರಾಜ್‌ಕುಮಾರ್‌ರವರ ಬಗ್ಗೆ ಎರಡೇ ಎರಡು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ನಾವೆಲ್ಲರೂ ಅಪ್ಪಾಜಿಯವರು ಎಂದೇ ಕರೆಯುತ್ತಿದ್ದೆವು. ನಮ್ಮ ಜೊತೆ ಬಹಳ ಹತ್ತಿರದ ನಿಕಟವಾದ ಸಂಬಂಧಗಳು ಇದ್ದವು. ಅವರ ಮಗ ನಮ್ಮ ತಂಗಿ ಜೊತೆ ಸಂಬಂಧ ಬೆಳೆಸಿದ ಮೇಲೆ ಬಹಳಷ್ಟು ಗಂಟೆಗಳ ಕಾಲ ಅವರ ಜೊತೆ ಮಾತನಾಡತಕ್ಕಂತಹ ಅವಕಾಶಗಳು ನಮಗೆ ಸಿಕ್ಕಿದ್ದವು. ಮೊದಲನೇ ಸಾರಿ ನಾನು ರಾಜ್‌ಕುಮಾರ್‌ರವನ್ನು ನೋಡಿದಾಗ ಯಾವುದೇ ಸಂಬಂಧಗಳು ಇರಲಿಲ್ಲ. ಶಹನಾಯಿವಾದಕರಾದ ಉಸ್ತಾದ್ ಬಿಸ್ಮಿಲ್ಲಾ ಖಾನ್ ಮತ್ತು ಡಾ: ರಾಜ್‌ಕುಮಾರ್‌ರವರನ್ನು ಒಟ್ಟಿಗೆ ನೋಡುವಂತಹ ಒಂದು ಸದಾವಕಾಶ ನನಗೆ ದೊರಕಿತ್ತು. ವಿಶೇಷವಾಗಿ ರಾಜ್‌ಕುಮಾರ್‌ರವರು ಅಪ್ಪಾಜಿಯವರು ಅವರ ಚಿತ್ರರಂಗವನ್ನು ಮತ್ತು ನಾಟಕವನ್ನು ಉಸಿರು ಮತ್ತು ಹೃದಯದ ಮಿಡಿತ ಎನ್ನುವಂತೆ ಅವೆರಡರನ್ನೂ ಇಟ್ಟುಕೊಂಡಿದ್ದರು. ಯಾವುದೇ ಒಂದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆದರೂ ಒಬ್ಬ ಮನುಷ್ಯ ಹೇಗೆ ಉಳಿಯುವುದಿಲ್ಲವೋ; ಹಾಗೆ ಇವೆರಡನ್ನೂ ಬಿಟ್ಟರೆ ನನಗ ಬೇರೆ ಉಳಿವಿಲ್ಲ ಎನ್ನತಕ್ಕಂತಹ ಭಾವನೆ ಮೇಲೆ ಇದ್ದಂತಹ ಒಬ್ಬ ಮೇರು ನಟರಾಗಿದ್ದರು. ವಿಶೇಷವಾಗಿ ನಾನು ಈ ಚಿತ್ರರಂಗಕ್ಕೆ ಬರತಕ್ಕಂತಹ ಒಂದು ಸಂದರ್ಭ, ಆ ಸಂದರ್ಭದಲ್ಲಿ ನನಗೆ ಯಾವುದೇ ತರಹದ ತಳಪಾಯ ಇರಲಿಲ್ಲ. ಶಾಲೆಯಲ್ಲಿ ಅಲ್ಲಿ ಇಲ್ಲಿ ಸ್ವಲ್ಪ ನಟನೆ ಮಾಡಿದ್ದೆವು. ಡಾ: ರಾಜ್‌ಕುಮಾರ್‌ರವರು ಸಿಕ್ಕಾಗ ನಾವು ಹೇಗೆ ಚಿತ್ರ ರಂಗಕ್ಕೆ ಬರಬೇಕೆಂದು ಕೆಳಿದಾಗ, ಅವರು ನೀನು ಮದ್ರಾಸ್ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಹೋಗಿ ಒಂದು ತರಬೇತಿ ಪಡೆದುಕೊಂಡು ಬಾ ಎಂದು ಹೇಳಿ ಮಾರ್ಗದರ್ಶನ ನೀಡಿದರು. ಆಗ ಕಲಾವಿದರನ್ನು ಹೇಗೆ ತಯಾರು ಮಾಡಬೇಕೆನ್ನತಕ್ಕಂತಹ ನಿಟ್ಟಿನಲ್ಲಿ ಅವರು ನಮಗೆ ಹೇಳಿ ಕಳುಹಿಸಿ ಒಂದು ಒಳ್ಳೆಯ ಮಾರ್ಗದರ್ಶನ ನೀಡಿದರು. ಒಂದು ಒಳ್ಳೆಂಯು ಅವಕಾಶವೆಂಧರೆ, ನನ್ನ ಚಿತ್ರದಲ್ಲಿ ವೊದಲನೇ ಬಾರಿಗೆ ಡಾ: ರಾಜ್‌ಕಮಾರ್‌ರವರು ಧ್ವನಿಯನ್ನು ನಮ್ಮ 'ಅಶ್ವಮೇಧ' ಎನ್ನುವ ಚಿತ್ರದಲ್ಲಿ ನೀಡಿದ್ದರು. ಇದು ನಮ್ಮ ಬಹಳ ದೊಡ್ಡ ಹೆಗ್ಗಳಿಕೆ ಎನ್ನುವಂತಹ ಮಾತನ್ನು ಕೂಡ ಹೇಳಿದ್ದೆವು. ಇದರಲ್ಲಿ ವಿಶೇಷವಾಗಿ ನಮ್ಮ ಯುವಕ ವರ್ಗಕ್ಕೆ ನಾವು ಯಾವ ರೀತಿಯಾಗಿ ಇರಬೇಕೆನ್ನುವ ಬಗ್ಗೆ ಕೆಲವು ವಿಚಾರಗಳನ್ನು ರಾಜ್‌ಕುಮಾರ್‌ರವರು ನಮಗೆ ಹೇಳಿದ್ದರು. ಎಲ್ಲರೂ ಒಂದು ಸಾರಿ ಹೋಗಿ ಅಪ್ಪಾಜಿ ನಾವು ಹೇಗಿರಬೇಕು ಎಂದು ಕೇಳಿದ್ದಕ್ಕೆ ನಿನ್ನ ಮನಸ್ಸಿನಲ್ಲಿ ನೀನು ಚೆನ್ನಾಗಿ ಇರು. ನಿನ್ನ ಮನಸ್ಸಿನಲ್ಲಿ ನೀನು ಚೆನ್ನಾಗಿದ್ದರೆ ಉಳಿದಿದ್ದೆಲ್ಲವೂ ತನ್ನಷ್ಟಕ್ಕೆ ತಾನೇ ಬರುತ್ತದೆ. ಮನಸ್ಸಿನಲ್ಲಿಯೇ ಹುಳುಕು ಇಟ್ಟುಕೊಂಡರೆ ಯಾವುದೂ ಕೂಡ ಒಳ್ಳೆಯದಾಗುವುದಿಲ್ಲ ಎನ್ನತಕ್ಕಂತಹ ಮಾತನ್ನು ಆಡುತ್ತಿದ್ದರು. ಹೀಗಾಗಿ ಈ ತರಹದ ಹತ್ತಾರು ಮಾತುಗಳನ್ನು ವರ್ಷಾನುಗಟ್ಟಲೆ ಅವರ ಜೊತೆಗೆ

ಮಾತನಾಡತಕ್ಕಂಥ ಅವಕಾಶ ಸಿಕ್ಕಿದ್ದಾಗ ನಾನು ಅವರಿಂದ ಕೇಳಿದ್ದೇನೆ. ಅಂಥ ಅವಕಾಶ ನನಗೆ ಸಿಕ್ಕಿತ್ತು. ನಾನು ಅಂಥ ಹೆಚ್ಚಿಗೆ ವಿಚಾರಗಳನ್ನು ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಮಾನ್ಯ ವಾಟಾಳ್ ನಾಗರಾಜ್‌ರವರು ಹಾಗೂ ಇನ್ನಿತರರು ಬಹಳಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕದಲ್ಲಿ ಕನ್ನಡ ಚಿತ್ರರಂಗವನ್ನು ತರಬೇಕಾದಂಥ ಸಂದರ್ಭದಲ್ಲಿ ರಾಜ್‌ಕುಮಾರ್‌ರವರ ನಿರ್ದಿಷ್ಟವಾದಂಥ ನಿರ್ಧಾರಗಳು ಇವೊತ್ತು ಕನ್ನಡ ಚಿತ್ರರಂಗ ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಯಿತು ಎಂದು ಹೇಳಬಯಸುತ್ತೇನೆ. ಡಾ: ರಾಜ್‌ಕುಮಾರ್‌ರವರ ಅಂತ್ಯಕ್ರಿಯೆ ಸಂದರ್ಭದಲ್ಲಿ ನಡೆದಂಥ ಘಟನೆ ಸಂದರ್ಭದಲ್ಲಿ ನಾನು ಸೇರಿದಂತೆ ಸುಮಾರು ಇನ್ನೂರರಿಂದ ಇನ್ನೂರೈವತ್ತು ಜನರು ಮಾತ್ರ ಅಲ್ಲಿ ಇದ್ದೆವು. ಆದರೆ ಮೆರವಣಿಗೆಯಲ್ಲಿ ಇಲ್ಲಿಂದ ಲಕ್ಷಾಂತರ ಜನರು ಬರುತ್ತಿದ್ದರು. ಕಂಠೀರವ ಸ್ಟುಡಿಯೋದಲ್ಲಿ ನಮ್ಮ ಸಂಸಾರದವರು ಸೇರಿದಂತೆ ಎಲ್ಲರೂ ನಾವು ಅಲ್ಲಿದ್ದೆವು. ಆದರೆ ಒಂದೇ ಬಾರಿಗೆ ಅಲ್ಲಿ ವಾತಾವರಣ ಬದಲಾಗುತ್ತಾ ಹೋಯಿತು. ಅಲ್ಲಿ ಇನ್ನೇನು ಅಪ್ಪಾಜಿಯವರ ಬಾಡಿ ಬರುತ್ತಿದೆ ಎಂದಾಗ ಒಂದೇ ಬಾರಿಗೆ ಸುಮಾರು ಮೂವತ್ತರಿಂದ ನಲವತ್ತು ಸಾವಿರ ಜನರು ಅಲ್ಲಿಗೆ ಬಂದು ಈ ತರಹದ ಘಟನೆಗಳು ಆವೊತ್ತು ಅಲ್ಲಿ ನಡೆದಿದೆ. ಈಗಾಗಲೇ ಈ ಬಗ್ಗೆ ಸದನದಲ್ಲಿ ಹಲವಾರು ಹಿರಿಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಮುಂದೆ ಆ ಬಗ್ಗೆ ಚರ್ಚೆ ನಡೆದಂಥ ಸಂದರ್ಭದಲ್ಲಿ ಆ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಸರ್ಕಾರಕ್ಕೆ ಕೊಡತಕ್ಕಂಥ ಅವಶ್ಯಕತೆ ಇದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಒಬ್ಬ ಮೇರುನಟ ಮತ್ತು ಅಪ್ಪಾಜಿ ಡಾ: ರಾಜ್‌ಕುಮಾರ್‌ರವರ ನಿಧನಕ್ಕೆ ತಾವು ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿ ನನಗೆ ಎರಡು ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು): ಮಾನ್ಯ ಅಧ್ಯಕ್ಷರೆ, ಈ ಶಾಸನ ಸಭೆಯಲ್ಲಿ ಸದಸ್ಯರಾಗಿ ನಿಧನರಾಗಿರುವಂಥ ಮಾರ್ಗದ ಮಲ್ಲಪ್ಪನವರು, ಮೂಡ್ಲೇಗೌಡ, ಮೊದಗೇಕರ ದೇಸಾಯಿ, ಎಸ್.ಪಿ. ತಲ್ವಾಲ್‌ಕರ್, ಎಸ್.ಟಿ. ಸಾಮ್ರಾಜ್ಯರವರು, ಹರ್ಷಕುಮಾರ್‌ಗೌಡರು ಇವರುಗಳ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಇವರ ನಿಧನದಿಂದ ಉಂಟಾಗಿರುವ ನೋವನ್ನು ಭರಿಸುವಂಥ ಶಕ್ತಿ ಅವರ ಕುಟುಂಬ ವರ್ಗದವರಿಗೆ ಭಗವಂತ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸಿ ನಮ್ಮ ಕನ್ನಡದ ಕಣ್ಮಣಿ, ಕನ್ನಡ ಚಿತ್ರರಂಗಕ್ಕೆ ತನ್ನದೇ ಆದಂಥ ಕೊಡುಗೆಯನ್ನು ನೀಡಿ ಕನ್ನಡ ನಾಡಿನಿಂದ ದೂರ ಮತ್ತೆಂದು ಬರದಂತೆ ನಮ್ಮಿಂದ ಬಹಳ ದೂರವಾದಂಥ ಡಾ: ರಾಜ್‌ಕುಮಾರ್‌ರವರ ನಿಧನಕ್ಕೂ ಕೂಡ ಸಂತಾಪವನ್ನು ಸಲ್ಲಿಸುತ್ತಾ ನಾಲ್ಕು ಮಾತುಗಳನ್ನಾಡಬಯಸುತ್ತೇನೆ. ಡಾ: ರಾಜ್‌ಕುಮಾರ್‌ರವರ ಕಾಲದಲ್ಲಿ ನಾವು

ಕಲಾವಿದರಾಗಿದ್ದೆವು ಎನ್ನುವುದೇ ನಮಗೆ ಒಂದು ದೊಡ್ಡ ಹೆಮ್ಮೆಯ ವಿಷಯ ಡಾ: ರಾಜ್‌ಕುಮಾರ್‌ರವರಿಗೆ ಸರಿಸಾಟಿ ಕನ್ನಡ ಚಿತ್ರರಂಗದಲ್ಲಿಯೇ ಅಲ್ಲ ಇಡೀ ಭಾರತ ದೇಶದಲ್ಲಿಯೇ ಇಲ್ಲ. ಏಕೆಂದರೆ ಸೂರ್ಯನಿಗೆ ಬೇರೆ ಯಾರೂ ಕೂಡ ಸಾಟಿಯಾಗುವುದಕ್ಕೆ ಯಾರಿಗೂ ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಡಾ: ರಾಜ್‌ಕುಮಾರ್‌ರವರ ಅಭಿನಯಕ್ಕೆ ಸಾಟಿಯಾಗಿರುವವರು ಕನ್ನಡ ನಾಡಿನಲ್ಲಿ ಬೇರೆ ಯಾರೂ ಕೂಡ ಇಲ್ಲವೆಂದರೆ ಅದು ಅತಿಶಯೋಕ್ತಿಯಾಗಲಾರದು. ಡಾ: ರಾಜ್‌ಕುಮಾರ್‌ರವರನ್ನು ಬಹಳ ಹತ್ತಿರದಿಂದ ಅವರ ಅಭಿಮಾನಿಯಾಗಿ 1972ರಲ್ಲಿ ಸಂಪತ್ತಿಗೆ ಸವಾಲ್ ನೂರು ದಿವಸಗಳ ಶತದಿನೋತ್ಸವ ದಾವಣಗೆರೆಯಲ್ಲಿ ನಡೆದಂಥ ಸಮಾರಂಭದಲ್ಲಿ ನಾನು ಬಹಳ ದೂರದಿಂದ ನೋಡಿ ತೃಪ್ತಿಪಟ್ಟುಕೊಂಡದ್ದು ನನ್ನ ಮನಸ್ಸಿನಲ್ಲಿ ಇವೊತ್ತಿಗೂ ಉಳಿದುಕೊಂಡಿದೆ. ಅದಾದನಂತರ 1998ರಲ್ಲಿ ನಾನು ಹಿರಿಯೂರಿನಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿದ್ದಾಗ ಡಾ: ರಾಜ್‌ಕುಮಾರ್‌ರವರು ಬಳ್ಳಾರಿಗೆ ಹೋಗಬೇಕಾದಂಥ ಸಂದರ್ಭದಲ್ಲಿ ಐ.ಬಿ.ಯಲ್ಲಿ ಬಂದು ಉಳಿದುಕೊಂಡಾಗ ನನಗೆ ಅವರನ್ನು ಅತಿ ಹತ್ತಿರದಿಂದ ನೋಡುವಂಥ ಒಂದು ಸೌಭಾಗ್ಯ ಸಿಕ್ಕಿತು. ಯಾವುದೇ ಒಬ್ಬ ಕಲಾವಿದನಿಗೆ ಅವನಿಗಿಂತ ಅತಿ ದೊಡ್ಡ ಕಲಾವಿದನ ಹತ್ತಿರ ತನ್ನದನ್ನು ಹೇಳಿಕೊಳ್ಳಬೇಕೆಂಬ ಆಸೆ ಇದ್ದೇ ಇರುತ್ತದೆ. ಅದೇ ರೀತಿ ನಾನು ಅಂದು ಡಾ: ರಾಜ್‌ಕುಮಾರ್‌ರವರ ಮುಂದೆ ನಾನು ಕುರುಕ್ಷೇತ್ರ ನಾಟಕದಲ್ಲಿ ಮಾಡಿದ್ದೆ ಎಂದು ಡಾ: ರಾಜ್‌ಕುಮಾರ್‌ರವರಿಗೆ ಹೇಳಿದೆ. ಆಗ ಅಣ್ಣಾರವರು ಇದನ್ನು ಯಾರು ಬರೆದವರು ಎಂದು ಒಂದು ಮಾತನ್ನು ನನಗೆ ಕೇಳಿದರು. ಕನ್ನಡದಲ್ಲಿ ಬರೆದವರು ಹನುಮಂತರಾಯರು ಎಂದು ನಾನು ಹೇಳಿದಾಗ ಅವರು ಒಂದು ಮಾತನ್ನು ಹೇಳಿದರು. ಅದೇನೆಂದರೆ, ಇದರಲ್ಲಿ ಕಬ್ಬಿಣದ ಕಡಲೆ ತರಹದ ಶಬ್ದಗಳು ಇರುತ್ತವೆ, ಇದನ್ನು ಅಭಿನಯಿಸುವುದು ಅಷ್ಟೊಂದು ಸುಲಭವಲ್ಲ, ಅಂಥದ್ದನ್ನು ನೀನು ಅಭಿನಯಿಸಿದ್ದೀ, ಎಂದು ಬಹಳ ಮೆಚ್ಚುಗೆಯ ಮಾತುಗಳನ್ನು ಆಡಿದರು. ಅದಾದ ನಂತರ 1993ರಲ್ಲಿ ನಾನು 'ನಿಷ್ಕರ್ಷ' ಚಿತ್ರವನ್ನು ನಿರ್ಮಾಣ ಮಾಡಿ 1994ರಲ್ಲಿ ನಿಷ್ಕರ್ಷ ಚಿತ್ರ ಉದಯ ಟಿ.ವಿ.ಯ ಏಳು ಅವಾರ್ಡ್‌ಗಳನ್ನು ಪಡೆದಾಗ ಆ ಅವಾರ್ಡ್‌ನ್ನು ಡಾ: ರಾಜ್‌ಕುಮಾರ್‌ರವರಿಂದ ಪಡೆಯುವಂಥ ಸಂದರ್ಭ ಒದಗಿಬಂತು. ಆ ದಿನವನ್ನು ಪುಣ್ಯದ ದಿವಸವೆಂದೇ ನಾನು ಹೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಆ ಅವಾರ್ಡ್‌ನ್ನು ಪಡೆದ ನಂತರ ಡಾ: ರಾಜ್‌ಕುಮಾರ್‌ರವರೇ ನನಗೆ ಅವರ ಚಿತ್ರವೊಂದರಲ್ಲಿ ನಟಿಸಬೇಕೆಂದು ನನಗೆ ಕರೆ ಬಂತು. ಆದರೆ ಆ ಚಿತ್ರ ಮುಂದೆ ಸೆಟ್ ಏರಲೇ ಇಲ್ಲ. ಇವೊತ್ತಿಗೂ ಆ ಆಸೆ ಆಸೆಯಾಗಿಯೇ ಉಳಿದಿದೆ. ಡಾ: ರಾಜ್‌ಕುಮಾರ್‌ರವರು ಇವೊತ್ತು ನಮ್ಮಿಂದ ದೂರ ಹೋಗಿರಬಹುದು. ಆದರೆ ಅವರ ಸರಳ, ಸಜ್ಜನಿಕೆ, ಸ್ಪಷ್ಟವಾದ ನುಡಿಮುತ್ತುಗಳು

ಇವೊತ್ತು ಯಾವುದೇ ಒಬ್ಬ ಕಲಾವಿದನಾಗಲಿ ಕನ್ನಡ ಭಾಷೆಯ ಶಬ್ದಗಳನ್ನು ಉಚ್ಚರಿಸುವಾಗ ಡಾ: ರಾಜ್‌ಕುಮಾರ್‌ರವರಷ್ಟು ಸ್ಪಷ್ಟವಾಗಿ ಉಚ್ಚರಣೆ ಮಾಡುವುದಕ್ಕೆ ಯಾವುದೇ ಕಲಾವಿದನಿಗೆ ಸಾಧ್ಯವೇ ಇಲ್ಲ. ಇದನ್ನು ಎಲ್ಲರೂ ಒಪ್ಪಿಕೊಳ್ಳುವಂಥದ್ದೇ. ಹೀಗಾಗಿ ಡಾ: ರಾಜ್‌ಕುಮಾರ್‌ರವರು ಇವೊತ್ತು ಇಡೀ ಕರ್ನಾಟಕದ ಜನಗಳ ಮನೆ, ಮನದಾಳದಲ್ಲಿ ಆಳವಾಗಿ ಬೇರೂರಿದ್ದಾರೆ. ಎಲ್ಲರಿಗೂ ಒಬ್ಬ ಪ್ರೀತಿಯ ಅಣ್ಣನಾಗಿ, ಯಾರ ಮನಸ್ಸನ್ನೂ ನೋಯಿಸದಂಥ ಒಬ್ಬ ಧೀಮಂತ ವ್ಯಕ್ತಿಯಾಗಿ ಇವೊತ್ತು ಅವರು ನಮ್ಮಿಂದ ಕಣ್ಮರೆಯಾದರೂ ಕೂಡ, ಅವರು ರಾಘವೇಂದ್ರಸ್ವಾಮಿಗಳ ಹಾಡುಗಳನ್ನು ಏನು ಹಾಡಿದ್ದಾರೆ ಆ ಹಾಡುಗಳನ್ನು ಪ್ರತಿದಿನ ಬೆಳಿಗ್ಗೆ ನಾವು ಕೇಳುವಾಗ ಡಾ: ರಾಜ್‌ಕುಮಾರ್‌ರವರು ಕಣ್ಮರೆಯಾಗಿದ್ದರೂ ಕೂಡ ಅವರ ಧ್ವನಿಯಿಂದ ಹೊರಬರುವ ಶಬ್ದಗಳನ್ನು ಕೇಳುವಂಥ ಸೌಭಾಗ್ಯ ನಮಗೆ ಲಭಿಸಿದೆ. ಇಂಥ ರಾಜ್‌ಕುಮಾರ್‌ರವರು ನಿಧನಕ್ಕೂ ಮುಂಚೆ ಒಂದು ತಿಂಗಳ ಹಿಂದೆ 'ವೋಕಾರ್ಡ್' ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದರು. ಅವರು ಅಲ್ಲಿಂದ ಡಿಸ್‌ಚಾರ್ಜ್ ಆಗುವ ಸಂದರ್ಭದಲ್ಲಿ ನಾವು ಅವರನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿದ್ದೆ. ಆಗ ಅವರು ಬಹಳ ಗೆಲುವಾಗಿದ್ದರು. ಆ ಸಂದರ್ಭದಲ್ಲಿ ನಾನು ಅವರಿಗೆ ಹೇಳಿದ್ದೇನೆಂದರೆ, ತಾವು 1994ನೆಯ ಇಸವಿಯಲ್ಲಿ ನನಗೆ ಒಂದು ಮಾತನ್ನು ಹೇಳಿದ್ದಿರಿ, ನನ್ನ ಒಂದು ಚಿತ್ರದಲ್ಲಿ ಅಭಿನಯಿಸಬೇಕು ಎಂದು ಹೇಳಿದ್ದಿರಿ, ಈಗಲೂ ಕೂಡ ಗೆಲುವಾಗಿದ್ದೀರಿ, ನೂರು ವರುಷಗಳ ಕಾಲ ತಾವು ಬದುಕುತ್ತೀರಿ. ನಿಮ್ಮ ಒಂದು ಚಿತ್ರದಲ್ಲಿ ಅಭಿನಯಿಸಬೇಕು ಎನ್ನುವ ಆಸೆ ನನಗೆ ಈಗಲೂ ಕೂಡ ಇದೆ ಎಂದು ನಾನು ಅವರ ಬಳಿ ಹೇಳಿದಾಗ ಅವರು ಬಹಳ ಸಂತೋಷದಿಂದ ಆಶೀರ್ವಾದ ಮಾಡಿದರು. ಆದರೆ ಅದಾದ ಒಂದು ತಿಂಗಳಲ್ಲಿಯೇ ವಿಧಿ ಅವರನ್ನು ಈ ರಾಜ್ಯದಿಂದಲೇ ಕಿತ್ತುಕೊಂಡು ಹೋಗಿದ್ದು ಬಹಳ ದುರ್ದೈವವೆಂದು ಹೇಳುತ್ತೇನೆ. ಆವೊತ್ತು ರಾಜ್‌ಕುಮಾರ್‌ರವರು ಆಗಲಿದಂಥ ಸಂದರ್ಭದಲ್ಲಿ ನಾನು ಕೂಡ ಅಂದು ಕಂಠೀರವ ಸ್ಟುಡಿಯೋದಲ್ಲಿ ಅವರ ಶವ ಸಂಸ್ಕಾರದಲ್ಲೂ ಕೂಡ ಭಾಗಿಯಾಗಿದೆ. ಆದರೆ ಅವರ ಅಭಿಮಾನಿಗಳ ಮಹಾಪೂರ ಮತ್ತು ಅವರ ಭಾವುಕತೆಯೇ ಆವೊತ್ತಿನ ಘಟನೆಗಳಿಗೆ ಕಾರಣವಾಯಿತೆಂದು ಎಂದು ಅನ್ನಿಸುತ್ತಿದೆ. ಅಲ್ಲಿ ಯಾವ ರೀತಿ ಚಿತಾವಣೆಯಾಯಿತು ಅದರ ಬಗ್ಗೆ ನಾವು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅಭಿಮಾನಿಗಳ ಒಂದು ಮಹಾಪೂರ ಮತ್ತು ಅವರ ಭಾವುಕತೆಗಳನ್ನು ನಿಯಂತ್ರಿಸುವುದು ಕಷ್ಟ. ಬೇರೆ ರೀತಿಯ ಕಾರ್ಯಕ್ರಮಗಳಲ್ಲಿ ಬೇರೆ ರೀತಿಯ ಗಲಭೆಗಳು ಆದರೆ ಅದನ್ನು ನಿಯಂತ್ರಣ ಮಾಡುವುದು ಸುಲಭ. ಆದರೆ ಅಭಿಮಾನಿಗಳು ಭಾವುಕತೆಗೆ ಒಳಗಾಗದಂಥ ಸಂದರ್ಭದಲ್ಲಿ ಅದನ್ನು ನಿಯಂತ್ರಿಸಲು ಭಾವುಕತೆ ಜೊತೆಗೆ ಹೊಡೆದಾಟ ಮಾಡುವುದಾಗಲಿ ಅಥವಾ ಅದನ್ನು ನಿಯಂತ್ರಿಸುವುದಕ್ಕೆ ಅಸ್ತ್ರಗಳನ್ನು ಬಳಸುವುದೂ ಕೂಡ ಅಷ್ಟೊಂದು

ಸುಲಭವಾದಂಥ ವಿಚಾರವಲ್ಲ. ಆವೊತ್ತಿನ ದಿವಸ ಏನು ಘಟನೆಗಳು ನಡೆಯಿತೋ ಅದು ಆಗಬಾರದಾಗಿತ್ತು. ಅವರ ಆತ್ಮಕ್ಕೆ ಶಾಂತಿಯನ್ನು ಬಯಸಿದಂಥ ಅಭಿಮಾನಿಗಳು ಉದ್ವೇಗದಲ್ಲಿ ಈ ಕೃತ್ಯಗಳಲ್ಲಿ ತೊಡಗಿರಬಹುದೆಂದು ನಾನು ಭಾವಿಸುತ್ತೇನೆ. ಆವೊತ್ತು ಆದಂಥ ಘಟನೆ ಬಗ್ಗೆ ತಾವು ಅನುಕಂಪವನ್ನು ಸೂಚಿಸುತ್ತಾ ಡಾ: ರಾಜ್‌ಕುಮಾರ್‌ರವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯಿಂದ ಉಂಟಾಗಿರುವ ನೋವನ್ನು ತಡೆದುಕೊಳ್ಳುವಂಥ ಶಕ್ತಿಯನ್ನು ಭಗವಂತ ಕೊಡಲೆಂದು ಆ ಭಗವಂತನಲ್ಲಿ ಪ್ರಾರ್ಥಿಸಿ ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಾದ ತಮಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ): ಮಾನ್ಯ ಅಧ್ಯಕ್ಷರೆ, ಇವೊತ್ತು ಈ ಒಂದು ಶಾಸನಸಭೆಯಲ್ಲಿ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿರುವಾಗ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮಾರ್ಗದ ಮಲ್ಲಪ್ಪನವರನ್ನು ನೋಡತಕ್ಕಂಥ ಭಾಗ್ಯ ಇತ್ತು. ದಿವಂಗತ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಅವರ ಎರಡ್ಮೂರು ಕಾರ್ಯಕ್ರಮಗಳಲ್ಲಿ ಅವರ ನಡೆನುಡಿ ಮತ್ತು ಅವರ ಚಟುವಟಿಕೆಗಳನ್ನು ನೋಡಿದಂಥ ನೆನಪುಗಳು ನನ್ನ ಮನಸ್ಸಿನಲ್ಲಿ ಇನ್ನೂ ಉಳಿದಿದೆ. ಎಸ್.ಪಿ. ತಲ್ವಾಲ್‌ಕರ್‌ರವರು ಹಾಗೂ ಶ್ರೀ ಎಸ್.ಜಿ. ಸಾಮ್ರಾಜ್ಯರವರು ಮತ್ತು ಶ್ರೀ ಮೂಡ್ಲೇಗೌಡರವರು, ಶ್ರೀ ಮೊದಗೇಕರ್ ದೇಸಾಯಿಯವರ ಜೊತೆ ನನಗೆ ಸಂಪರ್ಕ ಇಲ್ಲದಿದ್ದರೂ ಅವರ ಬಗ್ಗೆ ನಾನು ಕೇಳಿದ್ದೇನೆ, ಮತ್ತು ಅವರುಗಳ ಬಗ್ಗೆ ಪುಸ್ತಕಗಳನ್ನು ಓದಿದ್ದೇನೆ. ಆದರೆ ಮಾನ್ಯ ಹರ್ಷಕುಮಾರಗೌಡರನ್ನು ನಾನು ಬಹಳ ಹತ್ತಿರದಿಂದ ನೋಡಿ ಅವರ ಬಗ್ಗೆ ಬಲ್ಲೆ. ಅವರು ಇವೊತ್ತು ನಮ್ಮ ಜೊತೆಯಲ್ಲಿ ಇಲ್ಲ. ಮನುಷ್ಯನ ಬದುಕಿನಲ್ಲಿ ಹುಟ್ಟು ಆಕಸ್ಮಿಕ, ಸಾವು ಖಚಿತ. ಆ ಹುಟ್ಟು ಸಾವುಗಳ ನಡುವೆ ಏನು ನಾವು ಸಾಧನೆ ಮಾಡುತ್ತೇವೆ ಅದೇ ಶಾಶ್ವತ. ಕೆಲವರು ಜೀವಂತವಾಗಿದ್ದರೂ ಕೂಡ ಸತ್ತವರಾಗಿ ಇರುತ್ತಾರೆ. ಆದರೆ ಕೆಲವರು ಸತ್ತಾದ ಮೇಲೂ ಕೂಡ ಜೀವಂತರಾಗಿ ಇರುತ್ತಾರೆ. ಇಂಥ ಗಣ್ಯರನ್ನು ಸ್ಮರಣೆ ಮಾಡಿಕೊಳ್ಳುವಂಥ ಸಂದರ್ಭದಲ್ಲಿ ಅವರ ಆತ್ಮಕ್ಕೆ ಶಾಂತಿ ಸಿಗಲೆಂದೂ ಮತ್ತು ಅಂಥವರುಗಳ ಅಗಲಿಕೆಯಿಂದ ಉಂಟಾಗಿರುವ ದುಃಖವನ್ನು ಭರಿಸುವಂಥ ಶಕ್ತಿ ಅವರ ಕುಟುಂಬ ವರ್ಗದವರಿಗೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ, ಈ ಸಂದರ್ಭದಲ್ಲಿ ಡಾ: ರಾಜ್‌ಕುಮಾರ್‌ರವರ ಬಗ್ಗೆ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಡಾ: ರಾಜ್‌ಕುಮಾರ್‌ರವರನ್ನು ಕರ್ನಾಟಕದ ಚಿತ್ರ ಜಗತ್ತು ಕಳೆದುಕೊಂಡುಬಿಟ್ಟಿದೆ. ನಾನು ಹೇಳುವುದೇನೆಂದರೆ ಡಾ: ರಾಜ್‌ಕುಮಾರ್‌ರವರು ಕೇವಲ ಒಬ್ಬ ವ್ಯಕ್ತಿ ಆಗಿರಲಿಲ್ಲ. ಅವರು ಒಬ್ಬ ರಂಗಭೂಮಿ ಕಲಾವಿದನಾಗಿರಲಿಲ್ಲ.

ಒಬ್ಬ ಚಲನಚಿತ್ರ ನಟನಾಗಿರಲಿಲ್ಲ. ಅವರು ಮಹಾನ್ ಶಕ್ತಿಯಾಗಿದ್ದರು. ಅವರು ನುಡಿದಂತೆ ನಡೆದಂತವರು. ಅವರು ಜೀವನದುದ್ದಕ್ಕೂ ಸಹ ಒಬ್ಬ ನಟನಾಗಿ ಅತ್ಯುತ್ತಮ ಜೀವನ ಆದರ್ಶಗಳನ್ನು ಮೈಗೂಡಿಸಿಕೊಂಡಂಥವರು. ಈಗಾಗಲೇ ಮಾತನಾಡಿದಂತಹ ಹಿರಿಯರಾದಂತಹ ಮಾನ್ಯ ವಾಟಾಳ್ ನಾಗರಾಜ್‌ರವರು ಒಂದು ಮಾತು ಹೇಳಿದರು. ಅವರು ವಿಶ್ವದ ಅತ್ಯಂತ ಉತ್ತಮ ನಟ ಎಂದು ಹೇಳಿದರು. ನಾವು ಎಷ್ಟೋ ಜನ ನಟರನ್ನು ನೋಡಿದ್ದೇವೆ ಅಮಿತಾಬ್ ಬಚ್ಚನ್ ಅವರ ನಟನೆ, ಎಂ.ಜಿ. ರಾಜಚಂದ್ರನ್ ಅವರ ನಟನೆ, ಎನ್.ಟಿ. ರಾಮರಾವ್ ಅವರ ನಟನೆ, ನಾಗೇಶ್ವರ್ ರಾವ್ ಅವರ ನಟನೆಯನ್ನು ಹಾಗೂ ಇನ್ನು ಬೇರೆ ಬೇರೆಯವರ ನಟನೆಯನ್ನು ನೋಡಿದ್ದೇವೆ. ಅದರ ಜೊತೆಗೆ ಇಂಗ್ಲೀಷ್ ನಟರುಗಳನ್ನು ನೋಡಿದ್ದೇವೆ ಒಬ್ಬ ವ್ಯಕ್ತಿ ಹಾಡತಕ್ಕಂಥ, ಅಭಿನಯಿಸತಕ್ಕಂಥ, ನವರಸಗಳನ್ನು ಲೀಲಾಜಾಲವಾಗಿ ಅಭಿನಯಿಸತಕ್ಕಂಥ ವ್ಯಕ್ತಿ ಬಹುಶಃ ಡಾ: ರಾಜ್‌ಕುಮಾರ್ ಬಿಟ್ಟರೆ ಇನ್ಯಾರು ಇಲ್ಲವೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಬಹಳ ಹೆಮ್ಮೆಯಿಂದ ನಾವು ಕರ್ನಾಟಕದ ಜನರಾಗಿ ಹೇಳಿಕೊಳ್ಳತಕ್ಕಂಥ ಸುದೈವ ನಮ್ಮದಾಗಿದೆ. ನಾನು ಡಾ: ರಾಜ್‌ಕುಮಾರ್‌ರವರನ್ನು ಬಹಳ ಚಿಕ್ಕಂದಿನಲ್ಲಿ ಕೊಳ್ಳೇಗಾಲ ಶಾಲೆಯಲ್ಲಿ ಕಲಿಯುತ್ತಿದ್ದಂತಹ ಸಂದರ್ಭದಲ್ಲಿ, ಅವರು ಸಿಂಗಾನಲ್ಲೂರಿನಲ್ಲಿ ಒಂದು ಶಾಲೆಯ ಕಟ್ಟಡ ನಿಧಿ ಸಂಗ್ರಹಕ್ಕೆ ಬಂದಾಗ, ಬಹುಶಃ ನಾನು 7–8 ವರ್ಷದ ಹುಡುಗ ಎಂದು ಕಾಣುತ್ತದೆ. ಆಗ ಪ್ರಪ್ರಥಮವಾಗಿ ಅವರ ದರ್ಶನ ಭಾಗ್ಯವಾಗಿತ್ತು. ಆಗ ಅವರನ್ನು ಭೇಟಿ ಮಾಡಿದಂತಹ ಸಂದರ್ಭದಲ್ಲಿ ಅವರ ಅಭಿಮಾನಿಯಾದೆ. ಅವರ ಅಭಿನಯದ ಜೊತೆಗೆ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆ. ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಆಸನದಲ್ಲಿ ಕುಳಿತುಕೊಂಡಿಲ್ಲ. ಅವರು ಆಗಲೆ ಒಂದು ಮಾತು ಹೇಳಿದರು ಡಾ: ರಾಜ್‌ಕುಮಾರ್ ಚಿತ್ರಗಳು ಪ್ರೇರಣೆ ನೀಡಿತು ಎಂದು ಹೇಳಿದರು. ಖಂಡಿತವಾಗಿ ಅವರಿಗೆ ಹೇಗೆ ಪ್ರೇರಣೆ ನೀಡಿತೋ ಅದೇ ರೀತಿ ನನ್ನಂತಹ ಯುವಕರಿಗೆ, ಹಲವಾರು ಜನರಿಗೆ ಪ್ರೇರಣೆ ನೀಡಿದೆ. ಡಾ: ರಾಜ್‌ಕುಮಾರ್‌ರವರು ಹಾಡುತ್ತಿದ್ದಂತಹ ರೀತಿ ಅವರ ಯೋಗಾಭ್ಯಾಸ ಹಾಗೂ ಅವರ ಚಿತ್ರಗಳಲ್ಲಿ ಯಾವುದೇ ರೀತಿಯ ಅಶ್ಲೀಲ, ಅಸಭ್ಯದ ವರ್ತನೆ, ಮಾದಕತೆ ಇರಲಿಲ್ಲ. ಅವರು ಶಬ್ದವೇದಿ ಚಿತ್ರದಲ್ಲಿ ಯುವಕರಿಗೆ ಹೇಳಿದಂತಹ ಸಂದೇಶ ನೋಡಿದರೆ, ಬಹುಶಃ ಅವರು ಒಂದೊಂದು ಚಿತ್ರದಲ್ಲಿ ಸಹ ಸಂದೇಶವನ್ನು ಸಮಾಜಕ್ಕೆ ಕೊಡುತ್ತಿದ್ದರು. ಇವತ್ತು ಸಹ ಅವರ ಚಿತ್ರಗಳನ್ನು ನೋಡುವಾಗ ಪ್ರೇರಣೆ ಬರುತ್ತದೆ ಹಾಗೂ ಸ್ಫೂರ್ತಿ ಬರುತ್ತದೆ. ಅಲ್ಲದೆ ರೋಮಾಂಚನ ಕೂಡ ಆಗುತ್ತದೆ. ಅವರು ಅಭಿನಯಿಸಿದ ಕನಕದಾಸ, ಸತ್ಯ ಹರಿಶ್ಚಂದ್ರ, ಬಬ್ರುವಾಹನ, ಬಹದ್ದೂರ್ ಗಂಡು ಹೀಗೆ ಹಲವಾರು ಚಿತ್ರಗಳನ್ನು ನೋಡಿದಾಗ ನಮಗೆ ಸ್ಫೂರ್ತಿ ಬರುತ್ತಿತ್ತು.

ನನಗೆ ಮಹಾತ್ಮಾ ಗಾಂಧಿಯವರ ಮಾತು ನೆನಪಾಗುತ್ತದೆ, ಯಾರು ನುಡಿದಂತೆ ನಡೆಯುತ್ತಾರೆ ಹಾಗೂ ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೆ ಆ ವ್ಯಕ್ತಿ ಹೇಳಿದಾಗ ಮಾತ್ರ ಆ ಮಾತು ಮಂತ್ರವಾಗುತ್ತದೆನ್ನುವಂತಹ ಮಾತನ್ನು ಅವರ ಜೀವನದಲ್ಲಿ ನಾನು ಕಂಡಿರತಕ್ಕಂಥ ಸತ್ಯ. ಅವರಲ್ಲಿ ಇದ್ದಂತಹ ಅಚ್ಚುಕಟ್ಟು, ಶ್ರದ್ಧೆ, ಕಟ್ಟುಮಸ್ತಾದ ಶರೀರ, ಸೊಗಸಾದ ಶಾರೀರಿ, ರಂಗ ಕಲೆಯಲ್ಲಿ ಇದ್ದಂತಹ ತನ್ಮಯತೆ, ಹೊಸತನವನ್ನು ಕಲಿಯಬೇಕೆಂಬ ಹಂಬಲ. ಅವರು ಯಾವತ್ತು ಹೇಳುತ್ತಿದ್ದರು, ಯಾವುದಕ್ಕಾದರೂ ಒಂದು ಏಜ್ ಬಾರ್ ಇದೆ, ಆದರೆ ಕಲಿಯುವುದಕ್ಕೆ ಮಾತ್ರ ಏಜ್ ಬಾರ್ ಇಲ್ಲವೆನ್ನುವಂತಹ ಮಾತನ್ನು ಹೇಳಿದ್ದು ನನಗೆ ಇನ್ನು ಚೆನ್ನಾಗಿ ನೆನಪಿದೆ. ಮೊನ್ನೆ 'ಅರಸು' ಚಿತ್ರದ ಮುಹೂರ್ತದ ಸಂದರ್ಭದಲ್ಲಿ ಒಂದು ಮಾತು ಹೇಳಿದರು. ಯುವಕರು ಅಥವಾ ಯಾರೇ ಆಗಲಿ ಪ್ರತಿಯೊಬ್ಬರು ಸಹ ಅರಸುತ್ತಾ ಹೋಗಬೇಕು. ಏನನ್ನು ಅರಸಬೇಕೆಂದರೆ, ಏನನ್ನಾದರೂ ಕಲಿಯಬೇಕು, ತಿಳಿದುಕೊಳ್ಳಬೇಕು ಎಂದು ಯಾವಾಗ ಅರಸುತ್ತಾ ಹೋಗುತ್ತೇವೋ ಆಗ ಭಗವಂತ ನಮ್ಮನ್ನು ಹರಸುತ್ತಾನೆ ಎಂದು ಹೇಳಿದರು. ಇವತ್ತು ಎಷ್ಟೋ ಚಿತ್ರಗಳು ಬರುತ್ತಿವೆ. ಯುವಕರನ್ನು ನಿರ್ವೀರ್ಯರನ್ನಾಗಿ ಮಾಡತಕ್ಕಂಥ ಚಿತ್ರಗಳು ಬರುತ್ತಿವೆ. ಸಮಾಜಘಾತುಕರನ್ನು ಸೃಷ್ಟಿ ಮಾಡತಕ್ಕಂಥ ಚಿತ್ರಗಳು ಬರುತ್ತಿವೆ. ಆದರೆ ಅ ರೀತಿಯ ಸನ್ನಿವೇಶಗಳನ್ನು ಡಾ: ರಾಜ್‌ಕುಮಾರ್ ಚಿತ್ರಗಳಲ್ಲಿ ಕಾಣುತ್ತಿರಲಿಲ್ಲ. ಮೇಯರ್ ಮುತ್ತಣ್ಣ ಇರಬಹುದು, ಅವರ ಎಲ್ಲಾ ಚಿತ್ರಗಳಲ್ಲಿ ಕೂಡ ಅದ್ಭುತವಾದ ಕಲೆಯನ್ನು ನೀಡಿದ್ದು, ಆ ರೀತಿಯ ಕಲೆಯನ್ನು ನೋಡಿದಾಗ ಬಹುಶಃ ನಾವು ಮತ್ತೊಬ್ಬ ರಾಜ್‌ಕುಮಾರ್‌ರವರನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಡಾ: ರಾಜ್‌ಕುಮಾರ್‌ರವರಿಗೆ ರಾಜ್‌ಕುಮಾರ್‌ರವರೆ ಸಾಟಿಯಾಗಿದ್ದರು. ಅಂತಹ ಒಬ್ಬ ಮಹಾನ್ ವ್ಯಕ್ತಿ ಮತ್ತೆ ಹುಟ್ಟಿ ಬರಲಿ ಎನ್ನತಕ್ಕಂಥಾದ್ದೆ ಎಲ್ಲರ ಹೆಬ್ಬಯಕೆ. ಕರ್ನಾಟಕದ ಆರು ಕೋಟಿ ಜನ ಏನಿದ್ದೇವೆ, ಅವರು ಡಾ: ರಾಜ್‌ಕುಮಾರ್‌ರವರ ಅಂತಿಮ ಸಂಸ್ಕಾರ ನೋಡಬೇಕು, ಅವರ ದರ್ಶನ ಪಡೆಯಬೇಕು ಎನ್ನುವ ಇಚ್ಛೆ ಇತ್ತು. ಡಾ: ರಾಜ್‌ಕುಮಾರ್ ಅವರು ನಿಧನರಾದ ಸುದ್ದಿ ತಿಳಿದ ತಕ್ಷಣ ಮೂರುವರೆ ಗಂಟೆಗೆ ನಾನು ಅವರ ಮನೆ ಬಾಗಿಲಿಗೆ ಹೋದೆ. ಕೊನೆ ಕ್ಷಣದವರೆಗೂ ನಾನು ಅಲ್ಲೆ ಇದ್ದಂತಹವನು. ಅಲ್ಲಿ ನಡೆದಂತಹ ಘಟನೆಯನ್ನು ಒಂದೊಂದು ಹಂತ ಹಂತದನ್ನು ನಾನು ಕಣ್ಣಾರೆ ಕಂಡಂತಹವನು. ಆಗ ಏನೇನು ನಡೆಯಿತು ಎನ್ನುವುದನ್ನು ನನಗೆ ಹೇಳುವುದಕ್ಕೆ ಅವಕಾಶ ಸಿಕ್ಕಾಗ ಈ ಸಭೆಯಲ್ಲಿ ನಾನು ಹೇಳುತ್ತೇನೆ. ಆಗ ಯಾವ ರೀತಿ ನಿರ್ಲಕ್ಷವಾಯಿತು, ಯಾವ ಸಂದರ್ಭದಲ್ಲಿ ಜನರು ಪ್ರಚೋದನೆಗೊಂಡರು ಎನ್ನುವ ಮಾತನ್ನು ಈ ಸಭೆಯಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅವತ್ತು ಸಹ ಒಬ್ಬ ಮಹಾನ್ ವ್ಯಕ್ತಿ ಹಾಗೂ ಒಬ್ಬ ಮೇರು ನಟ ಸತ್ತಂತಹ ಸಂದರ್ಭದಲ್ಲಿ ಸರ್ಕಾರ ಯಾವ ರೀತಿ ಕಟ್ಟೆಚ್ಚರ ವಹಿಸಬೇಕಾಗಿತ್ತು,

ಸತ್ತ ವಿಷಯ ಗೊತ್ತಾದ ತಕ್ಷಣ ಏನು ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು ಏಕೆ ವೈಫಲ್ಯವಾಯಿತು ಎನ್ನುವುದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು, ಆಗ ಮಾತ್ರ ಅವರ ಆತ್ಮಕ್ಕೆ ನಿಜವಾಗಿ ಶಾಂತಿಯಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಡಾ: ರಾಜ್‌ಕುಮಾರ್‌ರವರು ಯಾವಾಗಲೂ ಏನೆಂದು ಹೇಳುತ್ತಿದ್ದರು ಎಂದರೆ 'ನನ್ನ ಅಭಿಮಾನಿ ದೇವರುಗಳು' ಎಂದು ಜನತೆಗೆ ಹೇಳುತ್ತಿದ್ದರು. ಆದರೆ ಇವತ್ತು ಆ ಅಭಿಮಾನಿ ದೇವರುಗಳನ್ನು ಏನು ಮಾಡಿದೆವು? ಕೊಂದೆವು. ಅವರನ್ನು ಆಕಸ್ಮಿಕವಾಗಿ ಕೊಂದೆವು, ಗೋಲಿಬಾರ್ ಮಾಡಿ ಕೊಂದೆವೋ, ಅವರನ್ನು ಕೊಂದಮೇಲೆ ಆ ಅಭಿಮಾನಿ ದೇವರುಗಳ ಕುಟುಂಬಕ್ಕೆ ಪರಿಹಾರ ಕೊಡುವ ವಿಚಾರದಲ್ಲಿ ಇನ್ನು ವಿಳಂಬ ಮಾಡುತ್ತಿದ್ದೇವಲ್ಲ, ಇದು ನಾಚಿಕೆಗೇಡು ಆಗಿದೆ. ಇವತ್ತು ಮಾನ್ಯ ಯಡಿಯೂರಪ್ಪನವರು, ಅಲ್ಲಿ ಯಾವುದೋ ಒಂದು ರೀತಿಯ ಕೈವಾಡ ಇದೆಯೆಂದು ಹೇಳಿದರು. ಆದರೆ ನಾನು ಒಂದು ಮಾತು ಹೇಳುತ್ತೇನೆ, ಕೈವಾಡ ಏನೇ ಇರಲಿ, ನನ್ನ ಕ್ಷೇತ್ರದ ಐದು ಜನ ಮುಗ್ಧ ಕುಟುಂಬದವರು ಸತ್ತಿದ್ದಾರೆ. ಆ ನೋವು ನನಗೆ ಗೊತ್ತಿದೆ. ಅವರ ಕುಟುಂಬದ ಹಿನ್ನೆಲೆ ನನಗೆ ಗೊತ್ತಿದೆ. ಇದುವರೆಗೂ 53 ರಿಂದ 54 ದಿವಸಗಳಾಯಿತಲ್ಲ ಡಾ: ರಾಜ್‌ಕುಮಾರ್ ನಿಧನರಾಗಿ ಇನ್ನುವರೆಗೆ ಪರಿಹಾರ ಕೊಡುವುದಕ್ಕಾಗಲಿಲ್ಲ, ಅ ಅಭಿಮಾನಿ ದೇವರುಗಳಿಗೆ, ಆ ಅಭಿಮಾನಿಗಳಿಗೆ ದೇವರಾಗಿದ್ದಂತಹ ಆ ದೇವರ ಆತ್ಮಕ್ಕೆ ಶಾಂತಿ ಸಿಗುತ್ತದೆಯೆ? ಎನ್ನುವಂತಹ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಡಾ: ರಾಜ್‌ಕುಮಾರ್ ಅವರ ಅಂತಿಮ ಸಂಸ್ಕಾರದ ಸಂದರ್ಭದಲ್ಲಿ ಲಕ್ಷಾಂತರ ಜನ ಬರಬೇಕೆಂದು ಬಯಸಿದ್ದರು. ಸನ್ಮಾನ್ಯ ಯಡಿಯೂರಪ್ಪನವರು ಬಂದಂತಹ ಸಂದರ್ಭದಲ್ಲಿ ನಾನು ಅಲ್ಲಿದ್ದೆ, ಆಗ ಅಲ್ಲಿ ಯಾವ ವಾತಾವರಣ ಇತ್ತು ಎಂದು ನನಗೆ ಗೊತ್ತು. ಬಹುಶಃ ಇದೆಲ್ಲಾ ಏಕೆ ನಿಯಂತ್ರಣವಾಗಲಿಲ್ಲ? ತಮಿಳುನಾಡಿನಲ್ಲಿ ಎಂಜಿಆರ್ ಅವರು ಸತ್ತಾಗ ಯಾವ ರೀತಿ ಎಚ್ಚರಿಕೆಯನ್ನು ವಹಿಸಿದ್ದರು, ರಾಜೀವ್‌ಗಾಂಧಿಯವರು ಸತ್ತಾಗ ಯಾವ ರೀತಿ ವಹಿಸಿದರು, ಶ್ರೀಮತಿ ಇಂದರಾಗಾಂಧಿಯವರು ಸತ್ತಾಗ ಯಾವ ರೀತಿ ವಹಿಸಿದರು, ಇದೆಲ್ಲಾ ಇತಿಹಾಸವನ್ನು ನೋಡಿದಾಗ ಕೂಡ ನಮ್ಮ ಅಧಿಕಾರಿಗಳು ಪೂರ್ವಭಾವಿ ಸಿದ್ಧತೆಯನ್ನು ಮಾನಸಿಕವಾಗಿ ಮಾಡಿಕೊಂಡಿಲ್ಲ. ಮಾನ್ಯ ಮುಖ್ಯಮಂತ್ರಿಗಳೇನೋ ಹೊಸಬರು. ಆದರೆ ಅಧಿಕಾರಿಗಳು ಹಳಬರಲ್ಲವೆ? ಅವರಿಗೆ ಅನುಭವ ಇರಲಿಲ್ಲವೆ? ಆವತ್ತು ಅಂತಿಮ ಸಂಸ್ಕಾರದ ಸಂದರ್ಭದಲ್ಲಿ ನಡೆದಂತಹ ಘಟನೆಯಲ್ಲಿ ಮುಗ್ಧರ ಪ್ರಾಣವನ್ನು ತೆಗೆದುಕೊಂಡಂತಹ ಹಿನ್ನಲೆಯಲ್ಲಿ ಹೇಳುತ್ತೇನೆ, ಒಬ್ಬ ರಂಗಭೂಮಿಯ ಮಹಾನ್ ಕಲಾವಿದರಾದಂತಹವರಿಗೆ ಆತ್ಮಕ್ಕೆ ಶಾಂತಿ ಸಿಗಬೇಕಾದರೆ, ನಾನು ಹೇಳುತ್ತೇನೆ, ಅವತ್ತು ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಗೆ ಬರುವಂತಹ ಕಂಠೀರವ ಸ್ಟೇಡಿಯಂ ಏನಿದೆ ಅಲ್ಲಿ ಹೆಣವನ್ನು ಹೂಳುವುದಕ್ಕೆ

ಗುಂಡಿ ತೋಡುವುದಕ್ಕೆ ಜೆಸಿಬಿ ಸಿಕ್ಕಿರಲಿಲ್ಲ. ಕೊನೆಗೆ ಯಾರೋ ಒಬ್ಬರು ಕಂಟ್ರಾಕ್ಟರ್‌ನವರಿಂದ ಜೆಸಿಬಿಯನ್ನು ತೆಗೆದುಕೊಂಡು ಕೆಲಸ ಮಾಡಿಸಿದರು. ಬ್ಯಾರಿಕೇಡ್‌ಗಳು ಸಿಗಲಿಲ್ಲ, ಪೊಲೀಸ್ ಕಮೀಷನರ್‌ರವರಿಗೆ ಗೊತ್ತು, ಅಲ್ಲಿ ಪೂರ್ಣಪ್ರಜ್ಞಾ ಸ್ಕೂಲ್ ಆವರಣದ ಪಕ್ಕದಲ್ಲಿ ನನ್ನ ಜೊತೆ ಪೊಲೀಸ್ ಅಧಿಕಾರಿಗಳು ಏನಿದ್ದರು, ಎಲ್ಲಿ ತೆಗೆದುಕೊಂಡು ಹೆಣ ಇಡಬೇಕು ಎಂದು ಸಂಜೆ ಆರು ಗಂಟೆಯಾದರೂ ತೀರ್ಮಾನವಾಗಿರಲಿಲ್ಲ. ಇದನ್ನೆಲ್ಲಾ ಮರೆಮಾಚುವುದು ಸೂಕ್ತವಲ್ಲ. ಇದರ ವಿಚಾರದಲ್ಲಿ ಎಲ್ಲಿ ವೈಫಲ್ಯತೆಯಾಗಿದೆ ಆ ರೀತಿಯಾಗಿ ಇನ್ನು ಮುಂದೆ ಆಗುವುದು ಬೇಡ. ಇದರ ವಿಚಾರದಲ್ಲಿ ಯಾರೋ ಬಾಳೆಹಣ್ಣು ತಿಂದು ಬೇರೆಯವರ ಮೂತಿಗೆ ಒರೆಸುವುದು ಬೇಡವೆಂದು ಹೇಳುತ್ತಾ, ಇದರ ಬಗ್ಗೆ ನ್ಯಾಯಂಗ ತನಿಖೆಯಾಗಬೇಕು. ಇನ್ನು ಮುಂದೆ ಇಂತಹ ಯಾರೇ ಒಬ್ಬರು ಮಹಾನುಭಾವರು ಸತ್ತಾಗ ಇಂತಹ ಅನಾಹುತಗಳು ಆಗದ ರೀತಿಯಲ್ಲಿ ಸರ್ಕಾರ ಎಚ್ಚರಿಕೆ ವಹಿಸುವ ದಿಕ್ಕಿನಲ್ಲಿ ನಾವು ಸಾಗಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಡಾ: ರಾಜ್‌ಕುಮಾರ್ ಅವರ ವಿಚಾರದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಹಲವಾರು ಗಣ್ಯರು ಹೇಳಿದಂತೆ ಅವರ ಹೆಸರಿನಲ್ಲಿ ದೊಡ್ಡ ಮ್ಯೂಸಿಯಂ ಆಗಬೇಕು. 205 ಚಿತ್ರಗಳಲ್ಲಿ ಅವರೇನು ಅಭಿನಯಿಸಿದ್ದಾರೆ, ಅದರಲ್ಲಿ ಎಷ್ಟೋ ಚಿತ್ರಗಳು ಸಿಗದೆ ಇರಬಹುದು, ಮುಂದಿನ ಇತಿಹಾಸದಲ್ಲಿ, ಅವರು ಮಾಡಿರತಕ್ಕಂಥ ಅಭಿನಯ ಇರಬಹುದು, ಅವರ ಮನೆಯಲ್ಲಿ ಅವರು ನುಡಿಸುತ್ತಿದ್ದ ವೀಣೆ, ನುಡಿಸುತ್ತಿದ್ದಂತಹ ಹಾರ್ಮೋನಿಯಂ, ಅವರು ಕುಳಿತುಕೊಳ್ಳುತ್ತಿದ್ದಂತಹ ಆಸನ, ಅವರ ಬಳಸುತ್ತಿದ್ದಂತಹ ವಸ್ತುಗಳು ಭವಿಷ್ಯತ್ತಿನಲ್ಲಿ ಸ್ಫೂರ್ತಿಯನ್ನು ಕೊಡುತ್ತವೆ. ಅವರು ಎಷ್ಟು ಸರಳತೆ, ಎಷ್ಟು ಮುಗ್ಧತೆ, ಅವರು ಮೊದಲು ಅಭಿನಯಿಸಿದಂತಹ ಭಾವಚಿತ್ರಗಳು ಇವೆಲ್ಲಾ ಮುಂದಿನ ಪೀಳಿಗೆಗೆ ಬೇಕಾಗಿರುವಂತಹ ಕಾರಣಕ್ಕೆ ಅವರ ವಸ್ತುಗಳ ಒಂದು ಮ್ಯೂಸಿಯಂ ಆಗಬೇಕು. ಜೊತೆಯಲ್ಲಿ ಡಾ: ರಾಜ್‌ಕುಮಾರ್ ಅವರ ಹೆಸರಿನಲ್ಲಿ ಪ್ರತಿಯೊಂದು ಜಿಲ್ಲೆಗೆ ಒಂದು ಕಲಾಭೂಮಿಯಾಗಬೇಕು; ರಂಗ ಮಂದಿರಗಳಾಗಬೇಕು. ಟಿಲಿವಿಷನ್‌ಗಾಗಲಿ, ಚಲನಚಿತ್ರಕ್ಕಾಗಲಿ ಎಲ್ಲಾದಕ್ಕೂ ತಾಯಿ ಭೂಮಿ ಎಂದರೆ ರಂಗಭೂಮಿ. ಅವರ ಹೆಸರುಗಳು ಶಾಶ್ವತವಾಗಿ ಉಳಿಯಬೇಕು ಎಂದರೆ ರಂಗಮಂದಿರಗಳು ಪ್ರತಿ ಜಿಲ್ಲೆಯಲ್ಲಿ ಸಹ ನಿರ್ಮಾಣವಾಗಬೇಕು ಎನ್ನುವಂತಹ ವಿಷಯವನ್ನು ನಾನು ಹೇಳುತ್ತೇನೆ. ಡಾ: ರಾಜ್‌ಕುಮಾರ್‌ರವರನ್ನು ವೀರಪ್ಪನ್ ಅಪಹರಣ ಮಾಡಿದಾಗ ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದರು. ಆಗ ಹೇಗೆ ನಿಭಾಯಿಸುವುದಕ್ಕೆ ಹೇಗಾಯಿತು? ಈ ಸಂದರ್ಭದಲ್ಲಿ ಏಕೆ ನಿಭಾಯಿಸುವುದಕ್ಕೆ ಆಗಲಿಲ್ಲ? ಎನ್ನುವಂತಹ ಪ್ರಶ್ನೆಯನ್ನು ನಾನು ಈ ಸಂದರ್ಭದಲ್ಲಿ ಬಹಿರಂಗವಾಗಿ ನಿಮ್ಮ ಮುಂದೆ ಇಡುವುದಕ್ಕೆ ಬಯಸುತ್ತೇನೆ. ಮತ್ತು ಗುಂಡೇಟಿನಿಂದ ಇವತ್ತೇನು

ಕಾಲುಗಳನ್ನು ಕಳೆದುಕೊಂಡಿದ್ದರೆ, ಮೂಳೆಗಳನ್ನು ಮುರಿದುಕೊಂಡಿದ್ದಾರೆ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿರುವಂತಹ ಅವರ ಪಟ್ಟಿಯನ್ನು ನಿಮಗೆ ಕಳುಹಿಸಿಕೊಡುತ್ತೇನೆ ನೋಡಿ. ಇವತ್ತು ಅಪರೇಷನ್ ಮಾಡಬೇಕಾದರೆ ಹೈಯರ್ ಆಫೀಸರ್‌ಗೆ ಕನ್ಸಂಟ್‌ಗೆ ಬರೆದಿದ್ದಾರೆ ಒಟ್ಟು 80 ಸಾವಿರ ರೂಪಾಯಿ ಆಗುತ್ತದೆ ಆಪರೇಷನ್ ಮಾಡಬೇಕೋ ಬಿಡಬೇಕೋ ಎಂದು ಸನ್ಮಾನ್ಯ ಯಡಿಯೂರಪ್ಪನವರು ಇದನ್ನು ಕೇಳಬೇಕು, ಇನ್ನು ಆಪರೇಷನ್ ಆಗಿಲ್ಲ, ಈಗಾಗಲೆ 50 ದಿವಸವಾಯಿತು. ತಾವು ಹೋಗಿ ನೋಡಿ, ಅವರಿಗೆ ಏಕೆ ಆಪರೇಷನ್ ಆಗಿಲ್ಲವೆಂದು. ಇದು ಸರ್ಕಾರದ ಜವಾಬ್ದಾರಿ ಅಲ್ಲವೆ? ಸ್ವಾತಂತ್ರ್ಯ ಬಂದಿದ್ದು ಇದಕ್ಕೋಸ್ಕರವೆ? ಒಂದು ಮಗು ಸತ್ತಾಗ, ಯಾರಿಗೋ ಗುಂಡೇಟು ಬಿದ್ದಾಗ ಹೋಗಿ ನೋಡುವಂತಹ ಕೆಲಸ ಮಾಡಬೇಕು, ನಿಮ್ಮ ಮಕ್ಕಳಾಗಿದ್ದರೆ ಸುಮ್ಮನೆ ಆಗುತ್ತಿದ್ದೀರಾ? ಅಭಿಮಾನಿ ಜನ ಕೇಳಿದರು, ಅಲ್ಲ ನೀವು ಒಬ್ಬ ರಾಜಕಾರಣಿ ಸತ್ತರೆ ಎಲ್ಲಾ ಸಿದ್ಧತೆಗಳನ್ನು ಮಾಡುತ್ತೀರಾ ಆದರೆ ಒಬ್ಬ ಮಹಾನ್ ನಟ ಸತ್ತಾಗ ನೀವು ಏಕೆ ಸಿದ್ದತೆಗಳನ್ನು ಮಾಡಿಕೊಳ್ಳುವುದಕ್ಕಾಗಲಿಲ್ಲ.

ಅಧ್ಯಕ್ಷರು: ಮಾನ್ಯ ನರೇಂದ್ರ ಬಾಬುರವರೆ ಸಂತಾಪ ಸೂಚನೆ ಮಾಡಬೇಕೆಂದರೆ ಏನಿದು?

ಶ್ರೀ ನೆ.ಲ. ನರೇಂದ್ರ ಬಾಬು: ಅವರ ಆತ್ಮಕ್ಕೆ ಇವತ್ತು ನಿಜವಾಗಿ ಶಾಂತಿ ಸಿಗಬೇಕೆಂದರೆ ಅವರ ಸಂತಾಪ ಸೂಚನೆಗೆ ಅರ್ಥ ಬರಬೇಕೆಂದರೆ, ತೊಂದರೆಯಾಗಿರುವಂತಹ ಅಭಿಮಾನಿ ದೇವರುಗಳಿಗೆ ಪರಿಹಾರವನ್ನು ಕೊಡಬೇಕು. ಆಗ ಮಾತ್ರ ನಿಜವಾಗಿ ಸಂತಾಪ ಸೂಚನೆಗೆ ಅರ್ಥ ಬರುತ್ತದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಜೊತೆಯಲ್ಲಿ ಆಸ್ಪತ್ರೆಯಲ್ಲಿ ನರಳುತ್ತಿರುವಂತಹ ರೋಗಿಗಳಿಗೆ ಬೇಕಾದಂತಹ ಚಿಕಿತ್ಸೆ, ಅವರಿಗೆ ಕೊಡಬೇಕಾದಂತಹ ಹಣ ಹಾಗೂ ಅವರ ಕುಟುಂಬಕ್ಕೆ ಕೆಲಸ ಸಿಗಬೇಕು. ಒಂದು ಕುಟುಂದಲ್ಲಿ ಕಣ್ಣಿಲ್ಲದೆ ಇರುವಂತಹ ತಂದೆ ಇದ್ದಾರೆ ಹಾಗೂ ತಾಯಿ ಇಲ್ಲದೆ ಇರುವಂತಹ ಕುಟುಂಬ ಇದೆ. ಅವರಿಗೆ ಒಂದು ಆಶ್ರಯ ಮನೆ ಕೊಡಿ ಸ್ವಾಮಿ, ಈ ಹೃದಯವಂತಿಕೆಯನ್ನು ತೋರಿಸಿ. ಅವರಿಗೆ ಕೇವಲ ಭರವಸೆಯನ್ನು ಹೇಳತಕ್ಕಂಥಾದ್ದಲ್ಲ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ದಯವಿಟ್ಟು ಈ ವಿಚಾರದ ಬಗ್ಗೆ ಸಂಪೂರ್ಣವಾಗಿ ಚರ್ಚೆ ಈ ಸದನದಲ್ಲಿ ಆಗಬೇಕು ಎನ್ನುವಂತಹ ಮಾತನ್ನು ಹೇಳಿ, ಇನ್ನೊಂದು ಪ್ರಸಂಗದಲ್ಲಿ ಒಬ್ಬ ವ್ಯಕ್ತಿ ನಾಲಿಗೆ ಕೊಯ್ಯಿಸಿಕೊಂಡನಲ್ಲ ಮಂಜುನಾಥ ಎನ್ನುವ ಯುವಕ ತುಮಕೂರು ಆಸ್ಪತ್ರೆಯಲ್ಲಿ ಇದ್ದಾನೆ. ಇವತ್ತು ಯಾರಿಗಾದರೂ ಸರ್ಕಾರದ ಪರವಾಗಿ ಹೋಗಿ ನೋಡಿದ್ದಾರಾ? ಪ್ಲಾಸ್ಟಿಕ್ ಸರ್ಜರಿಗೆ ಒಂದೂವರೆ ಲಕ್ಷ ಹಣ ಬೇಕು. ಯಾರಾದರೂ ಹೋಗಿ ನೋಡಿದ್ದಾರಾ? ಅವನೇನು ಗೂಂಡಾನಾ? ರೌಡಿನಾ?

ಅಧ್ಯಕ್ಷರು: ಮಾನ್ಯ ನರೇಂದ್ರ ಬಾಬು ಸಂತಾಪ ಸೂಚನೆ ವಿಚಾರದಲ್ಲಿ ಸಂತಾಪ ಸೂಚಿಸಿ ಎಂದರೆ, ಏನಿದೆ ಈ ತರಹ ಮಾತನಾಡಿದರೆ?

ಶ್ರೀ ನೆ.ಲ. ನರೇಂದ್ರ ಬಾಬು: ಇದ್ದಾಗ ಮಾರಕ ಸತ್ತ ಮೇಲೆ ಸ್ಮಾರಕ ಎಂದು ಕನ್ನಡದಲ್ಲಿ ಒಂದು ಮಾತಿದೆ.

MR. SPEAKER: Please I can't understand.

ಶ್ರೀ ನೆ.ಲ. ನರೇಂದ್ರ ಬಾಬು: ದಯಮಾಡಿ ಹೇಳುತ್ತೇನೆ, ಸತ್ತವರಿಗೆ ಪರಿಹಾರ, ಆಸ್ಪತ್ರೆಯಲ್ಲಿರುವವರಿಗೆ ಚಿಕಿತ್ಸೆ ಹಾಗೂ ನ್ಯಾಯಾಂಗ ತನಿಖೆಯಾದಾಗ ಮಾತ್ರ ನಿಜವಾದ ಸಂತಾಪವಾಗುತ್ತದೆ ಎನ್ನುವಂತಹ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಡಾ: ಅನ್ನದಾನಿಯವರು ಮಾತನಾಡಿ. ತಾವು ಭಾವೋದ್ವೇಗಕ್ಕೆ ಒಳಗಾಗಿ ಈ ರೀತಿ ಮಾತನಾಡಿದರೆ ಗೌರವ ಸೂಚಿಸುವಾಗ ಏನಿದು? ಅಲ್ಲಿ ಆಯಿತಲ್ಲ ಘಟನೆ ಅದಕ್ಕೂ ಇದಕ್ಕೂ ಏನು ವ್ಯತ್ಯಾಸ ಇದೆ.

ಡಾ: ಕೆ. ಅನ್ನದಾನಿ (ಮಳವಳ್ಳಿ): ಮಾನ್ಯ ಸಭಾಧ್ಯಕ್ಷರೆ, ಇಂದಿನ ಸಂತಾಪ ಸೂಚಕ ಸಭೆಯಲ್ಲಿ ನನಗೆ ಭಾಗವಹಿಸಲು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕೆ ಪ್ರಥಮವಾಗಿ ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಶ್ರೀ ಮಾರ್ಗದ ಮಲ್ಲಪ್ಪನವರು ಮಾಜಿ ಸಚಿವರಾಗಿದ್ದರು, ಶ್ರೀ ಎಸ್.ಪಿ. ತಲವಾಲ್‌ಕರ್‌ರವರು ವಿಧಾನಸಭೆಯ ಮಾಜಿ ಸದಸ್ಯರಾಗಿದ್ದರು, ಶ್ರೀ ಎಸ್.ಡಿ. ಸಾಮ್ರಾಜ್ಯರವರು ವಿಧಾನಸಭಾ ಸದಸ್ಯರಾಗಿದ್ದರು, ಶ್ರೀ ಕೆ. ಹರ್ಷಕುಮಾರ್ ಗೌಡರು ವಿಧಾನಸಭಾ ಮಾಜಿ ಸದಸ್ಯರು, ಹಾಗೂ ಶ್ರೀ ಪಿ. ಮೂಡ್ಲೇಗೌಡರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಶ್ರೀ ಕೆ.ಸಿ. ಮೊದಗೇಕರ್ ದೇಸಾಯಿಯವರು ಮಾಜಿ ವಿಧಾನ ಸಭಾ ಸದಸ್ಯರು, ಹಾಗೂ ಕನ್ನಡದ ಮೇರು ನಟ ಡಾ: ರಾಜ್‌ಕುಮಾರ್‌ರವರ ನಿಧನದಿಂದ, ನಮ್ಮ ರಾಜ್ಯಕ್ಕೆ ತುಂಬಲಾರದಂಥ ನಷ್ಟವಾಗಿದೆ. ಅದೇ ರೀತಿಯಲ್ಲಿ ಡಾ: ರಾಜ್‌ಕುಮಾರ್‌ರವರು ಕಲಾ ಜಗತ್ತಿನಲ್ಲಿ, ಹೇಗೆ ಸೇವೆಯನ್ನು ಮಾಡಿ ಇವತ್ತು ನಮ್ಮ ಹೃದಯಾಳದಲ್ಲಿ ಉಳಿದುಕೊಂಡಿದ್ದರೆ, ಅದೇ ರೀತಿ ನಮ್ಮ ಮಾಜಿ ಸಚಿವರುಗಳು, ಹಾಗೂ ವಿಧಾನಸಭಾ ಸದಸ್ಯರುಗಳು ಇವರು ಕೂಡ ಸಮಾಜದ ಸೇವೆಯನ್ನು ಮಾಡಿ, ನಮ್ಮ ಮನದಾಳದಲ್ಲಿ ಉಳಿದುಕೊಂಡಿರುವಂಥ ಹಿರಿಯ ನಾಯಕರುಗಳು ಆಗಿದ್ದಾರೆ. ಇವತ್ತು ಡಾ: ರಾಜ್‌ಕುಮಾರ್‌ರವರ ಬಗ್ಗೆ ಬಹಳಷ್ಟು ಜನ ನಮ್ಮ ಹಿರಿಯ ಸದಸ್ಯರುಗಳು ಈ ಮನೆಯ ಸದಸ್ಯರೆಲ್ಲರೂ ಕೂಡ ಮಾತನಾಡಿದ್ದಾರೆ. ಈ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಎಲ್ಲಾ ಸದಸ್ಯರುಗಳು ಒಂದೇ ವಿಚಾರಗಳನ್ನು ಹೇಳುವಂತಹ ಸಂದರ್ಭಗಳು ಒದಗಿ ಬರಬಹುದು. ಆದರೆ ಡಾ: ರಾಜ್‌ಕುಮಾರ್‌ರವರು ಪ್ರಥಮವಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದಂತಹ ಸಂದರ್ಭದಲ್ಲಿ, ಇವರನ್ನು ಚಿತ್ರರಂಗಕ್ಕೆ ಇಂಟ್ರಡ್ಯೂಸ್

ಮಾಡಿದಂಥವರು, ನನ್ನ ಮಳವಳ್ಳಿ ಕ್ಷೇತ್ರದ ಹೆಚ್.ಎಲ್.ಎನ್. ಸಿಂಹರವರು, ಇವರು ಹೆಸರಾಂತ ನಿರ್ದೇಶಕರು ಆಗಿದ್ದರು. ಇವರು ಡಾ: ರಾಜ್‌ಕುಮಾರ್‌ರವರನ್ನು ಪ್ರಥಮವಾಗಿ ಸಿನಿಮಾ ಜಗತ್ತಿಗೆ ಇಂಟ್ರಡ್ಯೂಸ್ ಮಾಡಿದರು. ಆ ಸಂದರ್ಭದಲ್ಲಿ ಹೆಚ್.ಎಲ್.ಎನ್. ಸಿಂಹರವರು 'ಬೇಡರ ಕಣ್ಣಪ್ಪ' ಸಿನಿಮಾಕ್ಕೆ ಡಾ: ರಾಜ್‌ಕುಮಾರ್‌ರವರನ್ನು ನಾಯಕ ನಟರನ್ನಾಗಿ ಆಯ್ಕೆ ಮಾಡಿದರು. ಡಾ: ರಾಜ್‌ಕುಮಾರ್‌ರವರು ರಂಗಭೂಮಿಯಲ್ಲಿ ಇದ್ದಂಥವರು, ಅವರನ್ನು ಸಿನಿಮಾ ರಂಗಕ್ಕೆ ಹೆಚ್.ಎಲ್.ಎನ್. ಸಿಂಹರವರು ಪರಿಚಯ ಮಾಡಿದರು. ನಾವು ಇವತ್ತು ಡಾ: ರಾಜ್‌ಕುಮಾರ್‌ರವರನ್ನು ಪ್ರಥಮವಾಗಿ ಹೆಚ್.ಎಲ್.ಎನ್. ಸಿಂಹರವರು ಸಿನಿಮಾ ರಂಗಕ್ಕೆ ಪರಿಚಯ ಮಾಡಿದಂಥವರನ್ನು, ಅವರನ್ನೂ ಕೂಡ ಇವತ್ತು ನಾನು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಡಾ: ರಾಜ್‌ಕುಮಾರ್‌ರವರಂಥ ಮೇರು ಕಲಾವಿದ ಮತ್ತೊಬ್ಬರು ಈ ಜಗತ್ತಿನಲ್ಲಿ ಬರುವುದಿಲ್ಲವೆಂದು ನನ್ನ ಭಾವನೆಯಾಗಿದೆ. ಇದಕ್ಕೆ ಕಾರಣವೇನೆಂದರೆ, ಐತಿಹಾಸಿಕವಾಗಿ, ಪೌರಾಣಿಕವಾಗಿ, ಸಾಮಾಜಿಕವಾಗಿ, ಇದರ ಜೊತೆಗೆ ಸಂಗೀತವನ್ನು ಹಾಡುವುದರ ಮೂಲಕ, ಕೇವಲ 3ನೇ ತರಗತಿಯನ್ನು ಓದಿದಂಥ ಮುತ್ತಣ್ಣನವರು ಆ ಹಾಡುಗಾರಿಕೆ, ಮತ್ತು ಶಾಸ್ತ್ರೀಯ ಸಂಗೀತ, ಮತ್ತು ಸಿನಿಮಾರಂಗಕ್ಕೆ ಹಾಡುಗಳನ್ನು ಹಾಡುವಂಥಾದ್ದು ಹಾಗೂ ಭಕ್ತಿ ಗೀತೆಗಳನ್ನು ಹಾಡುವಂಥಾದ್ದು, ಇವತ್ತು ನಮ್ಮ ಕರ್ನಾಟಕದ ಹೆಚ್ಚಿನ ಜನರು ಅಯ್ಯಪ್ಪಸ್ವಾಮಿ ಮತ್ತು ರಾಘವೇಂದ್ರ ಸ್ವಾಮಿಗಳನ್ನು ಹೆಚ್ಚಾಗಿ ಒಲೈಸಿಕೊಂಡಿದ್ದಾರೆಂದರೆ, ಅದು ಡಾ: ರಾಜ್‌ಕುಮಾರ್‌ರವರು ಹಾಡಿರುವಂತಹ ಭಕ್ತಿಗೀತೆಗಳಿಂದ, ಈ ದೇವತೆಗಳು ಇಷ್ಟೊಂದು ಪ್ರಸಿದ್ಧಿ ಪಡೆಯಲು ಸಾಧ್ಯ ಆಗಿದೆ. ಡಾ: ರಾಜ್‌ಕುಮಾರ್‌ರವರು ಅಭಿನಯಿಸಿರುವಂತಹ ಎಲ್ಲಾ ಚಿತ್ರಗಳಲ್ಲೂ ಯಾವುದಾದರೂ ಒಂದು ಸಂದೇಶವನ್ನು ಡಾ: ರಾಜ್‌ಕುಮಾರ್‌ರವರು ಈ ನಾಡಿಗೆ ಕೊಟ್ಟಂಥ ಒಬ್ಬ ಮಹಾನ್ ಕಲಾವಿದರು ಆಗಿದ್ದಾರೆ. ಆ ಕಲಾವಿದರನ್ನು ನಾನು ಒಮ್ಮೆ ಭೇಟಿ ಮಾಡಲು ಅವರ ನಿವಾಸಕ್ಕೆ ಹೋಗಿ, ಅಲ್ಲಿ ಅವರು ಕೆಲವು ಹಿರಿಯರೊಡನೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಏನು ಹೇಳುತ್ತಿದ್ದರೆಂದರೆ, ನಾನು ಸುಮಾರು 125 ವರ್ಷಗಳ ಕಾಲ ಬದುಕುತ್ತೇನೆಂಬ ಮಾತನ್ನು ಹೇಳುತ್ತಿದ್ದರು. ನನಗೆ ಆ ತಕ್ಷಣದಲ್ಲಿ ಸಾವು ಇಲ್ಲವೆಂಬ ಮಾತನ್ನು ಡಾ: ರಾಜ್‌ಕುಮಾರ್ ಅವರು ಬಹಳ ಆತ್ಮವಿಶ್ವಾಸದಿಂದ ಹೇಳುತ್ತಿದ್ದರು. ಅದನ್ನೆಲ್ಲಾ ನೋಡಿದಾಗ, ಇವರು ಸುಮಾರು77,78 ವರ್ಷಕ್ಕೆ ನಮ್ಮನ್ನು ಬಿಟ್ಟು ಹೋಗಿರುವಂಥಾದ್ದು, ಈ ನಾಡಿಗೆ ಈ ಕಲಾ ಜಗತ್ತಿಗೆ ತುಂಬಲಾರದಂಥ ನಷ್ಟವಾಗಿದೆ. ಇವತ್ತು ಭಕ್ತ ಪ್ರಹ್ಲಾದಂಥ ಪೌರಾಣಿಕ ನಾಟಕಗಳು, ಮತ್ತು ಸತ್ಯ ಹರಿಶ್ಚಂದ್ರದಂಥ ನಾಟಕಗಳು, ಬಬ್ರುವಾಹನದಂಥ ಐತಿಹಾಸಿಕ ಚಿತ್ರಗಳು, ಈ ಎಲ್ಲಾ ಚಿತ್ರಗಳನ್ನು ಮತ್ತೆ ಅವರ ಅಭಿನಯಗಳನ್ನು ನೋಡಿದಾಗ ಬಹುಶಃ ಇನ್ನು ಮುಂದೆ ಇಂತಹ ಮಹಾನ್ ಕಲಾವಿದ ಈ ಕರ್ನಾಟಕ ರಾಜ್ಯದಲ್ಲಿ

ಹುಟ್ಟುವುದಿಲ್ಲವೇನೋ, ಎಂಬುದು ನಮ್ಮ ಭಾವನೆಯಾಗಿದೆ. ಇವತ್ತು ನನ್ನ ಕ್ಷೇತ್ರದಲ್ಲಿ ಇನ್ನೊಂದು ವಿಶೇಷವೆಂದರೆ, ಡಾ: ರಾಜ್‌ಕುಮಾರ್‌ರವರು ಆರಾಧ್ಯದೈವ್ಯವಾದ ಮುತ್ತರಾಯ ಸ್ವಾಮಿ, ಈ ಸ್ವಾಮಿ ನಮ್ಮ ಕ್ಷೇತ್ರದಲ್ಲಿ ಇರುವಂತಹ ಮುತ್ತೆತ್ತಿ ಎನ್ನುವ ಒಂದು ಪ್ರವಾಸಿ ಸ್ಥಳದಲ್ಲಿ, ಮುತ್ತುರಾಯ ಎನ್ನುವ ಒಂದು ಹನುಮಂತರಾಯನ ದೇವಸ್ಥಾನ ಇದೆ. ಇದು ಡಾ: ರಾಜ್‌ಕುಮಾರ್‌ರವರ ಮನೆತನದ ದೇವರು ಆಗಿದೆ. ಅದನ್ನು ಇವರು ಹೆಚ್ಚಾಗಿ ಪ್ರೀತಿ ಮಾಡುತ್ತಿದ್ದರು. ಇವತ್ತು ನಮ್ಮ ಕ್ಷೇತ್ರದಲ್ಲಿ ಮುತ್ತೆತ್ತಿ ಎನ್ನುವುದು ಪ್ರವಾಸಿ ತಾಣವಾಗಬೇಕೆಂದರೆ, ಆ ಮುತ್ತೆತ್ತಿ ಎನ್ನುವ ಜಾಗದ ಬಗ್ಗೆ ಸಾರ್ವಜನಿಕರಿಗೆ ಗೊತ್ತಿರಲಿಲ್ಲ. ಇಲ್ಲಿ ಡಾ: ರಾಜ್‌ಕುಮಾರ್‌ರವರು ಮುತ್ತೆತ್ತಿರಾಯನನ್ನು, ಹನುಮಂತ ರಾಯನನ್ನು, ಅಲ್ಲಿ ಪೂಜೆ ಮಾಡುವಂತಹ ಸಂದರ್ಭದಲ್ಲಿ, ಇದು ಅವರ ಮನೆ ದೇವರು ಎಂದು ಪ್ರಕಟವಾಗುವವರೆಗೂ ಕೂಡ, ಅದನ್ನು ನಾವು ಪ್ರವಾಸಿ ತಾಣವೆಂದು ಕರೆಯಲು ಸಾಧ್ಯವಾಗುತ್ತಿರಲಿಲ್ಲ. ಇಲ್ಲಿ ಡಾ: ರಾಜ್‌ಕುಮಾರ್‌ರವರು ಕಾಲು ಇಟ್ಟಮೇಲೆ, ಅವರ ಮನೆದೇವರು ಎಂದು ಒಪ್ಪಿಕೊಂಡ ಮೇಲೆ, ಇವತ್ತು ನನ್ನ ಕ್ಷೇತ್ರದಲ್ಲಿ ಮುತ್ತೆತ್ತಿ ಎನ್ನುವ ಜಾಗ, ಇಲ್ಲಿನ ಮುತ್ತೆತ್ತಿರಾಯನೆಂದು ಹನುಮಂತರಾಯನಿಗೆ ಕರೆಯುತ್ತಾರೆ. ಇದು ನಮ್ಮ ಡಾ: ರಾಜ್‌ಕುಮಾರ್‌ರವರು ಮನೆದೇವರು ಆಗಿರುವಂಥಾದ್ದು. ಈ ಎರಡೂ ವಿಶೇಷಗಳು ನನ್ನ ಕ್ಷೇತ್ರದಲ್ಲಿ ಆಗಿದೆ. ಇದು ನನಗೆ ಬಹಳ ಹೆಮ್ಮೆಯೆನಿಸುತ್ತದೆ, ಮೊದಲನೆಯದು ಡಾ: ರಾಜ್‌ಕುಮಾರ್‌ರವರನ್ನು ಪ್ರಥಮವಾಗಿ ಚಿತ್ರರಂಗಕ್ಕೆ ಪ್ರವೇಶ ಮಾಡಲು ಅನುವು ಮಾಡಿಕೊಟ್ಟಂಥವರು, ನಿರ್ದೇಶನವನ್ನು ಮಾಡಿದಂಥವರು ನಮ್ಮ ತಾಲ್ಲೂಕಿನ ಶ್ರೀ ಹೆಚ್.ಎಲ್.ಎನ್. ಸಿಂಹರವರು. ಇನ್ನೊಂದು ವಿಶೇಷವೆಂದರೆ ಡಾ: ರಾಜ್‌ಕುಮಾರ್‌ರವರ ಮನೆದೇವರು ಮಳವಳ್ಳಿ ತಾಲ್ಲೂಕಿನಲ್ಲಿ ಇರುವಂಥಾದ್ದನ್ನು ನಾವು ನೋಡುತ್ತೇವೆ. ಇನ್ನು ಡಾ: ರಾಜ್‌ಕುಮಾರ್‌ರವರು ಕೃಷ್ಣನ ಪಾತ್ರ, ಹಿರಣ್ಯಕಶ್ಯಪು ಪಾತ್ರಗಳು ಅದೇ ರೀತಿಯಲ್ಲಿ ಸೌಮ್ಯ ರೀತಿಯ ಪಾತ್ರಗಳು, ಉಗ್ರ ರೂಪದ ಪಾತ್ರಗಳು, ಹೀಗೆ ಎಲ್ಲಾ ರೀತಿಯ ಪಾತ್ರಗಳನ್ನು ಮಾಡಿ, ಈ ಕಲಾ ಜಗತ್ತಿಗೆ ಯಾರು ತುಂಬಲಾರದಂಥ ಒಂದು ಅನುಭವವನ್ನು, ಶ್ರೀಮಂತಿಕೆಯನ್ನು ಬೆಳೆಸಿ ಹೋಗಿರುವಂಥ ಡಾ: ರಾಜ್‌ಕುಮಾರ್‌ರವರು. ಇವರು ಕನ್ನಡದ ಬಗ್ಗೆ, ಕನ್ನಡ ಭಾಷೆಯ ಬಗ್ಗೆ, ಕನ್ನಡದ ನೆಲದ ಬಗ್ಗೆ, ಕನ್ನಡದ ಸಾಹಿತ್ಯದ ಬಗ್ಗೆ, ಹೆಚ್ಚು ಅಪಾರವಾದ ಕಾಳಜಿಯನ್ನು ಹೊಂದಿದಂತಹವರು. ಇವರನ್ನು ರಾಜಕೀಯ ಪ್ರವೇಶವನ್ನು ಮಾಡಬೇಕೆಂದು ಒತ್ತಾಯ ಬಂದಂಥ ಸಂದರ್ಭದಲ್ಲೂ ಕೂಡ, ಡಾ: ರಾಜ್‌ಕುಮಾರ್‌ರವರು ಇದಕ್ಕೆ ಕಿವಿಯನ್ನು ಕೊಡದೇ, ಕಲಾ ಜಗತ್ತಿನಲ್ಲಿ ಅವರು ಶ್ರೀಮಂತಿಕೆಯನ್ನು ಪ್ರದರ್ಶನ ಮಾಡಿ ಹೋಗಿರುವಂಥಾದ್ದು, ಇದನ್ನು ನಿಜವಾಗಿಯೂ ನಾವೆಲ್ಲರೂ ಮೆಚ್ಚಬೇಕಾಗುತ್ತದೆ. ಇವತ್ತು ನಾವು ಭಕ್ತ ಕುಂಬಾರ ಚಿತ್ರದಲ್ಲಿ ಭಕ್ತಿರಸ

ಪ್ರಧಾನವಾದಂಥ ಪಾತ್ರವನ್ನು ನೋಡುತ್ತೇವೆ. ಇವತ್ತು ಪಾಂಡುರಂಗನ ಹೆಸರಿನ ಮೇಲೆ, ಎರಡೂ ಕೈಗಳನ್ನು ಕತ್ತರಿಸಿಕೊಂಡು, ಹೆಂಡತಿ ಮತ್ತು ಮಗುವನ್ನು ಕಾಣದೇ ಇವತ್ತು ಹಿಂಸಿಸಿರುವಂಥಾದ್ದನ್ನು ನಾವು ನೋಡುತ್ತೇವೆ. ಇಲ್ಲಿ ದೇವರಿಗೋಸ್ಕರ, ಪಾಂಡುರಂಗನಿಗೋಸ್ಕರ, ಅಂದರೆ ಆ ದೇವರ ಭಕ್ತಿ, ಆ ದೈವ, ಅದು ಡಾ: ರಾಜ್‌ಕುಮಾರ್ ಅವರ ಮೇಲೆ ಎಷ್ಟು ಇತ್ತೆಂಬುದು, ನಾವು ಇವತ್ತು ಅದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಇವತ್ತು ಡಾ: ರಾಜ್‌ಕುಮಾರ್‌ರವರು ಅಷ್ಟೊಂದು ಎತ್ತರಕ್ಕೆ ಬೆಳೆಯಬೇಕಾದರೆ, ಶ್ರೀ ಪಿ.ಬಿ. ಶ್ರೀನಿವಾಸ್‌ರವರನ್ನು ಇವತ್ತು ನಾವು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಕಾರಣವೇನೆಂದರೆ, ಡಾ: ರಾಜ್‌ಕುಮಾರ್ ಶ್ರೀ ಪಿ.ಬಿ. ಶ್ರೀನಿವಾಸ್‌ರವರು ಹಿನ್ನಲೆ ಗಾಯಕರಾಗಿ ಹಾಡುವಂತಹ ಸಂದರ್ಭದಲ್ಲಿ, ಡಾ: ರಾಜ್‌ಕುಮಾರ್‌ರವರು ಯಾವ ರೀತಿಯಲ್ಲಿ ಡೈಲಾಗ್ ಅನ್ನು ಚಿತ್ರದಲ್ಲಿ ಹೇಳುತ್ತಾರೆ. ಆ ವಾಯ್ಸ್‌ಗೆ ತಕ್ಕ ಹಾಗೆ, ಶ್ರೀ ಪಿ.ಬಿ. ಶ್ರೀನಿವಾಸ್‌ರವರು ಹಿಮ್ಮೇಳವಾಗಿ ಹಾಡುತ್ತಿದ್ದಂಥ ಸಂದರ್ಭ ಡಾ: ರಾಜ್‌ಕುಮಾರ್‌ರವರು ಅಷ್ಟೊಂದು ಎತ್ತರಕ್ಕೆ ಬೆಳೆಯಲು ಶ್ರೀ ಪಿ.ಬಿ. ಶ್ರೀನಿವಾಸ್‌ರವರೂ ಕೂಡ ಸಹಕಾರಿಯಾಗಿದ್ದಾರೆ. ಅದೇ ರೀತಿಯಲ್ಲಿ ಮೂಲವಾದ ಕಪ್ಪು ಬಿಳುಪು ಚಿತ್ರಗಳಲ್ಲಿ, ಘಂಟಸಾಲರವರು ಹಾಡಿರುವಂತಹ ಹಾಡುಗಳು, ಕಾಳಿಂಗರಾವ್‌ರವರು ಹಾಡಿರುವಂತಹ ಹಾಡುಗಳು, ಈ ಎಲ್ಲಾ ಹಾಡುಗಳನ್ನು ಡಾ: ರಾಜ್‌ಕುಮಾರ್‌ರವರ ಅಭಿನಯದ ಚಿತ್ರಗಳಲ್ಲಿ ನಾವು ನೋಡಿದಾಗ, ಆ ಹಾಡುಗಳನ್ನು ಮತ್ತು ಡಾ: ರಾಜ್‌ಕುಮಾರ್‌ರವರು ಅಭಿನಯಿಸಿರುವಂತಹ ಕಪ್ಪು ಬಿಳುಪು ಚಿತ್ರಗಳನ್ನು ಸಂರಕ್ಷಣೆ ಮಾಡುವಂತಹ ಕೆಲಸವನ್ನು ಇವತ್ತು ನಮ್ಮ ಸರ್ಕಾರ ಮಾಡಬೇಕಾಗಿದೆ. ಈ ಚಿತ್ರಗಳು ಅಭಿರುಚಿ ಇರುವಂಥಾದ್ದು, ಮತ್ತೆ ಸಮಾಜವನ್ನು ಬದಲಾವಣೆ ಮಾಡುವಂಥಾದ್ದು, ಈ ಪಾತ್ರಗಳನ್ನು ಡಾ: ರಾಜ್‌ಕುಮಾರ್ ಕಪ್ಪು ಬಿಳುಪು ಚಿತ್ರಗಳಲ್ಲಿ ಮಾಡಿದ್ದರೆಂದರೆ, ನಿಜವಾಗಿಯೂ ನಾವು ಅದನ್ನು ಮೆಚ್ಚಿಕೊಳ್ಳಬೇಕಾಗಿದೆ. ಇವತ್ತು ಒಹಿಲೇಶ್ವರ ಚಿತ್ರವನ್ನು ನೋಡಿದಾಗ, ಕಸ್ತೂರಿ ನಿವಾಸ ಚಿತ್ರವನ್ನು ನೋಡಿದಾಗ, ಬಂಗಾರದ ಹೂವು ಸಿನಿಮಾಕ್ಕೆ ಪ್ರಶಸ್ತಿ ಸಿಕ್ಕಿರುವಂಥಾದ್ದನ್ನು ನಾವು ನೋಡಿದ್ದೇವೆ. ಇಂತಹ ಸಿನಿಮಾಗಳಲ್ಲಿ ನಟನೆ ಮಾಡಿದಂಥ ಕಲಾವಿದನನ್ನು ನಾವು ಕಳೆದುಕೊಂಡಿರುವಂಥಾದ್ದು, ನಿಜವಾಗಿಯೂ ನಮಗೆಲ್ಲರಿಗೂ ಭರಿಸಲಾಗದಂಥ ನಷ್ಟವಾಗಿದೆ. ಇದರ ಜೊತೆಗೆ ಅವರು ಹಾಡಿರುವಂತಹ ಭಾವ ಗೀತೆಗಳು ಇದು ಕನ್ನಡದ ಬಗ್ಗೆ ಹಾಡಿರುವಂತಹ ಭಾವಗೀತೆಗಳು, ಮತ್ತೆ ಇವರು ಭಕ್ತಿ ಗೀತೆಗೆ ಜೀವ ತುಂಬುತ್ತಿದ್ದಂಥಾದ್ದು, ನಿಜವಾಗಿಯೂ ಅದು ಅದ್ಭುತವಾದದ್ದು, ಅದನ್ನು ನಾವು ಇವತ್ತು ನೆನಪು ಮಾಡಿಕೊಳ್ಳಬೇಕಾಗಿದೆ. ಇವತ್ತು ಕುವೆಂಪುರವರ ಕವನಗಳಿಗೆ ರಾಗಗಳನ್ನು ಸಂಯೋಜನೆ ಮಾಡಿ ಹಾಡಿರುವಂಥಾದ್ದು, ಮೂರನೆಯ ತರಗತಿಯನ್ನು

ಓದಿರುವಂತಹ ಒಬ್ಬ ಮಹಾನ್ ಕಲಾವಿದ, ಇವತ್ತು ಶಾಸ್ತ್ರೀಯ ಸಂಗೀತವನ್ನು ಹಾಡಿರುವಂಥಾ, ವೀಣೆಯನ್ನು ನುಡಿಸುವ ಮಟ್ಟಕ್ಕೆ ಹೋದರೂ ಎಂದರೆ, ನಿಜವಾಗಿಯೂ ಇದು ಕಡಿಮೆಯಾದ ಸಾಧನೆ ಏನೂ ಅಲ್ಲ. ಈ ಸಾಧನೆಯನ್ನು ನಾವೆಲ್ಲರೂ ಇವತ್ತು ನೆನಪು ಮಾಡಿಕೊಳ್ಳಬೇಕಾಗಿದೆ. ಇದರ ಜೊತೆಗೆ ಡಾ: ರಾಜ್‌ಕುಮಾರ್‌ರವರು ನಾವು ಮನುಷ್ಯರು, ಮನುಷ್ಯರನ್ನಾಗಿ ನಡೆದುಕೊಳ್ಳುವಂಥಾದ್ದು, ಮತ್ತೆ ಮನುಷ್ಯರಾಗಿ ನಾವು ಯಾವ ರೀತಿಯಲ್ಲಿ ಬದುಕಬೇಕೆನ್ನುವಂಥಾದ್ದನ್ನು, ಈ ಕಲಾ ಜಗತ್ತಿಗೆ ಮತ್ತೆ ಈ ಸಮಾಜಕ್ಕೆ ತಿಳಿಸಿಕೊಟ್ಟಂಥ ಕಲಾವಿದರು ಆಗಿದ್ದಾರೆ. ಅದರ ಜೊತೆಗೆ ಚಿತ್ರ ತಂಡ. ಚಿತ್ರ ತಂಡದಲ್ಲೂ ಕೂಡ ಅವರು ಹೆಚ್ಚಿನ ರೀತಿಯಾದಂಥ ಸಹಕಾರವನ್ನು ಕೊಟ್ಟು, ಅವರಿಗೆ ಒಳ್ಳೆಯ ಗೌರವವನ್ನು ಕೊಟ್ಟು ನಡೆಸಿಕೊಳ್ಳುತ್ತಿದ್ದಂಥ ಸಂದರ್ಭಗಳನ್ನೂ ಕೂಡ ಇವತ್ತು ನಾವು ನೋಡುತ್ತೇವೆ. ಅದರ ಜೊತೆಗೆ ಡಾ: ರಾಜ್‌ಕುಮಾರ್‌ರವರು ಇಷ್ಟೆಲ್ಲ ಮೇರು ಎತ್ತರಕ್ಕೆ ಬೆಳೆಯಬೇಕಾದರೆ, ಅವರ ಪತ್ನಿಯವರಾದ ಪಾರ್ವತಮ್ಮನವರು ಅವರ ಬೆನ್ನಲ್ಲಿ ಬೆನ್ನಿಟ್ಟು ಕಾದು, ಅವರನ್ನು ಒಳ್ಳೆಯ ರೀತಿಯ ಕಲಾವಿದನನ್ನಾಗಿ ರೂಪಿಸಲಿಕ್ಕೆ, ಇವತ್ತು ಈ ರಾಜ್ಯದಲ್ಲಿ ಹಾಗೂ ದೇಶದಲ್ಲಿ ಒಬ್ಬ ಒಳ್ಳೆಯ ಕಲಾವಿದನನ್ನಾಗಿ ಮಾಡಲಿಕ್ಕೆ ಪ್ರಯತ್ನವನ್ನು ಮಾಡಿದ್ದಾರೆ. ನಮ್ಮ ಹಿರಿಯ ನಾಯಕರುಗಳು ಮತ್ತು ವಾಟಾಳ್ ನಾಗರಾಜ್‌ರವರು ವಿಶೇಷವಾಗಿ ಅವರ ಬಗ್ಗೆ ಮಾತನಾಡಿದ್ದಾರೆ. ಡಾ: ರಾಜ್‌ಕುಮಾರ್ ವಾಟಾಳ್ ನಾಗರಾಜ್‌ರವರ ಜಿಲ್ಲೆಯವರು. ಅವರುಗಳು ಡಾ: ರಾಜ್‌ಕುಮಾರ್‌ರವರ ಬಗ್ಗೆ ಎಲ್ಲ ಹೇಳಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ಅದರ ಜೊತೆಗೆ, ಅವರ ಕಪ್ಪು ಬಿಳುಪಿನ ಚಿತ್ರಗಳ ಹಾಡುಗಳೆಂದರೆ ನನಗೆ ಬಹಳ ಇಷ್ಟ, ಪಂಚಪ್ರಾಣ. ನಾನು ಒಬ್ಬ ಹಾಡುಗಾರನಾಗಿ ಅವರ ಕಪ್ಪು ಬಿಳುಪು ಚಿತ್ರಗಳಲ್ಲಿರತಕ್ಕಂಥ ಹಾಡುಗಳನ್ನು ಹಾಡಬೇಕೆಂದರೆ ನನಗೆ ಎಲ್ಲಿಲ್ಲದ ಸಂತೋಷ ಮತ್ತು ಆ ಹಾಡುಗಳನ್ನು ಹಾಡುವಾಗ ನನಗೆ ಬಹಳ ಆತ್ಮತೃಪ್ತಿಯಾಗುತ್ತದೆ. ಹಾಗಾಗಿ ಡಾ: ರಾಜ್‌ಕುಮಾರ್‌ರವರ ಓಹಿಲೇಶ್ವರ ಚಿತ್ರದ ಹಾಡಿನ ಒಂದು ಸಾಲನ್ನು ಹಾಡಿ ನನ್ನ ಮಾತನ್ನು ಮುಗಿಸುತ್ತೇನೆ.

"ಹೇ ಶಂಕರಾ ದಯಾನಿದೇ, ಈ ದೇಹದಿಂದ ದೂರನಾದೆ ಏಕೆ ಆತ್ಮನೇ,
ಈ ಸಾವು ನ್ಯಾಯವೇ? ಅಧಾರ ನೀನೆಂದು ಈ ಲೋಕ ನಂಬಿದೇ,
ಈ ದೇಹದಿಂದ ದೂರನಾದೆ ಏಕೆ ಆತ್ಮನೇ, ಈ ಸಾವು ನ್ಯಾಯವೇ?"

ನಮಸ್ಕಾರ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ರಾಜ್‌ಕುಮಾರ್‌ರವರ ಬಗ್ಗೆ ನಮಗೆ ಬಹಳ ಗೌರವವಿದೆ. ಸಂತಾಪ ಸೂಚನೆ ಮಾಡುವಾಗ ಹೀಗೆಲ್ಲಾ ಮಾಡಿದರೆ ಹೇಗೆ? ಇದನ್ನೆಲ್ಲ ಹೊರಗಡೆ ಮಾಡಬೇಕು ಇದೇನಿದು?

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೇ, ಏನಿದು? ಇದು ಶ್ರದ್ಧಾಂಜಲಿಯೋ, ಏನು? ಅವರ ಹಾಡು, ಅವರ ಕಲೆ ತೋರಿಸುವುದಕ್ಕೆ ಸ್ಥಳವಲ್ಲ. ಸಭೆಗೆ ಗೌರವ ತರತಕ್ಕಂತಹ ವಿಷಯಾನ ಇದು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇದೇನು, ವಿಧಾನಸಭೆಯೋ ಏನಿದು? ವಿಧಾನಸಭೆಗೆ, ಸದನಕ್ಕೆ ಈ ಗತಿ ಬಂತಲ್ಲ. ಏನು ಮಾಡುವುದು ನಾವು?

ಶ್ರೀ ಕೆ. ಶ್ರೀನಿವಾಸಗೌಡ: ನಾವೆಲ್ಲ ನಾಚಿಕೊಳ್ಳಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ಇದರಿಂದ ತಪ್ಪು ಮೆಸೇಜ್ ಹೋಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ: ಅವರು ಥಿಯೇಟರ್‌ಗಳಿಗೆ ಹೋಗಿ ಹಾಡಲಿ. ಥಿಯೇಟರ್‌ಗಳಿಗೆ ಹೋಗಿ ಕುಳಿತುಕೊಂಡು ಅವರಿಗೆ ಎಂಥ ಹಾಡು ಬೇಕೋ, ಅದನ್ನು ಹಾಡಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ವಿಧಾನಸಭೆಗೆ ಈ ಸ್ಥಿತಿ ತಂದಿಟ್ಟರಲ್ಲಾ? ಇದೇನು ವಿಧಾನಸಭೆಯೋ ಅಥವಾ ಸಂಗೀತ ಕಛೇರಿಯೇ?

ಶ್ರೀ ಕೆ. ಶ್ರೀನಿವಾಸಗೌಡ: ಇದೇನು ಶ್ರದ್ಧಾಂಜಲಿ ಸಭೆಯೇ? ಶ್ರದ್ಧಾಂಜಲಿ ಸಭೆಗೆ ಗೌರವ ಬರುವುದು ಬೇಡವೇ? ಅವರು ನಾಚಿಕೊಳ್ಳಬೇಕು.

ಅಧ್ಯಕ್ಷರು: ಆಯಿತು, ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಅನ್ನದಾನಿಯವರೇ, ನೀವು ಮುಗಿಸಿಬಿಡಿ. ಅನ್ನದಾನಿಯವರೇ, ನೀವು ನಿಮ್ಮ ಭಕ್ತಿಯಲ್ಲಿ ಹೇಳಿದ್ದೀರಿ. ಆದರೆ ನೀವು ಸಂತಾಪ ಸೂಚನೆಗೆ ಸೀಮಿತವಾಗಿ ಮಾತನಾಡಬೇಕು.

ಶ್ರೀ ಕೆ. ಅನ್ನದಾನಿ: ಮಾನ್ಯ ಅಧ್ಯಕ್ಷರೆ, ನಾನು ಡಾ: ರಾಜ್‌ಕುಮಾರ್‌ರವನ್ನು ನೆನೆಸಿಕೊಳ್ಳುವಂಥ ಸಂದರ್ಭದಲ್ಲಿ ಈ ನಾಡಿನ ಸಂಸ್ಕೃತಿಯನ್ನು ಉಳಿಸಬೇಕೆಂದು ಹೇಳಿ, ಈ ನಾಡಿನ ಸಂಗೀತವನ್ನು ಎತ್ತಿ ಹಿಡಿಯಬೇಕು ಎಂದು ಹೇಳಿ ಈ ಸಭೆಯಲ್ಲಿ ಹಾಡಿದ್ದೇನೆ. ಪದಗಳ ಬಳಕೆಯಲ್ಲಿ ಏನಾದರೂ ತಪ್ಪಾಗಿದ್ದರೆ, ಮತ್ತು ನಾನೇನಾದರೂ ಈ ಸದನದಲ್ಲಿ ಬಳಸಬಾರದಂಥ ಪದ ಬಳಸಿದ್ದರೆ ದಯಮಾಡಿ ತಮ್ಮ ಕ್ಷಮೆಯನ್ನು ಕೋರುತ್ತೇನೆ. ಇವತ್ತು ಡಾ: ರಾಜ್‌ಕುಮಾರ್‌ರವರನ್ನು ನೆನೆಸಿಕೊಳ್ಳಬೇಕಾದರೆ, ಅವರನ್ನು ಬರೀ ಹೊಗಳತಕ್ಕಂಥಾದ್ದು ಅಥವಾ ಅವರ ಬಗ್ಗೆ ಮಾತನಾಡತಕ್ಕಂಥಾದ್ದರ ಜೊತೆಗೆ ಅವರು ಹೇಗೆ ಅಭಿನಯ ಮಾಡುತ್ತಿದ್ದರು ಮತ್ತು ಅವರ ಸಂಗೀತವನ್ನು ಹೇಗೆ ಹಾಡುತ್ತಿದ್ದರು ಎನ್ನತಕ್ಕಂಥಾದ್ದನ್ನು ಈ ಸದನದಲ್ಲಿ ಹೇಳುವುದು ತಪ್ಪು ಎಂದರೆ, ಅದು ನಿಜವಾಗಿಯೂ ಕೂಡ ಈ ನಾಡಿಗೆ ಮತ್ತು ಡಾ: ರಾಜ್‌ಕುಮಾರ್‌ರವರಿಗೆ ಮಾಡತಕ್ಕಂಥ ಅವಮಾನ ಎಂದು ನಾನು ಈ ಸಭೆಯಲ್ಲಿ ಭಾವಿಸುತ್ತೇನೆ.

ಅಧ್ಯಕ್ಷರು: ಸಂತಾಪ ಸೂಚನೆಯ ಸಂದರ್ಭದಲ್ಲಿ ಅವರಿಗೆ ಗೌರವ ಸೂಚಿಸತಕ್ಕಂಥಾದ್ದರಲ್ಲಿ ನೀವು ನಿಮ್ಮದೇ ಆದ ಚೌಕಟ್ಟನ್ನು ಹಾಕಿಕೊಂಡು ಮಾತನಾಡಬೇಕು ಎನ್ನುವುದು ಅವರ ಭಾವನೆ. ಆಯಿತು, ಈಗ ನೀವು ಮುಗಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರು ಮುಗಿಸಿಯಾಯಿತಲ್ಲ.

ಅಧ್ಯಕ್ಷರು: ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಸದನದ ಎಲ್ಲ ಸದಸ್ಯರುಗಳು ಎದ್ದುನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಿದರು. ಹಾಗೂ ಸದನ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲು ತೀರ್ಮಾನಿಸಿತು)

2. ಪ್ರಕಟಣೆ.

ವಿಧಾನಪರಿಷತ್ತಿನ ಸಭಾಪತಿಯವರು 1.30 ಗಂಟೆಗೆ ಸದಸ್ಯರುಗಳ ಗೌರವಾರ್ಥ ಭೋಜನಕೂಟ ಏರ್ಪಡಿಸಿರುವ ಬಗ್ಗೆ.

ಅಧ್ಯಕ್ಷರು: ಒಂದು ಪ್ರಕಟಣೆ ಇದೆ. ಮೇಲ್ಮನೆಯ ಸಭಾಪತಿಯವರಾದ ಮಾನ್ಯ ಸುದರ್ಶನ್‌ರವರು ಈ ದಿನ ಮಧ್ಯಾಹ್ನ ಒಂದೂವರೆ ಗಂಟೆಗೆ ಬ್ಯಾಂಕ್ವೆಟ್ ಹಾಲಿನಲ್ಲಿ ಸದಸ್ಯರ ಗೌರವಾರ್ಥ ಒಂದು ಭೋಜನ ಕೂಟವನ್ನು ಏರ್ಪಾಡು ಮಾಡಿದ್ದಾರೆ. ಅದರಲ್ಲಿ ಎಲ್ಲ ಸದಸ್ಯರು ಭಾಗವಹಿಸಬೇಕು ಎಂದು ಅವರು ವಿನಂತಿ ಮಾಡಿಕೊಂಡಿದ್ದಾರೆ.

ಎಲ್ಲ ಮೃತರ ಗೌರವಾರ್ಥವಾಗಿ ಈಗ ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 12.25ಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 06–06–06ರ ಮಂಗಳವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ತೀರ್ಮಾನಿಸಿತು)